
ಜನಶಕ್ತಿ

ಕನ್ನಡ ವಾರಪತ್ರಿಕೆ

Blog janashakthi.wordpress.com e-mail js_weekly@yahoo.com

ಸಂಪುಟ 7 ಸಂಚಿಕೆ 38
ಸೆಪ್ಟೆಂಬರ್ 22, 2013 ಪುಟ 16 ರೂ. 10/-





ನಲುಮೆಯ ಮಾಸ್ತ್ರ : ಪಿ. ರಾಮಚಂದ್ರ ರಾವ್



'ಮುಜಫರ್ ನಗರ' ಒಂದು ಎಚ್ಚರಿಕೆಯ ಗಂಟೆ



ಸಿರಿಯಾ ಆಕ್ರಮಣಕ್ಕೆ ಸದ್ಯದ ತಡೆ

₹ ಸೊರಗುತ್ತಿದೆ ರೂಪಾಯಿ

ನಬಾರ್ಡ್ ಸುತ್ತೋಲೆ ತಡೆಹಿಡಿದು ಕಾಪಾಡಬೇಕು ಕೃಷಿ ಸಹಕಾರಿ ಸಂಘಗಳನು

ಯುರೋಪಿಯನ್ ಆರ್ಥಿಕತೆಯಲ್ಲಿ ಗಂಭೀರ ಬಿಕ್ಕಟ್ಟು

ಯುರೋಪಿನ ಜನತೆ ಇಂದು ಗಂಭೀರ ಆರ್ಥಿಕ ಬಿಕ್ಕಟ್ಟಿನಲ್ಲಿ ನಲುಗಿದೆ. ದೇಶ ದೇಶಗಳು ತಲೆಯ ಮೇಲೆ ಸಾಲದ ಬೆಟ್ಟವನ್ನು ಹೊತ್ತುಕೊಂಡು ನರಳುತ್ತಿವೆ. ದೇಶದ ಸಾಲದ ಭಾರವನ್ನು ನಿಜಕ್ಕೂ ಹೊರುವವರು ಯಾರು ? ಈ ಸಾಲ ಬಾಧೆಗೆ ಸೂಚಿಸಲಾಗುತ್ತಿರುವ ಪರಿಹಾರವೇನು ? ಸಮಸ್ಯೆಗೆ ನಿಜವಾದ ಪರಿಹಾರದ ದಾರಿ ಯಾವುದು ? ಓದಿ.



ಎಂ. ರತ್ನಾಕರ ಶೆಣೈ. ಭಾಗ-5

ಸಾಲ ಬೆಟ್ಟದ ಭಾರ ಜನರ ತಲೆಯ ಮೇಲೆ

ಈ ವರ್ಷದ ಮಾರ್ಚ್ ತಿಂಗಳ ಅಂತ್ಯಕ್ಕೆ ಯೂರೋಪಿಯನ್ ಸಮುದಾಯದ 27 ದೇಶಗಳ (ಇತ್ತೀಚೆಗೆ ಕ್ರೋಷಿಯಾ ಸೇರ್ಪಡೆಯಾಗುವುದರೊಂದಿಗೆ ಈ ಸಂಖ್ಯೆ 28 ಕ್ಕೇರಿದೆ) ಒಟ್ಟು ಸಾಲ ಅವುಗಳ ವಾರ್ಷಿಕ ನಿವ್ವಳ ಉತ್ಪನ್ನದ ಶೇ. 85.9 ಕ್ಕೆ ಏರಿದೆ. ಅಂದರೆ ಸರಿಸುಮಾರು 14,470 ಬಿಲಿಯ ಡಾಲರುಗಳು (ಒಂದು ಬಿಲಿಯ ಡಾಲರ್ ಅಂದರೆ ಈಗಿನ ಲೆಕ್ಕದಲ್ಲಿ ಸು. 6,300 ಕೋಟಿ ರೂಪಾಯಿಗಳು). ಕಳೆದ ವರ್ಷ ಇದರ ಪ್ರಮಾಣ ಶೇ. 83.3 ರಷ್ಟಿತ್ತು (ಸು. 13,900 ಬಿಲಿಯ ಡಾಲರುಗಳು). ಯೂರೋವಲಯದ 17 ದೇಶಗಳ ಸಾಲದ ಹೊರೆ ಶೇ 92.2 ಕ್ಕೆ ಏರಿದೆ. ಕಳೆದ ವರ್ಷ ಇದು ಶೇ 88.2 ರಷ್ಟಿತ್ತು. ಇದು ಈ 17 ದೇಶಗಳ ಸರಾಸರಿ. ಗ್ರೀಸ್ ದೇಶ ಸಹಜವಾಗಿಯೇ ಬಹಳ ಮುಂದಿದೆ. ಅದರ ಸಾಲದ ಪ್ರಮಾಣ ಶೇ 161.3 ರಷ್ಟು (ಲೆಕ್ಕಾಚಾರ ಹಾಕಿದರೆ ಪ್ರತಿಯೊಬ್ಬ ಗ್ರೀಕ್ ಪ್ರಜೆಯ ಮೇಲೆ ಸುಮಾರು ಇಪ್ಪತ್ನಾಲ್ಕು ಲಕ್ಷದ ಐವತ್ತೈದು ಸಾವಿರ ರೂಪಾಯಿಗಳು!). ನಂತರದ ಸ್ಥಾನ ಇಟಲಿಯದ್ದು ಶೇ.126.1 ರಷ್ಟು ಸಾಲ. ಪೋರ್ಚುಗಲ್ (ಶೇ.123.6), ಐರ್ಲ್ಯಾಂಡ್ (ಶೇ. 118) ಗಳೂ ಸಹ ಈ ದಿಟ್ಟಿನಲ್ಲಿ ಧಾಪುಗಾಲು ಹಾಕುತ್ತಿವೆ.

ಇಷ್ಟೆಲ್ಲಾ ಸಾಲದ ಹೊರೆಯನ್ನು ನಿಭಾಯಿಸುವುದಾದರೂ ಹೇಗೆ ಎಂಬ ಪ್ರಶ್ನೆಗೆ, ಐಎಂಎಫ್ ಮತ್ತದರ ದುಷ್ಟಕೂಟಗಳು ತಾವು ಹಾಕಿರುವ ಶರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಮೂಲಕವೇ ಎಂದು ಉತ್ತರ ನೀಡುವುದನ್ನು ಬಿಟ್ಟಿಲ್ಲ. ಅಂದರೆ ಆ ಸಾಲದ ಹೊರೆಯನ್ನು ಸಂಪೂರ್ಣವಾಗಿ ಜನರ ಮೇಲೆ ಹಾಕುವುದು. ಅಂದಮೇಲೆ ಸಾಲದ ಹೆಚ್ಚಳಗಳಿಂದಾಗಿ ತೆರಿಗೆಗಳ ಹೆಚ್ಚಳ; ಜತೆಗೆ ಬೆಲೆಗಳ ಹೆಚ್ಚಳವೂ ಸಹ. ಉದ್ಯೋಗಿಗಳಿಗೆ ವೇತನ ಕಡಿತ; ಅಲ್ಲದೆ ಉದ್ಯೋಗದ ಕಡಿತ ಕೂಡಾ. ಶ್ರೀಮಂತರನ್ನೂ ಬಿಟ್ಟಿಲ್ಲ; ಅವರ ಪಾಲಿಗೂ ಕಡಿತವಿದೆ. ವರಮಾನ ತೆರಿಗೆಯ ಕಡಿತ! ಪಾಪ, ಅವರು ಬದುಕಬೇಡವೆ? ಅವರ ಆದಾಯ ಕಳೆದ ವರ್ಷ ಹೆಚ್ಚಾಗದೇ ಇನ್ನೇನಾಗಲು ತಾನೇ ಸಾಧ್ಯವಿತ್ತು?.

ಹಿಂದಿನ ಸಮಾಜವಾದೀ ಬಣದಲ್ಲಿದ್ದ ದೇಶಗಳ ಪಾಡಂತೂ ಶೋಚನೀಯ. ಸಮಾಜವಾದವನ್ನು ತಿರಸ್ಕರಿಸಿ ಬಂಡವಾಳಶಾಹಿ ನೀತಿಗಳನ್ನು ಅಳವಡಿಸಿಕೊಂಡಿರುವ ಈ ದೇಶಗಳು ಅತ್ತ ಬೆಳೆಯಲೂ ಇಲ್ಲ. ಇತ್ತ ತಮ್ಮ ಜನಗಳಿಗೆ ಕೊಟ್ಟ ಭರವಸೆಗಳನ್ನು ಸ್ವಲ್ಪ ಮಟ್ಟಿಗಾದರೂ ಈಡೇರಿಸುವ ಪರಿಸ್ಥಿತಿಯಲ್ಲೂ ಇಲ್ಲ. ಕ್ರೋಷಿಯಾದ ಉದಾಹರಣೆಯನ್ನೇ ತೆಗೆದುಕೊಳ್ಳಿ. 1990 ರಲ್ಲಿ ಆಗಿನ ಯೂಗೋಸ್ಲಾವಿಯಾದಿಂದ ಪ್ರತ್ಯೇಕಗೊಂಡು ಸ್ವತಂತ್ರ ದೇಶವಾದ ಕ್ರೋಷಿಯಾದ ಪಾಲಿನ ವಿದೇಶೀ ಸಾಲದ ಮೊತ್ತ ಸುಮಾರು 3 ಬಿಲಿಯನ್ ಡಾಲರುಗಳಷ್ಟು. ಈಗ ಈ ಸಾಲ 60 ಬಿಲಿಯನ್ ಡಾಲರ್‌ಗಳಾಷ್ಟಾಗಿಧೆ. ಒಂದು ಕಾಲದಲ್ಲಿ ಯೋಗೋಸ್ಲಾವಿಯಾದ ಅತ್ಯಂತ ಜನಭರಿತ ಮತ್ತು ಮುಂದುವರಿದ ಪ್ರದೇಶವಾಗಿದ್ದ ಕ್ರೋಷಿಯಾದಲ್ಲಿಂದು ಯಾವುದೇ ಕೈಗಾರಿಕೆಗಳಿಲ್ಲ! ನಿರುದ್ಯೋಗದ ಪ್ರಮಾಣ ಶೇ. 19 ರಷ್ಟು! ತೈಲ ಸಂಸ್ಥೆಗಳು, ಔಷಧಿ ತಯಾರಿಕಾ ಮತ್ತು ದೂರ ಸಂಪರ್ಕ ಸಂಸ್ಥೆಗಳನ್ನು ಖಾಸಗೀಕರಿಸಿದ ಸರ್ಕಾರ ಇದೀಗ "ಆರ್ಥಿಕ ಪುನರುತ್ಥಾನದ ಕಾರ್ಯಕ್ರಮ"ದ ಹೆಸರಿನಲ್ಲಿ ವಿದ್ಯುತ್, ಅರಣ್ಯ ಹಾಗೂ ಜಲ ಸಂಪನ್ಮೂಲಗಳು, ರೈಲ್ವೇಗಳನ್ನು ಖಾಸಗೀಕರಣಗೊಳಿಸುವತ್ತ ಧಾಪುಗಾಲು ಇಡುತ್ತಿದೆ. ಸಾಲದ್ದಕ್ಕೆ ಉದ್ಯೋಗಗಳಲ್ಲಿ ಶೇ.5 ರಷ್ಟು ಮತ್ತು ವೇತನದಲ್ಲಿ ಶೇ.10 ರಷ್ಟು ಇನ್ನೊಂದು ಕಂತಿನ ಉಡುಗೊರೆಯನ್ನೂ ನೀಡಿದೆ. ದುರಂತದ ಸಂಗತಿಯೆಂದರೆ ಈ ದೇಶದ ಬ್ಯಾಂಕಿಂಗ್ ವ್ಯವಹಾರದಲ್ಲಿ ವಿದೇಶಿ ಬ್ಯಾಂಕುಗಳ ಪಾಲು ಶೇ.90 ರಷ್ಟು. (ಬೋಸ್ನಿಯಾ ಮತ್ತು ಹರ್ಜೆಗೋವಿನಾದಲ್ಲಿ ಇದರ ಪಾಲು ಶೇ.95 ರಷ್ಟಿದೆ). ಒಂದು ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇಷ್ಟು ದೊಡ್ಡ ಪ್ರಮಾಣದ ವಿದೇಶಿ ಹಿಡಿತ ಹಾಗೂ ಒಡೆತನ ಇರುವುದೆಂದರೆ ಅದರ ಆರ್ಥಿಕ ಸಾರ್ವಭೌಮತೆಯನ್ನು ಒತ್ತೆ ಇಟ್ಟಂತೆಯೆ). ಇದೆಲ್ಲದರ ನಡುವೆ ಮಿತಿಮೀರಿದ ಭ್ರಷ್ಟಾಚಾರ ಮತ್ತು ಲೂಟಿ ಬೇರೆ. ಯೂರೋಪಿಯನ್ ಸಮುದಾಯದ ನಾಯಕರಿಂದ ಸಿಕ್ಕಾಪಟ್ಟೆ ಹೊಗಳಿಸಿಕೊಳ್ಳುತ್ತಿದ್ದ ಕ್ರೋಷಿಯಾದ ಮಾಜಿ ಪ್ರಧಾನಿ ಇವೋ ಸ್ಯಾಂಡರ್ಸ್ ಇಂದು ವ್ಯಾಪಕ ಭ್ರಷ್ಟಾಚಾರದ ಆಪಾದನೆಯಲ್ಲಿ ಜೈಲಿನಲ್ಲಿದ್ದಾನೆ!. 'ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತೇವೆ' ಎಂದು ಬೊಗಳೆ ಬಿಟ್ಟು ಆಡಳಿತದ ಚುಕ್ಕಾಣಿ ಹಿಡಿದ ಆಳುವ ಜನ ಇಂದು ಕೊಟ್ಟಿರುವುದು ಪ್ರತಿಯೊಬ್ಬ ಬಡಪಾಯಿ ಪ್ರಜೆಯ ಮೇಲೆ ಸುಮಾರು 8.81 ಲಕ್ಷ ರೂಪಾಯಿಗಳಷ್ಟು ಸಾಲದ ಹೊರೆ. ನಮ್ಮ ಬೆಂಗಳೂರಿನ ಸುಮಾರು ಅರ್ಧದಷ್ಟು ಜನಸಂಖ್ಯೆ ಈ ದೇಶದ್ದು; ಸುಮಾರು 43 ಲಕ್ಷ. ಇದರ ಆರ್ಥಿಕತೆ 2009 ರಲ್ಲಿ ಶೇ. 5.6 ರಷ್ಟು ಕುಸಿದಿದ್ದರೆ 2010 ರಲ್ಲಿ ಶೇ. 7.1 ರಷ್ಟು ಕುಸಿದಿದೆ.

ಝೆಕ್ ಗಣರಾಜ್ಯದ್ದೂ ಹೆಚ್ಚು ಕಡಿಮೆ ಇದೇ ದುಃಸ್ಥಿತಿ. 17.6.2013 ರಂದು ಪ್ರಧಾನಿ ಪೀಟರ್ ನೆಕಾಸ್ ನೇತೃತ್ವದ ಸರ್ಕಾರ ರಾಜೀನಾಮೆ ಕೊಟ್ಟಿದೆ. ಇದಕ್ಕೂ ಮುನ್ನ 13.06.2013 ರಂದು ಅಲ್ಲಿನ ಅಪರಾಧ ತನಿಖಾದಳ ಸಚಿವ ಸಂಪುಟದ ಅಧಿಕೃತ ಕಛೇರಿ ಹಾಗೂ ಅನೇಕ ಸಚಿವರ, ರಾಜಕೀಯ ನಾಯಕರ, ವ್ಯವಹಾರ ಸಂಸ್ಥೆಗಳ ಕಛೇರಿಗಳ ಮೇಲೆ ಧಾಳಿ ನಡೆಸಿ ಅಪಾರ ಪ್ರಮಾಣದ ಕಳ್ಳ ಸಂಪತ್ತನ್ನು ಪತ್ತೆ ಹಚ್ಚಿತ್ತು. ಹೇರಳವಾದ ಈ ಸಂಪತ್ತು ಚಿನ್ನ ಹಾಗೂ ನಗದಿನ ರೂಪದಲ್ಲಿದ್ದು, ಅಷ್ಟನ್ನೆಲ್ಲಾ ಪ್ರತ್ಯೇಕವಾಗಿ ಇಡಲು ಒಂದು ಇಡೀ ಬ್ಯಾಂಕನ್ನೇ ಬಳಸಲಾಗಿತ್ತು!

ಬಲ್ಗೇರಿಯಾದ್ದು ಇನ್ನೊಂದು ಕತೆ. "ನಾವು ಸದೃಢತೆಯ ಅಖಂಡ ದ್ವೀಪ" ಎಂದು ಅದರ ಅಧ್ಯಕ್ಷ ರೊಸೆನ್ ಪ್ಲೆವ್‌ನೆಲಿವ್ ಕೊಚ್ಚಿಕೊಂಡಿದ್ದನ್ನು ಫೈನಾನ್ಷಿಯಲ್ ಟೈಮ್ಸ್ 5.12.2012 ರಂದು ವರದಿಮಾಡಿತ್ತು. ಅದಾದ ಎರಡು ತಿಂಗಳಲ್ಲೇ ಅಂದರೆ 2013ರ ಜನವ ತಿಂಗಳ ಮೊದಲಲ್ಲಿ ವಿದ್ಯುತ್ ಹಾಗೂ ಗ್ಯಾ ದರಗಳನ್ನು ಸರ್ಕಾರ ಶೇ.50 ರಿಂದ ಶೇ.10 ರಷ್ಟು ಏರಿಸಿತು. ಅದನ್ನು ವಿರೋಧಿಸಿ ಭಾರಿ ಪ್ರತಿಭಟನೆಗಳಾದವು. ಈ ಜನಾಂದೋಲ ವ್ಯಾಪಿಸುತ್ತಿದ್ದಂತೆ 18.02.2013 ರಂದ ಆರ್ಥಿಕ ಸಚಿವ ರಾಜೀನಾಮೆ ಕೊಟ್ಟು ನಡೆ 19.02.2013 ರಂದು ದೇಶದ ಪ್ರಧಾನಿ ಬೊ ಕೊ ಬೊರಿಸೊವ್ ವಿದ್ಯುತ್ ದರ ಏರಿಕೆಯ ಶೇ.8 ರಷ್ಟನ್ನು ಕಡಿಮೆ ಮಾಡುವ ಭರವ ನೀಡುತ್ತಲೇ, ತಾವು ರಾಜೀನಾಮೆ ನೀಡು ಪ್ರಶ್ನೆಯೇ ಇಲ್ಲ ಎಂದು ಘೋಷಿಸಿದ ಆದರೆ ಮಾರನೆಯ ದಿನವೇ, ಮೂರ ವರ್ಷಗಳ ಆಡಳಿತೆಯ ನಂತರ ಪ್ರಧಾ ರಾಜೀನಾಮೆ ನೀಡುವುದರೊಂದಿ ಸರ್ಕಾರ ಉರುಳಿಬಿತ್ತು ಯೂರೋವಲಯದ ಸರಾಸ ಜೀವನಮಟ್ಟದ ಕೇವಲ 45 ರಷ್ಟನ್ನು ಮಾತ್ರ ಕೊಡಮಾಡಿರು ಇಂತಹ ಸರ್ಕಾರದ ವಿರುದ್ಧ ಜ ರೊಚ್ಚಿಗೆದ್ದಿರುವುದು ಸಹಜ ತಾನೆ



ಪೋಲಾಂಡಿನದ್ದು ಮತ್ತೊಂ ಕತೆ. 1989 ಕ್ಕೂ ಹಿಂದಿನ ಸಮಾಜವಾದೀ ಸರ್ಕಾರದ ವಿರುದ್ಧ ದೊಡ್ಡ ಹೋರಾಟ ನಡೆಸಿದ್ದು ಸಾಲಿಡಾರಿಟಿ ಎಂಬ ಸ್ವತಂತ್ರ ಕಾರ್ಮಿಕ ಸಂಘಟನೆ ಲೆಕ್ ವ್ಯಾಲೇಸಾ ಅದರ ನಾಯಕ 1989 ರಲ್ಲಿ ಸರ್ಕಾರವನ್ನು ಉರುಳಿಸಿ ಮುಕ್ತ ಮಾರುಕಟ್ಟೆಯ ನೀತಿಗಳನ್ನು ವ್ಯಾಪಕವಾಗಿ ಜಾರಿಗೆ ತಂದ ಲೆಸ್ಜಕ್ ಬಸೆರೊವಿಚ್‌ನ ಸರ್ಕಾರದಲ್ಲಿ ಭಾಗಿಯಾಗಿದ್ದಲ್ಲದೆ ಮುಕ್ತನೀತಿಗಳ ಭಟ್ಟಂಗಿಯಾಗಿ ವರ್ತಿಸಿದ್ದು ಇದೇ ಸಾಲಿಡಾರಿಟಿ ಸಂಘಟನೆ. 3 ವರ್ಷಗಳಷ್ಟು ಸುಧೀರ್ಘವಾದ ಆರ್ಥಿಕ ಹಿಂಜರಿತದ ಕಾಲಾವಧಿಯಲ್ಲಿ ಪೋಲೆಂಡ್ ಇನ್ನಿಲ್ಲದ ಬಾಧೆಗಳಿಗೆ ಒಳಗಾಯಿತು. ಕೇವಲ ಒಂ ವರ್ಷದ ಅವಧಿಯಲ್ಲೇ 13 ಲಕ್ಷ ಜನ ಕೆಲಸ ಕಳಕೊಂಡರು. ನಂತರ ಅದು ಚೇತರಿಸಿಕೊಳ್ಳಲೇ ಇಲ್ಲ. ಈ ನಡುವೆ ಸಾಲಿಡಾರಿಟಿಯ ನಾಯಕ ಲೆಕ್ ವ್ಯಾಲೇಸಾ ಒಂದು ಅವಧಿಗೆ ದೇಶದ ಅಧ್ಯಕ್ಷನಾಗಿಯೂ ಚುನಾಯಿತನಾದ.

ಇಂದು ಪೋಲೆಂಡಿನ 97% ರಷ್ಟು ಕೆಲಸದ ತಾಣಗಳಲ್ಲಿ ಕಾರ್ಮಿಕ ಸಂಘಟನೆಗಳೇ ಇಲ್ಲ. ಒಂದು ಕೋಟಿಯಷ್ಟಿದ್ದ ಸಾಲಿಡಾರಿಯ ಸದಸ್ಯತ್ವ ಈಗ ಕೇವಲ 4 ಲಕ್ಷಕ್ಕಿಳಿದಿದೆ. ಕಾರ್ಮಿಕ ಸಂಘಟನೆಯೊಂದು ತನ್ನ ಹಿತಕ್ಕೆ ಕೊಡಲಿಪೆಟ್ಟು ಹಾಕಿಕೊಳ್ಳುವುದಲ್ಲದೆ ದೇಶದ ಜನತೆಗೆ ಇನ್ನಿಲ್ಲದ ಬವಣೆಗಳನ್ನು ತಂದೊಡ್ಡಿದ್ದಕ್ಕೆ ಇದಕ್ಕಿಂತ ಕೆಟ್ಟ ನಿದರ್ಶನ ಬೇರೊಂದಿಲ್ಲ.

ಸ್ಲೋವೇನಿಯಾ, ರೋಮೇನಿಯ

ಪುಟ 12 ಕ

ಸಂಪಾದಕೀಯ

ಅಡಿಕೆ ಬೆಳೆಗಾರರು ಸಂಕಷ್ಟದಲ್ಲಿ

ಮಳೆ ವೈಪರೀತ್ಯದಿಂದಾಗಿ ಈ ವರ್ಷವೂ ಅಪಾರ ಹಾನಿ ಸಂಭವಿಸಿದೆ. ಮನುಷ್ಯರೂ, ಜಾನುವಾರುಗಳು ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗಿದ್ದಾರೆ. ಮನೆಗಳು, ಗೋಡೆಗಳು ಕುಸಿದು ಬಿದ್ದು ಜನ ಪ್ರಾಣ ಕಳೆದುಕೊಂಡಿದ್ದಾರೆ. ಇಷ್ಟರಲ್ಲೇ 15ಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ.

ಈ ಸಲದ ಅತಿವೃಷ್ಟಿಯಿಂದ ಅಡಿಕೆ ಬೆಳೆಗಾರರು ಕಂಗಾಲಾಗಿದ್ದಾರೆ. ಅತಿಯಾಗಿ ಸುರಿದ ಮಳೆಯಿಂದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ದಾವಣಗೆರೆ, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಅಡಿಕೆ ಬೆಳೆ ಕೊಳೆ ರೋಗಕ್ಕೆ ತುತ್ತಾಗಿದ್ದು ಸುಮಾರು 70%ರಷ್ಟು ಬೆಳೆ ನಾಶವಾಗಿ ಸರಿಸುಮಾರು 2,000 ಕೋಟಿ ರೂ. ಹಾನಿ ಸಂಭವಿಸಿದೆ. ಅಡಿಕೆಗೆ ಸಾಧಾರಣವಾಗಿ ಉತ್ತಮ ಬೆಲೆ ಲಭ್ಯ ಇರುವಾಗ ರೈತರು ಬೆಳೆ ನಷ್ಟಕ್ಕೆ ಗುರಿಯಾಗಿದ್ದಾರೆ. ದೇಶದಲ್ಲಿ ಸಧ್ಯಕ್ಕೆ ಅಡಿಕೆ ಆಮದು ನಿಯಂತ್ರಣದಲ್ಲಿರುವುದು ದೇಶಿಯ ಅಡಿಕೆಗೆ ಬೇಡಿಕೆಯನ್ನು ಉಂಟುಮಾಡಿದೆ. ಆದರೆ ಇದರ ಪ್ರಯೋಜನ ರೈತರಿಗೆ ಸಿಗದಂತಾಗಿದೆ.

ಬೆಳೆನಾಶದಿಂದ ಕಂಗೆಟ್ಟಿರುವ ಬೆಳೆಗಾರರು ಸರ್ಕಾರದಿಂದ ಪರಿಹಾರ ಪಡೆಯಲು ಹೋರಾಟದ ಹಾದಿ ಹಿಡಿದಿದ್ದಾರೆ. ರೈತರ ನಿಯೋಗವೊಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದೆ. ಸಿಎಂ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಬಳಿಗೂ ಅಡಿಕೆ ಬೆಳೆಗಾರರ ನಿಯೋಗವನ್ನು ಕೊಂಡೊಯ್ಯಲಾಗುತ್ತಿದೆ ಎನ್ನಲಾಗಿದೆ. ಪ್ರತಿ ಎಕರೆಗೆ 50 ಸಾವಿರ ರೂ. ನಂತೆ ಬೆಳೆ ನಷ್ಟ ಪರಿಹಾರ ನೀಡಬೇಕು ಎಂದು ರೈತರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಸಿದ್ಧರಾಮಯ್ಯ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಪಡೆದು ತಕ್ಷಣದ ಪರಿಹಾರಕ್ಕಾಗಿ 73 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಸೂಚಿಸಿದ್ದಾರೆ ಎನ್ನಲಾಗುತ್ತಿದೆ. ಆದರೆ ಈ ಮೊತ್ತ ಯಾವ ಮೂಲೆಗೂ ಸಾಕಾಗದು. ರಾಜ್ಯದಲ್ಲಿ ಅಡಿಕೆ ಬೆಳೆಯುವ 9 ಮುಖ್ಯ ಜಿಲ್ಲೆಗಳಲ್ಲಿ ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತದೆ. ಇಷ್ಟೊಂದು ವ್ಯಾಪಕವಾಗಿ ಸಂಭವಿಸಿರುವ ಬೆಳೆ ನಷ್ಟಕ್ಕೆ ಪರಿಹಾರ ನೀಡಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಗರಿಷ್ಠ ಮೊತ್ತವನ್ನು ಬಿಡುಗಡೆ ಮಾಡಬೇಕಾಗಿದೆ.

ಅಡಿಕೆ ಬೆಳೆಗಾರರಿಗೆ ತಕ್ಷಣದ ಹಾಗೂ ಗರಿಷ್ಠ ಪ್ರಮಾಣದ ಪರಿಹಾರವನ್ನು ನೀಡಲು ಸರ್ಕಾರಗಳು ಮುಂದಾಗಬೇಕು ಎನ್ನುವಾಗಲೇ, ಕೊಳೆ ರೋಗದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಗಮನ ನೀಡಬೇಕಾಗಿದೆ. ಕೊಳೆ ರೋಗಕ್ಕೆ ಇದುವರೆಗೆ ಬಳಸಲಾಗುತ್ತಿದ್ದ ಔಷಧಿಗಳು ಪ್ರಯೋಜನಕ್ಕೆ ಬಾರದಾಗಿದ್ದರೆ ಹೊಸ ಪರಿಣಾಮಕಾರಿ ಔಷಧಿಗಳನ್ನು ಸಂಶೋಧಿಸುವುದು ಅಗತ್ಯವಾಗಲಿದೆ. ಈ ದಿಕ್ಕಿನಲ್ಲಿ ಈಗಾಗಲೇ ನಡೆಯುತ್ತಿರುವ ಸಂಶೋಧನಾ ಕೆಲಸವನ್ನು ತೀವ್ರಗೊಳಿಸುವುದು ಆಗಬೇಕಾಗಿದೆ. ಸರ್ಕಾರ ಸಂಶೋಧನೆಗಾಗಿ ಹೆಚ್ಚು ಹಣವನ್ನು ಒದಗಿಸಬೇಕಾಗಿದೆ.


ಇದರ ಜೊತೆಯಲ್ಲಿ ರಾಜ್ಯದಲ್ಲಿ ತೆಂಗು ಬೆಳೆಗಾರರೂ ಸಂಕಷ್ಟದಲ್ಲಿದ್ದಾರೆ. ಮಾರುಕಟ್ಟೆಯಲ್ಲಿ ಒಂದು ಕಡೆ ತೆಂಗಿನ ಬೆಲೆ ಕುಸಿದಿದೆ. ಇನ್ನೊಂದು ಕಡೆ ತೆಂಗಿನ ಮರಗಳು ರೋಗಕ್ಕೆ ತುತ್ತಾಗಿ ಒಣಗಿ ಹೋಗುತ್ತಿವೆ. ಕಳೆದ ಕೆಲವು ವರ್ಷಗಳಿಂದ ಕಾಡುತ್ತಿರುವ ನುಸಿ ರೋಗವೂ ಇನ್ನೂ ಹತೋಟಿಗೆ ಬಂದಿಲ್ಲ. ತೆಂಗು ಬೆಳೆಗಾರರಿಗೆ ಸರ್ಕಾರದ ಸಹಾನುಭೂತಿ ಹಾಗೂ ಸಹಾಯ ಸಹಕಾರದ ತುರ್ತು ಅಗತ್ಯವಿದೆ.

ಅನಾವೃಷ್ಟಿ, ಅತಿವೃಷ್ಟಿ: ಜನತೆಯ ಸ್ಥಿತಿ–ಅಧೋಗತಿ!

ಒಂದು ತಿಂಗಳಿಗೆ ಸುರಿಯಬೇಕಾಗಿದ್ದ ಮಳೆ ಒಂದೆರಡು ದಿನಗಳಲ್ಲಿ ಸುರಿದು ಬಿಟ್ಟರೆ ಪರಿಸ್ಥಿತಿ ಏನಾಗಬೇಡ! ಮಳೆಯೆಂದರೆ ಬರೀ ಮಳೆಯಲ್ಲ ಅದು ಹುಚ್ಚು ಹೊಳೆ! ರಾಜ್ಯದಲ್ಲಿ ಕೆಲವು ಜಿಲ್ಲೆಗಳು, ಅದರಲ್ಲೂ ಕೆಲವು ತಾಲೂಕುಗಳಲ್ಲಿ ಭಾರೀ ಮಳೆ, ಅತೀವೃಷ್ಟಿ, ಕೆಲವು ಜಿಲ್ಲೆಗಳ ತಾಲೂಕುಗಳಲ್ಲಿ ಅನಾವೃಷ್ಟಿ, ಬರದ ಛಾಯೆ! ಹೀಗಾಗಿ ಬರದ ಪ್ರದೇಶದ ಜನ ಅಲ್ಲಲ್ಲಿ ಗುಳೇ ಹೊರಟಿರುವುದು ನಡೆದಿರುವಾಗ, ಇದ್ದಕ್ಕಿಂದಂತೆ ಮಳೆ ಧಾರಾಕಾರ ಸುರಿದಿದೆ.

ಪರಿಣಾಮ . . . .!?

ಗುರುವಾರ ರಾಯಚೂರು, ಕೊಪ್ಪಳ, ಯಾದಗಿರಿ, ಬೀದರ್ ಕಲಬುರ್ಗಿ, ದಾವಣಗೆರೆ, ಚಿತ್ರದುರ್ಗಾ, ಶಿವಮೊಗ್ಗ, ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿ ಆಸ್ತಿ–ಜೀವಹಾನಿ ಸಂಭವಿಸಿದೆ. ಕಲಬುರ್ಗಿ ಜಿಲ್ಲೆಯ ಸೇಡಂನಲ್ಲಿ ಮಳೆಯ ಆರ್ಭಟದ ಹಳ್ಳದಲ್ಲಿ ಕೊಚ್ಚಿ ಹೋಗಿ ಮೂರು ಜನ, ಚಿತ್ತಾಪುರದ ಕಾಳಗಿಯಲ್ಲಿ ಸಿಡಿಲಿನ ಹೊಡೆತಕ್ಕೆ ಒಬ್ಬರು ಸಾವನ್ನಪ್ಪಿದಾರೆ. ಚಿತ್ರದುರ್ಗಾ, ಮೈಸೂರು ಜಿಲ್ಲೆಗಳಲ್ಲಿ ಗೋಡೆ ಉರುಳಿ ಇಬ್ಬರು ಸಾವನ್ನಪ್ಪಿದ್ದಾರೆ. ಹೀಗೆ ಈ ಒಂದು ದಿನದ ಮಳೆಗೆ ಆರುಜನ ಪ್ರಾಣ ಕಳೆದುಕೊಂಡಿದ್ದಾರೆ. ಹಿಂದೆ ಆಗಲೇ 8 ಜನ ಅಸುನೀಗಿದ್ದಾರೆ. ಕೆರೆಕಟ್ಟೆ ಒಡೆದು ಹೊಲಗಳಿಗೆ ನೀರು ನುಗ್ಗಿದ್ದರೆ, ಮಳೆಯ ತತ್ತರಕ್ಕೆ ಈರುಳ್ಳಿ, ಅಡಿಕೆ, ಮೆಕ್ಕೆಜೋಳ ಮುಂತಾದ ಬೆಳೆಗಳು ನೆಲಕಚ್ಚಿವೆ. ಕೆಲವೆಡೆ ಕೊಳೆಯುತ್ತಿವೆ. ದಾವಣಗೆರೆ, ಅಲ್ಲದೇ ಹೊಳಲ್ಕೆರೆ, ಹಿರಿಯೂರು ತಾಲೂಕುಗಳಲ್ಲೇ 536 ಮನೆಗಳು ಹಾನಿಂಯಾಗಿವೆಂಯೆಂಬುದು ಪ್ರಾಥಮಿಕವಾಗಿ ದೊರೆತ ಮಾಹಿತಿ.



ಈಗಾಗಲೇ ನಾವು ಅವಲೋಕಿಸಿದಂತೆ ರಾಜ್ಯದಲ್ಲಿ ಸುಮಾರು 79 ತಾಲೂಕುಗಳಲ್ಲಿ (167ಕ್ಕೂ ಹೆಚ್ಚಿನ ಹೋಬಳಿಗಳು) ಮಳೆಯೇ ಇಲ್ಲದಬರದ ದವಡೆಗೆ ತುತ್ತಾಗಿವೆ. ಜನ–ಜಾನುವಾರುಗಳಿಗೆ ಕೆಲಸ, ಮೇವು–ನೀರು ಇರದೇ, ಸರ್ಕಾರದ ಗಮನವೂ ಸಾಕಷ್ಟು ಇಲ್ಲದೇ ದುಃಸ್ಥಿತಿ ಅನುಭವಿಸುತ್ತಿದ್ದರು. ಮಳೆಗಾಗಿ ಪರಿತಪಿಸುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಸುರಿದ ಅಂಧಾದುಂಧಿ ಮಳೆ ಮತ್ತಷ್ಟೂ ಹಾನಿಯನ್ನೇ ತಂದಿದೆ. ಇದು ನೈಸರ್ಗಿಕ ಹಾನಿಯೆಂಬುದೇನೋ ನಿಜ. ಆದರೆ ತೀವ್ರ ಸಂಕಷ್ಟದ ಸ್ಥಿತಿಗೆ ಸಿಲುಕಿ ನರಳುವಂತಾಗುವ ಸನ್ನಿವೇಶದ ಸೃಷ್ಟಿಯಲ್ಲಿ, ಅವರನ್ನೂ ಈಗಲೂ ಪಾರಾಗಿಸದೇ ಸತಾಯಿಸುವಲ್ಲಿ ನಮ್ಮನು ಆಳುವ ಸರ್ಕಾರಗಳ ಪಾಲು, ಪಾತ್ರವಿದೆ. ಆಗಲೇ ಬರದ ಛಾಯೆಗೆ ಈಡಾದ ಜಿಲ್ಲೆಗಳ–ತಾಲೂಕುಗಳ ಜನತೆಯನ್ನು ರಕ್ಷಿಸಲು ಸರ್ಕಾರವೇನಾದರೂ ಕ್ರಮವಹಿಸಿತ್ತೇ? ಅಗತ್ಯ ಹಣ ಆಹಾರ ಒದಗಿಸಿತ್ತೇ? ಒಂದು ಯೋಜನೆ ರೂಪಿಸಿ ಆಡಳಿತವನ್ನೂ ಚುರುಕುಗೊಳಿಸಿ ಪರಿಹಾರ ಕಾರ್ಯ ಕೈಗೊಳ್ಳಬೇಕಿತ್ತು. ಇಂತಹ ಕ್ರಮಕ್ಕಾಗಿ ಸರ್ಕಾರವನ್ನು ಆಗ್ರಹಿಸಲಾಗಿತ್ತು.

ಆದರೆ ಸರ್ಕಾರ ಗಮನ ನೀಡಿಲ್ಲ, ನೀಡುತ್ತಿಲ್ಲ. ಸನ್ನಿವೇಧದ ಗಂಭೀರತೆಯನ್ನು ಪರಿಗಣಿಸುತ್ತಿಲ್ಲ.

ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂಭ್ರಮದ ಗುಂಗಿನಿಂದ ಇನ್ನೂ ಹೊರಬಂದಿಲ್ಲ. ಮೇಲಾಗಿ ಎರಡು ಲೋಕಸಭಾ ಸ್ಥಾನಗಳಿಗೆ ಉಪಚುನಾವಣೆ ನಡೆದವು. ಅಲ್ಲಿಯೇ ಇಡೀ ಸರ್ಕಾರ, ಸಚಿವರು ಮುಳುಗಿ ಬಿಟ್ಟಿದ್ದರು. ಈಗ ಲೋಕಸಭಾ ಸಾರ್ವತ್ರಿಕ ಚುನಾವಣಾ ತಯಾರಿ. ಹೀಗೆ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ 'ಅಧಿಕಾರ ಗಳಿಕೆ'ಯ ಸುತ್ತವೇ ಗಮನ ಹರಿಸುವಲ್ಲಿ ಅಧಿಕಾರ ಹಂಚಿಕೆಯ ಕಸರತ್ತಿನಲ್ಲಿ ಹೊರತು ಜನತೆಯ ಗಂಭೀರ ಪರಿಸ್ಥಿತಿಯತ್ತ ಅಲ್ಲ. ಈ ನಿರ್ಲಕ್ಷತನವನ್ನು ಈ ಕೂಡಲೇ ನಿಲ್ಲಿಸಬೇಕು, ಇದು ಖಂಡನೀಯ.

ಆದ್ದರಿಂದ ಈ ಅತೀವೃಷ್ಠ, ಅನಾವೃಷ್ಟಿಗಳ ವಿರುದ್ಧ ಜನತೆ ಪ್ರತಿಭಟನೆಗೆ ಇಳಿಯಬೇಕು. ನೂತನ ಸರ್ಕಾರಕ್ಕೆ ಕೆಲಸ ಮಾಡಲು ಒಂದಿಷ್ಟು ಸಮಯ ನೀಡಬೇಕಾಗುವುದು ಎಂಬ ಸಂಗತಿ ಇದಲ್ಲ.

ಸೆಪ್ಟೆಂಬರ್ 8 ನ್ನು ವಿಶ್ವ ಸಾಕ್ಷರತಾ ದಿನವನ್ನಾಗಿ ಆಚರಿಸಲಾಯಿತು. ಭಾರತ ಮತ್ತು ಕರ್ನಾಟಕ ಈ ನಿಟ್ಟಿನಲ್ಲಿ ಸಾಧಿಸಿದ ಪ್ರಗತಿಯೆಷ್ಟು?

ಟಾಪ್ 10 ಸಾಕ್ಷರ ರಾಜ್ಯಗಳು

ರಾಜ್ಯ	2011ರ ಜನಗಣತಿ ಪ್ರಕಾರ		
	ಸಾಕ್ಷರತೆ ಪ್ರಮಾಣ	ಪುರುಷ	ಮಹಿಳೆ
ಕೇರಳ	93.9	96.0	92.0
ಲಕ್ಷದ್ವೀಪ	92.3	96.1	88.2
ಮಿಜೋರಾಂ	91.6	93.7	89.4
ತ್ರಿಪುರಾ	87.8	92.2	83.1
ದಮನ್ ಮತ್ತು ದಿಯು	87.1	91.5	79.6
ಪುದುಚೇರಿ	86.5	92.1	81.2
ಚಂಡೀಗಢ	86.4	90.5	81.4
ಅಂಡಮಾನ್–ನಿಕೋಬಾರ್	86.3	90.1	81.8
ದೆಹಲಿ	86.3	91.0	80.9
ಹಿಮಾಚಲ ಪ್ರದೇಶ	83.8	90.8	76.6
ಕರ್ನಾಟಕ	75.6	82.8	68.1
ಭಾರತ	74.04	82.14	65.46

ಯಾವ ಜಿಲ್ಲೆಯಲ್ಲಿ ಎಷ್ಟು ಸಾಕ್ಷರರು?

ದಕ್ಷಿಣಕನ್ನಡ	88.62	ಉಡುಪಿ	86.29
ಬೆಳಗಾವಿ	73.94	ಚಿಕ್ಕಮಗ್ಳೂರು	79.24
ಬಾಗಲಕೋಟೆ	69.39	ತುಮಕೂರು	74.32
ಬಿಜಾಪುರ	67.20	ಬೆಂಗಳೂರು	88.48
ಬೀದರ್	71.01	ಮಂಡ್ಯ	70.14
ರಾಯಚೂರು	60.46	ಹಾಸನ	75.89
ಕೊಪ್ಪಳ	67.28	ಕೊಡಗು	82.52
ಗದಗ	75.18	ಮೈಸೂರು	72.56
ಧಾರವಾಡ	80.30	ಚಾ.ನಗರ	61.12
ಉತ್ತರಕನ್ನಡ	84.03	ಗುಲ್ಬರ್ಗ	65.65
ಹಾವೇರಿ	77.60	ಕೋಲಾರ	74.33
ಬಳ್ಳಾರಿ	67.85	ಚಿಕ್ಕಬಳ್ಳಾಪುರ	70.08
ಚಿತ್ರದುರ್ಗಾ	73.82	ಬೆಂ. ಗ್ರಾ.	78.29
ದಾವಣಗೆರೆ	76.30	ರಾಮನಗರ	69.20
ಶಿವಮೊಗ್ಗ	80.50	ಯಾದಗಿರಿ	52.36

ಮಾಲೂರಿನಲ್ಲಿ ರಾಜ್ಯ ಮಟ್ಟದ ಅಧ್ಯಯನ ಶಿಬಿರ
ಜಾತಿ ತಾರತಮ್ಯ, ಅಸ್ಪೃಶ್ಯತೆ ವಿರುದ್ದ ಹೋರಾಟ ತೀವ್ರಗೊಳಿಸಲು ನಿರ್ಧಾರ

ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಸೆಪ್ಟಂಬರ್ 1, 2 ಮತ್ತು 3 2013ರಂದು ಮೂರು ದಿನಗಳ ಕಾಲ ಜಾತಿ ತಾರತಮ್ಯ, ಅಸ್ಪೃಶ್ಯತೆ ಹಾಗೂ ದಲಿತರ ಬದುಕಿನ ಪ್ರಶ್ನೆಗಳನ್ನು ಕುರಿತು ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ರಾಜ್ಯದ ವಿವಿಧ ಜಿಲ್ಲೆ ತಾಲ್ಲೂಕುಗಳಿಂದ 128 ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು.

ಜಾತಿ-ಅಸ್ಪೃಶ್ಯತೆ ದಲಿತರ ಸಮಸ್ಯೆಗಳ ಕುರಿತು ಸಿಪಿಐ(ಎಂ) ಪಕ್ಷದ ನಿಲುವನ್ನು -ಸಿಪಿಐ(ಎಂ) ಪಕ್ಷದ ಅಖಿಲ ಭಾರತ ಕಾರ್ಯದರ್ಶಿ ಮಂಡಳಿ ಸದಸ್ಯರು ಕಾಂ.ಶ್ರೀನಿವಾಸರಾವ್ ವಿವರಿಸಿದರು. ದಲಿತರ ವಿಮೋಚನಾ ದಾರಿ, ಜಾತಿ ಉಗಮ ಬೆಳವಣಿಗೆ, ಕರ್ನಾಟಕದಲ್ಲಿ ಜಾತಿ ಪದ್ದತಿ ಮತ್ತು ದಲಿತರ ಸ್ಥಿತಿಗತಿ-ಮುಂತಾದ ವಿಷಯಗಳ ಬಗೆಗೆ ಪಾಠಗಳು ಚರ್ಚೆಗಳು ನಡೆದವು. ದಲಿತ ಹಕ್ಕುಗಳ ಸಮಿತಿ ಸಂಚಾಲಕ ಮಾರುತಿ ಮಾನ್ಪಡೆಯವರು ಶಿಬಿರದ ಕಲಾಪ ನಿರ್ವಹಿಸಿ ನಡೆಸಿಕೊಟ್ಟರು. ಕೊನೆಯ ದಿನ ಕಾರ್ಯಯೋಜನೆಗಳ ಬಗ್ಗೆ ಕಾರ್ಯಾಗಾರ ನಡೆಸಲಾಯಿತು.



ಮುಂದಿನ ಹೋರಾಟ ಮತ್ತು ಕಾರ್ಯಕ್ರಮಗಳ ಯೋಜನೆಯನ್ನು ದಲಿತ ಹಕ್ಕುಗಳ ಸಮಿತಿಯ ರಾಜ್ಯ ಕೇಂದ್ರದ ಸಂಗಾತಿ ಗೋಪಾಲಕೃಷ್ಣ ಅರಳಹಳ್ಳಿ ಮಂಡಿಸಿದರು.


ನಿರ್ಧಾರಗಳು:

ಈ ಕಾರ್ಯಾಗಾರದಲ್ಲಿ ವಿವಿಧ ಜಿಲ್ಲೆಗಳಿಂದ ವಿವಿಧ ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ನಂತರ ಈ ನಿರ್ಧಾರಗಳನ್ನು ಜಾರಿಗೊಳಿಸಲು ತೀರ್ಮಾನಿಸಲಾಯಿತು. 100 ತಾಲ್ಲೂಕುಗಳಲ್ಲಿ ಸಮಾವೇಶ ನಡೆಸುವ ಗುರಿ ನಿಗದಿಗೊಳಿಸಲಾಯಿತು. 67 ತಾಲ್ಲೂಕುಗಳಲ್ಲಿ ಅಕ್ಟೋಬರ್- ನವೆಂಬರ್ ತಿಂಗಳಲ್ಲಿ ಸಮಾವೇಶವನ್ನು ನಡೆಸಲು ನಿರ್ಧರಿಸಲಾಯಿತು. ಪ್ರತಿ ತಾಲ್ಲೂಕಿನಲ್ಲಿ ಒಂದು ಅಸ್ಪೃಶ್ಯತಾ ಆಚರಣೆಯನ್ನು ಸಮೀ ಮಾಡುವುದರ ಮೂಲಕ ಗುರುತಿಸಿ ವ್ಯಾಪಕ ಪ್ರಚಾರಾಂದೋಲನ ನಡೆಸುವುದು ಅದರ ವಿರುದ್ದ ಹೋರಾಟ ನಡೆಸುವುದು.

9 ತಾಲ್ಲೂಕುಗಳಲ್ಲಿ ದಲಿತರಿಗೆ ದೇವಸ್ಥಾನ ಪ್ರವೇಶಕ್ಕಾಗಿ, ಹೋಟೆಲ್‌ಗಳಲ್ಲಿ 'ಎರಡು ಲೋಟ ಪದ್ದತಿ' ವಿರುದ್ದ, ದಲಿತರಿಗೆ ಕ್ಷೌರದ ಅಂಗಡಿಗಳಲ್ಲಿ ಕ್ಷೌರ ನಿರಾಕರಣೆ ವಿರುದ್ದ ಸಮಾನ ಅವಕಾಶಕ್ಕಾಗಿ, ಪದ್ದತಿ ವಿರುದ್ದ, ತಕ್ಷಣದಲ್ಲಿ ತಾಲ್ಲೂ ಮಟ್ಟದಲ್ಲಿ ಹೋರಾಟ ನಡೆಸಲು ನಿರ್ಧರಿಸಲಾಗಿದೆ.

ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲಿ ಸೈಕಲ್ ಜಾಥಾ, ವ್ಯಾನ್ ಜಾಥಾ-ಸಾಂಸ್ಕೃತಿಕ ಕಲಾ ಜಾಥಾ ತಂಡವನ್ನು ರಚಿಸಿ ಈ ಪ್ರಚಾರಾಂದೋಲನ ಯಶಸ್ವಿಗೊಳಿಸಲು ನಿರ್ಧರಿಸಿಲಾಗಿದೆ.

ಕೋಲಾರ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ 18ರಂದು ಕೋಲಾರ ಬಂದ್




ಹೆಂಡತಿ ಸಿ.ಬಿ. ವೀಣಾ ಹಾಗೂ ಮಗಳು ದೀಪ್ತಿಯನ್ನು ಕೊಂದ ಕಟುಕ ಎಸ್. ಕೆ.ಸಂತೋಷ್‌ಕುಮಾರ್‌ನನ್ನು ಬಂಧಿಸುವಂತೆ ಆಗ್ರಹಿಸಿ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಕೋಲಾರದಲ್ಲಿ ನಡೆಯುತ್ತಿರುವ ಹೋರಾಟ ಹೊಸ ಘಟ್ಟವನ್ನು ಪ್ರವೇಶಿಸಿದೆ. ಜುಲೈನಲ್ಲಿ ನಡೆದ ಅಮಾನವೀಯ ಪ್ರಕರಣ ಹಾಗೂ ಅದಕ್ಕೆ ಸಂಬಂಧಿಸಿ ನಡೆಯುತ್ತಿರುವ ಹೋರಾಟದ ವಿವರಗಳು ಜನಶಕ್ತಿಯ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿರುವುದನ್ನು ಗಮನಿಸಿರುವಿರಿ.

ಮುಖ್ಯ ಆರೋಪಿಯನ್ನು ಬಂಧಿಸಲು ಪೊಲೀಸರು ವಿಫಲರಾಗಿರುವ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 11ರಂದು ಕೋಲಾರದಲ್ಲಿ ಬೃಹತ್ ರ್‍ಯಾಲಿ ನಡೆಸಿದ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದರು. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ತಡೆಯಲು ರಾಜ್ಯದ ಕಾಂಗ್ರೆಸ್ ಸರಕಾರ ವಿಫಲವಾಗಿರುವುದನ್ನೂ ಪ್ರತಿಭಟನೆಕಾರರು ಖಂಡಿಸಿದರು.

ಮೆರವಣಿಗೆಯಲ್ಲಿ ಸಾಗಿ ಬಂದವರನ್ನು ಜಿಲ್ಲಾಧಿಕಾರಿ ಕಚೇರಿ ಆವರಣ ಪ್ರವೇಶಿಸದಂತೆ ತಡೆಯುವ ಪೊಲೀಸರ ಪ್ರಯತ್ನ ಫಲಗೂಡಲಿಲ್ಲ. ಘೋಷಣೆಗಳನ್ನು ಕೂಗುತ್ತಾ ಕಚೇರಿ ಆವರಣದಲ್ಲೇ ಧರಣಿ ನಡೆಸಲಾಯಿತು. ತಾಯಿ-ಮಗುವಿನ ಕೊಲೆ ನಡೆದು ಎರಡು ತಿಂಗಳ ಮೇಲಾದರೂ ಪ್ರಮುಖ ಆರೋಪಿಯನ್ನು ಬಂಧಿಸಲು ಜಿಲ್ಲಾಡಳಿತ ವಿಫಲವಾಗಿರುವುದನ್ನು ಖಂಡಿಸಿದ ಸಂಘಟನೆಗಳು ಸೆಪ್ಟೆಂಬರ್ 18ರಂದು ಕೋಲಾರ ಬಂದ್ ನಡೆಸುವುದಾಗಿ ಘೋಷಿಸಿದವು.

ಪ್ರತಿಭಟನೆಯಲ್ಲಿ ಜಿ.ಸಿ. ಬಯ್ಯಾರೆಡ್ಡಿ, ವಿ.ಗೀತಾ, ಗಾಂಧಿನಗರ ನಾರಾಯಣಸ್ವಾಮಿ, ಜಿ. ಅರ್ಜುನನ್, ವಿ. ಅಂಬರೀಷ್, ವಿ. ಸುಶೀಲಾ, ಗಂಗಮ್ಮ, ಪಂಡಿತ್ ವೆಂಕಟಮುನಿಯಪ್ಪ, ಟಿ. ವಿಜಯಕುಮಾರ್, ಪಿ.ಆರ್. ಸೂರ್ಯನಾರಾಯಣ, ವಿಜಿ ಮೊದಲಾದ ಪ್ರಮುಖ ಮುಖಂಡರು ಭಾಗವಹಿಸಿದ್ದರು.





ಮನೆ ನಿವೇಶನ ಮತ್ತು ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಒತ್ತಾಯಿಸಿ

ಸೆ.30 ರಿಂದ ಕೃಷಿ ಕೂಲಿಕಾರರ ಅಹೋರಾತ್ರಿ ಧರಣಿ


ವಸತಿರಹಿತ ಕೃಷಿ ಕೂಲಿಕಾರ ಕುಟುಂಬಗಳಿಗೆ ನಿವೇಶನಗಳನ್ನು ಹಾಗೂ ಮನೆ ಕಟ್ಟಿಸಿಕೊಳ್ಳಲು ಆರ್ಥಿಕ ನೆರವು ನೀಡಬೇಕು ಮತ್ತು ಭೂರಹಿತ ಬಡವರು ಹಾಗೂ ಸಣ್ಣ ರೈತರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಕಂದಾಯ ಅಥವ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಿ ಅವರಿಗೆ ಹಕ್ಕು ಪತ್ರಗಳನ್ನು ನೀಡಬೇಕೆಂದು ಆಗ್ರಹಿಸಿ ಸೆಪ್ಟಂಬರ್ 30 ರಿಂದ ರಾಜ್ಯಾದ್ಯಂತ ಜಿಲ್ಲಾಧಿಕಾರಿ ಅಥವ ತಹಶೀಲ್ದಾರರ ಕಛೇರಿಗಳ ಎದುರು ಅನಿರ್ಧಿಷ್ಟ ಅಹೋ ರಾತ್ರಿ ಧರಣಿ ನಡೆಸಲು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿ ನಿರ್ಧರಿಸಿದೆ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಕಳೆದ ಎರಡು ವರ್ಷಗಳಿಂದ ಸ್ವಂತ ಮನೆ ಇಲ್ಲದ-ನಿವೇಶನ ಇಲ್ಲದ ಕೃಷಿ ಕೂಲಿಕಾರ ಕುಟುಂಬಗಳಿಂದ ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸುತ್ತಾ, ಮನೆ ನಿವೇಶನಗಳಿಗಾಗಿ ಹೋರಾಟಗಳನ್ನು ಸಂಘಟಿಸುತ್ತಾ ಬಂದಿದೆ. ಆದರೆ ಹಿಂದಿನ ಬಿಜೆಪಿ ಸರ್ಕಾರವಾಗಲಿ, ಇಂದಿನ ಕಾಂಗ್ರೆಸ್ ಸರ್ಕಾರವಾಗಲಿ ರಾಜ್ಯದ ವಸತಿರಹಿತರಿಗೆ ಮನೆಗಳನ್ನು ಒದಗಿಸುವ ಸಮಗ್ರ ಯೋಜನೆಯೊಂದನ್ನು ರೂಪಿಸಲೇ ಇಲ್ಲ.

ಗುಡಿಸಲು ರಹಿತ ರಾಜ್ಯ ನಿರ್ಮಾಣದ ಘೋಷಣೆಯ ಅಡಿಯಲ್ಲಿ ಸರ್ಕಾರಿ ಭೂಮಿಯಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿರುವ ಬಡಜನರಿಗೆ ಆಯಾ ನಿವೇಶನಗಳನ್ನು ಮಂಜೂರು ಮಾಡಿ ಮನೆ ಕಟ್ಟಿಕೊಳ್ಳಲು 1.2 ಲಕ್ಷ ರೂ. ನೆರವು ನೀಡುವ ಸರ್ಕಾರದ ತೀರ್ಮಾನ ಸ್ವಾಗತಾರ್ಹವಾಗಿದೆ. ಆದರೆ ಈ ಪ್ರಕ್ರಿಯೆ ಇನ್ನೂ ಆರಂಭ ಆಗದೆ ಇರುವುದರಿಂದ ಕೆಳ ಮಟ್ಟದ ಅಧಿಕಾರಿಗಳಿಗೆ ಮತ್ತು ಮಧ್ಯವರ್ತಿಗಳಿಗೆ ಲಂಚ ಗಿಟ್ಟಿಸಿಕೊಳ್ಳಲು ಅವಕಾಶ ದೊರಕಿದಂತಾಗಿದೆ. ಬಡವರ ಅನಧಿಕೃತ ಮನೆ/ಗುಡಿಸಲುಗಳ ನಿವೇಶನಗಳನ್ನು ಸಕ್ರಮಗೊಳಿಸಿ ಮನೆಕಟ್ಟಿಕೊಳ್ಳಲು ನೆರವು ನೀಡುವುದನ್ನು ತ್ವರಿತಗೊಳಿಸಿ ಫಲಾನುಭವಿಗಳು ಪರದಾಡುವುದನ್ನು ನಿಲ್ಲಿಸಬೇಕೆಂದು ಸಂಘ ಆಗ್ರಹಿಸುತ್ತದೆ. ಹಾಗೆಯೇ ಹಿಂದಿನ ವರ್ಷಗಳಲ್ಲಿ ಇಂದಿರಾ ಆವಾಸ್ ಮೊದಲಾದ ಯೋಜನೆಗಳ ಫಲಾನುಭವಿಗಳಿಗೆ ಮನೆಕಟ್ಟಿಕೊಳ್ಳಲು ಸರ್ಕಾರದ ನೆರವಿನ ಬಾಕಿ ಕಂತುಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸಂಘ ಒತ್ತಾಯಿಸುತ್ತದೆ. ಅದೇ ಸಮಯದಲ್ಲಿ ಸ್ವಂತ ಮನೆಯಾಗಲಿ, ನಿವೇಶನವಾಗಲಿ ಇಲ್ಲದ ಕುಟುಂಬಗಳಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿವೇಶನಗಳನ್ನು ಒದಗಿಸಲು ಸರ್ಕಾರ ಕಾರ್ಯಕ್ರಮವೊಂದನ್ನು ರೂಪಿಸಬೇಕೆಂದು ಒತ್ತಾಯಿಸಲಾಗುತ್ತದೆ. ಅಗತ್ಯವಾದರೆ ಖಾಸಗಿ ಭೂಮಿಯನ್ನು ಯೋಗ್ಯ ಬೆಲೆ ಕೊಟ್ಟು ಸರ್ಕಾರ ಸ್ವಾಧೀನಪಡಿಸಿ, ನಿವೇಶನಗಳನ್ನು ನಿರ್ಮಾಣ ಮಾಡಿ ಅರ್ಹರಿಗೆ ವಿತರಣೆ ಮಾಡಬೇಕೆಂದು ಸಂಘ ಆಗ್ರಹಿಸುತ್ತದೆ.

ಅದರಂತೆಯೇ, ತಮ್ಮ ಗ್ರಾಮಗಳ ಆಸುಪಾಸಿನಲ್ಲಿರುವ ಸರ್ಕಾರಿ ಬಂಜರು ಭೂಮಿಯನ್ನು ಹಾಗೂ ಮರಗಳೇ ಇಲ್ಲದ ಅರಣ್ಯ ಭೂಮಿಯನ್ನು ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬದುಕಲು ಪ್ರಯತ್ನಿಸುತ್ತಿರುವ ಬಡವರನ್ನು ಆ ಭೂಮಿಗಳಿಂದ ಒಕ್ಕಲೆಬ್ಬಿಸದೆ, ಸಾಗುವಳಿದಾರರಿಂದ ಮತ್ತೊಮ್ಮೆ ಅಧಿಕೃತವಾಗಿ ಅರ್ಜಿಗಳನ್ನು ಸ್ವೀಕರಿಸಿ, ಪ್ರಕರಣಗಳನ್ನು ಪರಿಶೀಲಿಸಿ, ಅರ್ಹರಿಗೆ ಹಕ್ಕುಪತ್ರಗಳನ್ನು ನೀಡಬೇಕೆಂದು ಸಂಘ ಸರ್ಕಾರವನ್ನು ಒತ್ತಾಯಿಸುತ್ತದೆ. 2005 ರ ಅರಣ್ಯ ಹಕ್ಕುಗಳ ಕಾಯ್ದೆ ಅಡಿಯಲ್ಲಿ ಗ್ರಾಮ ಸಮಿತಿಗಳನ್ನು ರಚಿಸಿ, ಅರಣ್ಯ ಭೂಮಿಯನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವವರಿಂದ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲಿಸಬೇಕೆಂದು ಸಂಘದ ಆಗ್ರಹವಾಗಿದೆ.

ಈ ಬೇಡಿಕೆಗಳಿಗಾಗಿ ರಾಜ್ಯಾದ್ಯಂತ ಸೆ. 30 ರಿಂದ ಅನಿರ್ದಿಷ್ಟ ಅಹೋರಾತ್ರಿ ಧರಣಿ ನಡೆಸಲು ಪ್ರಾಂತ ಕೂಲಿಕಾರರ ಸಂಘ ನಿರ್ಧರಿಸಿದ್ದು ಇತರ ಸಮಾನ ಮನಸ್ಕ ಸಾಮೂಹಿಕ ಸಂಘಟನೆಗಳ ಬೆಂಬಲವನ್ನು ಕೋರಿದೆ.



ರಾಯಚೂರ್‌ನಲ್ಲಿ ಅರಣ್ಯಭೂಮಿ ಸಾಗುವಳಿದಾರರ ಸಮಾವೇಶ.

ಇದೇ ಸೆ. 10 ರಂದು ರಾಯಚೂರ್ ನಗರದಲ್ಲಿ ತಾಲೂಕಿನ ಅರಣ್ಯ ಭೂಮಿ ಸಾಗುವಳಿದಾರರ ಸಮಾವೇಶ ಯಶಸ್ವಿಯಾಗಿ ಜರುಗಿತು. ಬಿಜಿನ್‌ಗೇರಾ, ಸಿದ್ರಾಮಪುರ, ಐಜಾಪುರ, ಉಂಡ್ರಾಲದೊಡ್ಡಿ, ಬಾಪೂರ, ಬಾಪೂರ ತಾಂಡಾ, ಬಾಯಿದೊಡ್ಡಿ, ಸಿಂಗನೋಡಿ, ಮಂಡಲಗೇರಾ, ಚಂದ್ರಬಂಡ, ಅರಸಿಕೇರಾ, ಅರಸಿಕೇರಾ ತಾಂಡಾ, ದೇವನಪಲ್ಲಿ, ಯರಗೇರಾ, ಜಂಬಲದಿನ್ನಿ, ಪುಟ್ಟಲದಿನ್ನಿ, ಜುಲುಂಗೇರಾ, ಮಾಸದೊಡ್ಡಿ ಮೊದಲಾದ ಗ್ರಾಮಗಳಿಂದ ನೂರಕ್ಕೂ ಹೆಚ್ಚು ಅರಣ್ಯ ಭೂಮಿ ಸಾಗುವಳಿದಾರ ಬಡವರು ಸಮಾವೇಶದಲ್ಲಿ ಭಾಗವಹಿಸಿದ್ದರು. ಅವರು ಕಳೆದ ಎರಡು ವರ್ಷಗಳಿಂದ ಭೂಮಿಯ ಹಕ್ಕಿಗಾಗಿ ನಿರಂತರ ಹೋರಾಟ ಮಾಡುತ್ತಿದ್ದಾರೆ. ಅವರು ಹೆಚ್ಚಾಗಿ ತೆಲಗು ಭಾಷಿಕರಾಗಿದ್ದು ಜಿಲ್ಲಾಡಳಿತ ಅವರ ಬೇಡಿಕೆಗಳನ್ನು ಕಡೆಗಣಿಸುತ್ತಾ ಬಂದಿದೆ. ಇವರು ಸಾಗುವಳಿ ಮಾಡುತ್ತಿರುವ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಅರಣ್ಯ ಸಸಿಗಳನ್ನು ನೆಡುವ ಪ್ರಯತ್ನ ಮಾಡಿದಾಗೆಲ್ಲ ಇವರ ಹಾಗೂ ಅರಣ್ಯ ಇಲಾಖೆಯ ಸಿಬ್ಬಂಧಿಗಳ ನಡುವೆ ಸಂಘರ್ಷ ಏರ್ಪಡುತ್ತಿರುತ್ತದೆ. ಸೆ. 30 ರಿಂದ ಆರಂಭವಾಗುವ ಅಹೋ ರಾತ್ರಿ ಧರಣಿಯಲ್ಲಿ ನೂರಾರು ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದಸ್ವಾಮಿ ಸಮಾವೇಶವನ್ನು ಉದ್ಘಾಟಿಸಿದರು. ತಾಲ್ಲೂಕು ಅ ಧ್ಯಕ್ಷರಾದ ಸಂಗಾತಿ ಕರಿಯಪ್ಪ ಅಚ್ಚೊಳ್ಳಿ ಅ ಧ್ಯಕ್ಷತೆ ವಹಿಸಿದ್ದರು. ಪ್ರಾಂತ ರೈತ ಸಂಘದ ಮುಖಂಡರಾದ ಕೆ.ಜಿ. ವೀರೇಶ್ ಉಪಸ್ಥಿತರಿದ್ದರು. ಸಮಾವೇಶದ ನಂತರ ಎಲ್ಲರೂ ಮೆರವಣಿಗೆಯಲ್ಲಿ ಹೊರಟು, ಘೋಷಣೆಗಳನ್ನು ಕೂಗುತ್ತಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಗೆ ತೆರಳಿ ಅರಣ್ಯ ಭೂಮಿ ಸಾಗುವಳಿದಾರರಿಗೆ 2005ರ ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಲು ಅರ್ಜಿ ನಮೂನೆಗಳನ್ನು ವಿತರಿಸಬೇಕೆಂದು ಒತ್ತಾಯಿಸಲಾಯಿತು.

ಇದೇ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಇರುವ ಸರ್ಕಾರಿ ಹಾಸ್ಟೇಲುಗಳಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ, ಇ.ಪಿ.ಎಫ್ ಮತ್ತು ಇ.ಎಸ್.ಐ. ಸೌಲಭ್ಯಗಳನ್ನು ಸರಿಯಾಗಿ ನೀಡಬೇಕೆಂದು ಆಗ್ರಹಿಸುವ ಮನವಿಯನ್ನು ಸಲ್ಲಿಸಲಾಯಿತು. ಕೂಲಿಕಾರರ ಸಂಘದ ಮುಖಂಡರಾದ ಎನ್, ಮುದ್ದಪ್ಪ, ಗೋವಿಂದ ನಾಯಕ್, ಬಸವರಾಜ ಚಂದ್ರಬಂಡ, ಸತ್ಯಪ್ಪ ಬಾಪೂರ, ಹುಲಿಗೆಮ್ಮ ರಂಗನಾಥ, ಹನುಮಂತ ಮುದುಗಲ್, ಮಾನಮ್ಮ ಮೊದಲಾದವರು ಮೆರವಣಿಗೆ, ಮತ ಪ್ರದರ್ಶನದ ನೇತೃತ್ವ ವಹಿಸಿದ್ದರು.

ವರದಿ : ಕರಿಯಪ್ಪ ಅಚ್ಚೊಳ್ಳಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಂಜಿಮೊಗರು ಜೋಡಿ ಕೊಲೆ ಸಿಬಿಐ ತನಿಖೆಗೆ ಒತ್ತಾಯಿಸಿ ಡಿವೈಎಫ್ಐ ಧರಣಿ

ಮಂಗಳೂರು ನಗರದ ಪಂಜಿಮೊಗರು ಎಂಬಲ್ಲಿ ರಜಿಯಾ ಎಂಬಾಕೆ ಮತ್ತು ಅವರ ಎಂಟು ವರ್ಷದ ಮಗಳು ಫಾತಿಮಾ ಎರಡು ವರ್ಷಗಳ ಹಿಂದೆ ಹಾಡು ಹಗಲೇ ಕೊಲೆಯಾಗಿರುತ್ತಾರೆ. ಈ ಕೊಲೆ ಪ್ರಕರಣವನ್ನು ಭೇದಿಸಲು ಇಷ್ಟರವರೆಗೂ ಕರ್ನಾಟಕ ಪೋಲೀಸ್ ಇಲಾಖೆಗೆ ಸಾಧ್ಯವಾಗಿಲ್ಲ. ಹಂತಕರನ್ನು ಪತ್ತೆ ಹಚ್ಚಲು ಆರಂಭದ ಹಂತದಲ್ಲೇ ಪೋಲೀಸ್ ಇಲಾಖೆ ವಿಫಲವಾದಾಗಲೇ, ಡಿವೈಎಫ್ಐ ಸ್ಥಳೀಯ ನಾಗರಿಕರ ಬೆಂಬಲದೊಂದಿಗೆ ಹಲವು ಬಾರಿ ಪ್ರತಿಭಟನೆಯನ್ನು ನಡೆಸಿತ್ತು. ಆದರೂ ವಿಫಲವಾದ ರಾಜ್ಯ ಪೋಲೀಸ್ ಇಲಾಖೆ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಿ ಕೈತೊಳೆದುಕೊಂಡಿತು. ಸಿಐಡಿಗೆ ಹಸ್ತಾಂತರಗೊಂಡು ವರ್ಷವೇ ಕಳೆದರೂ, ಫಲಿತಾಂಶ ಶೂನ್ಯವಾಗಿದೆ; ಕಾಟಾಚಾರಕ್ಕಷ್ಟೇ ತನಿಖೆ ನಡೆದಿದೆ. ರಾಜ್ಯ ಸರ್ಕಾರ ಬದಲಾವಣೆಯಾದ ಬಳಿಕ; ಆಳುವ ಕಾಂಗ್ರೆಸ್ ಪಕ್ಷದ ಜಿಲ್ಲೆಯ ಶಾಸಕರೂ, ಸಚಿವರುಗಳೂ ಸಿಐಡಿಯಲ್ಲಿ ತಮಗೆ ವಿಶ್ವಾಸವಿಲ್ಲವೆಂದೂ, ಸದರಿ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಬೇಕೆಂದೂ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಆದಾಗ್ಯೂ ಯಾವುದೇ




ಪ್ರಗತಿ ತನಿಖೆಯಿಂದ ಆಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ತತ್‌ಕ್ಷಣ ಸಿಐಡಿಯಿಂದ ಹಿಂತೆಗೆದು ಸಿಬಿಐಗೆ ಹಸ್ತಾಂತರಿಸಬೇಕು ಎಂದು ಒತ್ತಾಯಿಸಿ 24 ಗಂಟೆಗಳ ಪ್ರತಿಭಟನಾ ಧರಣಿಯನ್ನು ಡಿವೈಎಫ್ಐ ಪಂಜಿಮೊಗರು ಘಟಕದ ನೇತೃತ್ವದಲ್ಲಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರುಗಡೆ ಸಪ್ಟೆಂಬರ್ 6 ರಂದು ಆರಂಭಿಸಿತ್ತು.

ಪ್ರತಿಭಟನೆಯನ್ನು ಉದ್ದೇಶಿಸಿ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ಹಾಗೂ ಕಾರ್ಪರೇಟರ್ ದಯಾನಂದ ಶೆಟ್ಟಿ, ಡಿವೈಎಫ್ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಧರಣಿ ಸತ್ಯಾಗ್ರಹವು ಮರುದಿನ ಬೆಳಿಗ್ಗೆ 11 ಗಂಟೆವರೆಗೆ ವ್ುಂದ್ುವ್ರಿದಿದ್ದು, ವಿವಿಧ ಸಂಘಟನೆಗಳ ನಾಯಕರು ಪ್ರತಿಭಟನಾಕಾರರನ್ನು ಬೆಂಬಲಿಸಿ ಮಾತನಾಡಿದರು.

ಸಿಬಿಐಗೆ ತನಿಖೆಯನ್ನು ಹಸ್ತಾಂತರಿಸಲು ಆಗ್ರಹಿಸಿ ಮುಖ್ಯಮಂತ್ರಿಯವರಿಗೆ ಬರೆದ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಪ್ರಯಾಣ ದರ ಏರಿಕೆ ವಿರುದ್ಧ ಡಿವೈಎಫ್ಐ ಪ್ರತಿಭಟನೆಗಳು:



ವಾ . ಉ.

ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಬ ಮಾಲಿಕರು ಬಸ್ ಪ್ರಯಾಣ ದರವ ಹಠಾತ್ ಏರಿಕೆ ಮಾಡಿದುದರ ವಿರುದ್ಧವಾ ಡಿವೈಎಫ್ಐನ ಘಟಕಗಳು ಅಲ್ಲ ಪ್ರತಿಭಟನಾ ಕಾರ್ಯಕ್ರಮವ ಹಮ್ಮಿಕೊಂಡಿದ್ದವು.

ಉಳ್ಳಾಲ ವಲಯದ ತೊ ಕ್ಕೋಟು ಜಂಕ್ಷನ್‌ನಲ್ಲಿ ಸಪ್ಟೆಂಬ 8 ರಂದು ಡಿವೈಎಫ್ಐ ಉಳ್ಳಾ ವಲಯ ಸಮಿತಿ ವತಿಯಿಂ ನಡೆದ ಪ್ರತಿಭಟನೆಯನ್ನುದ್ದೇಶಿ ವಲಯ ಕಾರ್ಯದರ್ಶಿ ಅಶೋ ಶೆಟ್ಟಿ ಮಾತನಾಡಿದರು. ಬ ಪ್ರಯಾಣ ದರವನ್ನು ಬಸ್ ಮಾಲಿಕ ಇಳಿಸದೇ ಇದ್ದಲ್ಲಿ ಚಳವಳಿ ಬೇರೆ ಸ್ವರೂ ಪಡೆಯಲಿದೆ ಎಂದು ಅವರು ಎಚ್ಚರಿ ನೀಡಿದರು. ಡಿವೈಎಫ್ಐನ ರೋಹಿದಾ ಅಬ್ಬಂಜರ, ಹರೀಶ್ ಕೆರೆಬೈಲ್, ಇಬ್ರಾಹಿ ಮದಕ, ಸಲೀಂ ಮದಕ, ರೋಹಿದಾ ಭಟ್ನಗರ ಮತ್ತಿತರರು ಭಾಗವಹಿಸಿದ್ದರು.

ಉಳ್ಳಾಲ ವಲಯದ ಅಂಬ್ಲಮೊಗ ಮದಕ, ಕುತ್ತಾರು, ಹರೇಕಳ ಅಲ್ಲ ಮಂಗಳೂರು ನಗರದ ಪಂಜಿಮೊ ಬಜಾಲು ಪಕ್ಕಲಡ್ಕ ಮೊದಲಾ ಕಡೆಗಳಲ್ಲಿ ಬಸ್ ಪ್ರಯಾಣ ದ ಏರಿಕೆ ವಿರುದ್ಧ ಸ್ಥಳೀಯ ಡಿವೈಎಫ್ ಘಟಕಗಳ ವತಿಯಿಂದ ಪ್ರತಿಭಟ ರಸ್ತೆ ತಡೆ ಮೊದಲಾದ ಕಾರ್ಯಕ್ರಮಗಳ ನಡೆದಿವೆ.



ಉಡುಪಿಯಲ್ಲಿ ಎಡ ಪಕ್ಷಗಳ ಜಿಲ್ಲಾ ಸಮಾವೇಶ:


ಪರ್ಯಾಯ ನೀತಿಗಳಿಗಾಗಿ ರಾಷ್ಟ್ರ ಮಟ್ಟದಲ್ಲಿ ನಡೆಯುತ್ತಿರುವ ಪ್ರಚಾರಾಂದೋಲನಗಳ ಭಾಗವಾಗಿ ಎಡಪಕ್ಷಗಳ ಉಡುಪಿ ಜಿಲ್ಲಾ ಮಟ್ಟದ ಸಮಾವೇಶವು ಆಗಸ್ಟ್ 4 2013 ರಂದು ಬನ್ನಂಜೆಯ ನಾರಾಯಣ ಗುರು ಸಭಾ ಭವನದಲ್ಲಿ ಜರಗಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಮಾಧವ ಅವರು ಸಮಾವೇಶವನ್ನು ಉದ್ಘಾಟಿಸಿದರು. ಸಿಪಿಐ ಜಿಲ್ಲಾ ನಾಯಕರಾದ ವಾಸುದೇವ ಕುಕ್ಯಾನ್ ಮಾತನಾಡಿದರು. ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಹಾಬಲ ವಡೇರಹೋಬಳಿ ವಂದಿಸಿದರು.

ನೀರಿನ ದರ ಏರಿಕೆ ವಿರೋಧಿಸಿ ಕುಂದಾಪುರದಲ್ಲಿ ಪ್ರತಿಕೃತಿ ದಹನ:

ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ನೀರಿನ ದರ ಏರಿಕೆ ಮಾಡಿರುವುದನ್ನು ವಿರೋಧಿಸಿ ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ಡಿವೈಎಫ್ಐ ಸಂಘಟನೆ ಶಾಂತಿಯುತ ಪ್ರತಿಭಟನೆಗಳನ್ನು ನಡೆಸಿಕೊಂಡು ಬಂದಿತ್ತು. ಇದಕ್ಕೆ ಕಿಂಚಿತ್ತೂ ಬೆಲೆ ಕೊಡದೆ, ಮಾತುಕತೆ ನಡೆಸಲು ಹೋದಾಗಲೂ ಲೇವಡಿ ಮಾಡಿದ ಪುರಸಭಾ ಅಧಿಕಾರಿಗಳ ವರ್ತನೆ ಪ್ರತಿಭಟನಾಕಾರರಿಗೆ ಆಕ್ರೋಶವನ್ನು ಉಂಟು ಮಾಡಿತ್ತು. ಈ ಹಿನ್ನೆಲೆಯಲ್ಲಿ ಸಪ್ಟೆಂಬರ್ 2 ರಂದು ನಗರದ ವಡೇರಹೋಬಳಿ ಶಾಂತಿ ನಿಕೇತನ ವಾರ್ಡ್ ಹಾಗೂ ಕಲ್ಲಾಗರ ವಾರ್ಡ್‌ಗಳಲ್ಲಿ ನೀರಿನ ದರ ಏರಿಕೆ ವಿರುದ್ಧ ರಚಿಸಲಾದ ಹೋರಾಟಗಳ ಸಮಿತಿಯ ನೇತೃತ್ವದಲ್ಲಿ ಪುರಸಭೆಯ ಮಹಾತ್ಮಗಾಂಧಿ ಪಾರ್ಕ್ ಎದುರು ಪುರಸಭಾ ಮುಖ್ಯ ಆಧಿಕಾರಿಯ ಪ್ರತಿಕೃತಿ ದಹನ ಮಾಡುವ ಮೂಲಕ ಪ್ರತಿಭಟನೆ ನಡೆಸಲಾಯಿತು. ಸಂಚಾಲಕ ರಾಜೇಶ್ ವಡೇರಹೋಬಳಿ ಮಾತನಾಡಿದರು. ಪುರಸಭಾ ಅಧಿಕಾರಿ ವರ್ಗದ ಸರ್ವಾಧಿಕಾ ಧೋರಣೆಯನ್ನು ಖಂಡಿಸಿ, ನೀರಿ ದರವನ್ನು ಇಳಿಸಿ ಮೊದಲಿನ ದರದಲ್ಲ ಮುಂದುವರಿಸುವ ತೀರ್ಮಾನವನ ಪುರಸಭಾ ಆಡಳಿತ ಕೈಗೊಳ್ಳುವವರೆಗ ಪ್ರತೀ ವಾರ್ಡ್‌ಗಳಲ್ಲಿಯೂ ಹೋರಾ ಮುಂದುವರಿಸಲಾಗುವುದು ಎಂದು ಎಚ್ಚರಿ ನೀಡಿದರು.

ಹೋರಾಟ ಸಮಿತಿಯ ಸಂಚಾಲಕರ ಹಾಗೂ ಡಿವೈಎಫ್ಐ ಕುಂದಾಪುರ ತಾಲ್ಲೂ ಸಂಚಾಲನ ಸಮಿತಿ ಸದಸ್ಯರು ಪ್ರತಿಭಟನ ನೇತೃತ್ವ ವಹಿಸಿದ್ದರು.





ಬಳ್ಳಾರಿಯಲ್ಲಿ ನಡೆದ ಎಡಪಕ್ಷಗಳ ಜಿಲ್ಲಾ ಸಮಾವೇಶ : ಸಿಪಿಐ ರಾಜ್ಯ ಮುಖಂಡರಾದ ಕಾಂ. ಸಿದ್ದನಗೌಡ ಪಾಟೀಲ ಮಾತನಾಡುತ್ತಿದ್ದು, ಸಿಪಿಐ(ಎಂ) ಮುಖಂಡರಾದ ಕಾಂ. ಆರ್.ಎಸ್ ಬಸವರಾಜ ಮತ್ತಿತ್ತರರು ಉಪಸ್ಥಿತರಿದ್ದಾರೆ.



ಸೊರಗುತ್ತಿದೆ ರೂಪಾಯಿ

ಅಮೆರಿಕದ ಡಾಲರ್ ಎದುರು ಮತ್ತು ವಿದೇಶಿ ಹಣದ ಎದುರು ಭಾರತದ ರೂಪಾಯಿಯ ಮೌಲ್ಯ ನಿರಂತರವಾಗಿ ಕುಸಿಯುತ್ತಿದೆ. ಈ ಬಗೆಗೆ ಏನೇನೋ ತರ್ಕಗಳು ಕುತರ್ಕಗಳು ನಡೆಯುತ್ತಿವೆ. ನಿಜಕ್ಕೂ ರೂಪಾಯಿಯ ಮೌಲ್ಯ ಕುಸಿಯುತ್ತಿರುವುದೇಕೆ ? ಜನರ ಬದುಕಿನ ಮೇಲೆ ಅದರ ಪರಿಣಾಮ ಏನು. ? ಒಂದು ಅವಲೋಕನ.

ರೂಪಾಯಿ ಡಾಲರ್ ದಶಕಗಳಚೆಗೆ 'ಕುಸಿದು ಬಂದ ದಾರಿ'

ವರ್ಷ	1 ಡಾಲರ್‌ಗೆ ರೂ.
1947	–1.00
74–75	–8.39
79–80	–7.86
84–85	–12.38
89–90	–17.01
90–91	–17.94
91–92	–24.47
94–95	–31.39
99–2000	–43.50
2004–2005	–44.93
2009–2010	–46.39
2010–2011	–45.57
2012	–57.15
ಮಾರ್ಚ್–2013	–67.63
ಅಗಸ್ಟ–2013	–65.55
ಸೆಪ್ಟೆಂಬರ್–2013	–68.26

ನಾಗರಾಜ್. ಕೆ.ಎಂ.

ಅಮೆರಿಕದ ಅರ್ಥ ವ್ಯವಸ್ಥೆ ಸರಿದಾರಿಗೆ ಹೊರಳುತ್ತಿರುವ ಮುನ್ಸೂಚನೆಗಳ ಆಧಾರದ ಲೆ, ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಸಧ್ಯದಲ್ಲೆ ಆರ್ಥಿಕ ಪರಿಹಾರ ಪ್ಯಾಕೇಜ್ ಸ್ಥಗಿತಗೊಳಿಸಲಿದೆ ಎಂಬ ವರದಿ, ಸಿರಿಯಾ ದೇಶದ ಮೇಲೆ ಅಮೆರಿಕಾ ಧಾಳಿ ನಡೆಸುವ ಸಂಭವ, ಯೂರೋ ವಲಯದ ಗ್ರೀಸ್, ಇಟಲಿ, ಸ್ಪೇನ್, ಪೋರ್ಚುಗಲ್ ಮುಂತಾದ ದೇಶಗಳಲ್ಲಿ ಮುಂದುವರೆಯುತ್ತಿರುವ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿ ಮತ್ತು ವಿಶ್ವ ಮಟ್ಟದಲ್ಲಿ ಬೆಳವಣಿಗೆಯ ಮುನ್ಸೂಚನೆಗಳು ನಿರಾಶಾದಾಯಕವಾಗಿರುವ ಹಿನ್ನೆಲೆಯಲ್ಲಿ, ವಿದೇಶಿ ಹೂಡಿಕೆದಾರರು ಉದಯೋನ್ಮುಖ ದೇಶಗಳಲ್ಲಿ ತಮ್ಮ ಹೂಡಿಕೆಯನ್ನು ಹಿಂತೆಗೆಯುತ್ತಿರುವುದರಿಂದ ಜಾಗತಿಕವಾಗಿ ಡಾಲರ್ ಮೇಲಿನ ಬೇಡಿಕೆ ತೀವ್ರವಾಗುತ್ತಿದೆ. ಈ ಪ್ರಕ್ರಿಯೆ ಭಾರತದಲ್ಲೂ ನಡೆಯುತ್ತಿದ್ದು, ರಫ್ತುಗಳು ಕುಂಠಿತವಾಗಿರುವುದರ ಜತೆಗೆ ಆಮದಿನಲ್ಲಿ ಹೆಚ್ಚಳವಾಗಿರುವುದರ ಪರಿಣಾಮವಾಗಿ, ರೂಪಾಯಿ ಮೌಲ್ಯ ದಿನೇ ದಿನೇ ಕುಸಿಯುತ್ತಿದ್ದು, ಅದು ನಮ್ಮ ಅರ್ಥ ವ್ಯವಸ್ಥೆಯ ಬುನಾದಿಯನ್ನೇ ಅಲುಗಾಡಿಸುವ ಹಂತಕ್ಕೆ ತಲುಪಿದೆ.

1947ರಲ್ಲಿ ಒಂದು ಡಾಲರ್ ಬೆಲೆ ಒಂದು ರೂಪಾಯಿಗೆ ಸಮನಾಗಿತ್ತು. ಆದರೆ, ಈಗ, ಒಂದು ಡಾಲರ್‌ನ ಬೆಲೆ 68 ರೂಪಾಯಿಗಳಿಗೆ ಏರಿದೆ. ಡಾಲರ್ ಎದುರು ಮಾತ್ರವಲ್ಲದೆ, ವಿಶ್ವದ ಎಲ್ಲ ಪ್ರಮುಖ ಕರೆನ್ಸಿಗಳ ಎದುರು ಕುಸಿಯುತ್ತಿದೆ. ಸಧ್ಯದಲ್ಲಿ ಬ್ರಿಟನ್ ಪೌಂಡ್ ಬೆಲೆ ರೂ. 105–107, ಯೂರೊ ಬೆಲೆ ರೂ. 92–93, ಸ್ವಿಸ್ ಫ್ರಾಂಕ್ ರೂ. 73–75ರ ಮಟ್ಟದಲ್ಲಿವೆ. ರೂಪಾಯಿ ಮಾತ್ರವಲ್ಲದೆ, ಉದಯೋನ್ಮುಖ ದೇಶಗಳಾದ ಬ್ರೆಸಿಲ್, ದಕ್ಷಿಣ ಆಫ್ರಿಕಾ, ಅರ್ಜಂಟೀನಾ ಮುಂತಾದ ದೇಶಗಳ ಕರೆನ್ಸಿಗಳು ಸಹ ಡಾಲರ್ ಎದುರು ಕುಸಿಯುತ್ತಿವೆ. ಇದು ಡಾಲರ್ ಸೃಷ್ಟಿಸಿರುವ ಅವಾಂತರ, ದೊಡ್ಡಣ್ಣ ನಡೆದದ್ದೇ ದಾರಿ; ಹೇಳಿದ್ದೇ ವೇದವಾಕ್ಯ.

ಅಂತರಾಷ್ಟ್ರೀಯ ವ್ಯಾಪಾರ–ವಹಿವಾಟುಗಳಲ್ಲಿ ಅಮೆರಿಕ ಡಾಲರ್ ಜಾಗತಿಕ ಕರೆನ್ಸಿಯಾಗಿ ಮುಂದುವರೆಯುತ್ತಿರುವುದರಿಂದ, ಅಮೆರಿಕವು ಯಾವುದೇ ಮಿತಿಯಿಲ್ಲದೆ ಡಾಲರ್‌ಗಳನ್ನು ಸರಬರಾಜು ಮಾಡುತ್ತಿದೆ. ಇದು ಬೇರೆ ಯಾವುದೇ ದೇಶಕ್ಕೂ ಇಲ್ಲದ, ಕೇವಲ ಅಮೇರಿಕಾಗೆ ಮೀಸಲಾದ ಒಂದು ವಿಶೇಷ ಸವಲತ್ತು. ಅಮೇರಿಕ ಈ ಪರಿಸ್ಥಿತಿಯ ದುರ್ಲಾಭ ಪಡೆಯುತ್ತಿರುವುದು ಆಶ್ಚರ್ಯವೇನಲ್ಲ.

ಇಪ್ಪತ್ತೆರಡು ವರ್ಷಗಳಿಂದಲೂ ಜಾರಿಯಲ್ಲಿರುವ ನವ–ಉದಾರವಾದಿ ಅರ್ಥಿಕ ಸುಧಾರಣೆಗಳ ಪರಿಣಾಮವಾಗಿ ದೇಶದಲ್ಲಿ ಒಂದು ಸಂದಿಗ್ಧ ಪರಿಸ್ಥಿತಿ ಉಂಟಾಗಿದೆ. ಶ್ರೀಮಂತರು–ಬಡವರ ನಡುವಿನ ಅಂತರ ಆಳವಾಗುತ್ತಿದೆ. ಜನಸಾಮಾನ್ಯರ ಸಂಕಷ್ಟಗಳಿಗೆ ಕೊನೆ–ಮೊದಲಿಲ್ಲ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಡಾಲರ್ ಎದುರು ರೂಪಾಯಿ ಕುಸಿತವೂ ಗಾಯದ ಮೇಲೆ ಬರೆ ಎಳೆದಂತಾಗಿದೆ. ನಮ್ಮ ವಿದೇಶ ವ್ಯಾಪಾರ–ವಹಿವಾಟುಗಳಲ್ಲಿ ರಫ್ತಿಗಿಂತ ಆಮದು ಹೆಚ್ಚಿದ್ದು ನಾವು ಹೊರಗಿನವರಿಗೆ ಕೊಡಬೇಕಾಗಿರುವ ವಿದೇಶಿ ವಿನಿಮಯದ ಕೊರತೆ (ಅಂದರೆ ಡಾಲರ್‌ನ ಕೊರತೆ) ವರ್ಷದಿಂದ ವರ್ಷಕ್ಕೆ ಏರುತ್ತಿದೆ. ನಮ್ಮ ಆಮದಿನಲ್ಲಿ, ತೈಲ, ಬಂಗಾರ, ಕಲ್ಲಿದ್ದಲು, ಗೊಬ್ಬರ, ಅಡಿಗೆ ಎಣ್ಣೆ, ಬೇಳೆ ಕಾಳು ಪ್ರಮುಖವಾಗಿವೆ. ಕಚ್ಚಾ ತೈಲ ಬೆಲೆ ಸಿರಿಯಾದಲ್ಲಿರುವ ಉದ್ವಿಗ್ನ ಪರಿಸ್ಥಿತಿಯ ನೆಪದಲ್ಲಿ ಹಿಗ್ಗಾ–ಮುಗ್ಗಾ ಏರಿದೆ. ಪೆಟ್ರೋಲ್ ಬೆಲೆ ಲೀಟರ್‌ಗೆ ರೂ. 82.20ರ ಮಟ್ಟ ತಲುಪಿದ್ದು, ಡೀಸೆಲ್ ಮತ್ತು ಅನಿಲ ಬೆಲೆಗಳು ಮತ್ತಷ್ಟು ಹೆಚ್ಚಾಗುವ ಸೂಚನೆಗಳು ಸ್ಪಷ್ಟವಾಗಿವೆ. ತೈಲ ಬೆಲೆ ಏರಿಕೆಯ ಪರಿಣಾಮವಾಗಿ ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ಯದ್ವಾ ತದ್ವಾ ಏರಿಕೆಯಾಗಿ, ಜನಸಾಮಾನ್ಯರು ತತ್ತರಿಸಿದ್ದಾರೆ. ಹಗರಣಗಳಲ್ಲೇ ಮುಳುಗಿರುವ ಸರ್ಕಾರದ ಅಸ್ತಿತ್ವದ ಮೇಲೆ ಅನುಮಾನಪಡುವಂತಾಗಿದೆ. ಪ್ರಪಂಚದಲ್ಲಿಯೆ ಅತಿ ಹೆಚ್ಚಿನ ಬಂಗಾರದ ದಾಸ್ತಾನು ನಮ್ಮ ಜನರ ಬಳಿ ಇದೆ ಆದರೂ, ಬಂಗಾರದ ವ್ಯಾಮೋಹ ಮತ್ತು ಬಂಗಾರದ ಮೇಲೆ ಹೂಡಿಕೆ ಮಾಡಿಟ್ಟುಕೊಳ್ಳುವ ಕೆಲವು ಜೂಜುಕೋರರು ಜನಸಾಮಾನ್ಯರ ಹಿತ ಬಲಿಕೊಟ್ಟು ಯತೇಚ್ಛವಾಗಿ ಬಂಗಾರ ಆಮದು ಮಾಡಿಕೊಳ್ಳುತ್ತಿದ್ದಾರೆ. ನಾನೂರು ವರ್ಷಗಳಾದರೂ ಮುಗಿಯದಷ್ಟು ಕಲ್ಲಿದ್ದಲು ನಿಕ್ಷೇಪ ದೇಶದಲ್ಲಿದ್ದರೂ, ಕಂಡರಿಯದ ಮಟ್ಟದ ಕಲ್ಲಿದ್ದಲು ಗಣಿ ಹಂಚಿಕೆ ಹಗರಣಗಳಿಂದ ಕಿಂಚಿತ್ತೂ ಎಚ್ಚರಗೊಳ್ಳದ ಸರ್ಕಾರದ ನೀತಿಗಳಿಂದಾಗಿ ದುಬಾರಿ ಬೆಲೆ ತೆತ್ತು ಕಲ್ಲಿದ್ದಲು ಆಮದಾಗುತ್ತಿದೆ. ಈ ವ್ಯವಹಾರಗಳಲ್ಲಿ ತೊಡಗಿರುವ ಮಧ್ಯವರ್ತಿಗಳು, ಗುತ್ತಿಗೆದಾರರು ಮತ್ತು ಜೂಜುಕೋರರು ಮಿತಿ ಇಲ್ಲದ ಲಾಭಗಳಿಸುತ್ತಿದ್ದಾರೆ. ದೇಶದ ಆರ್ಥಿಕ ಸಂಕಷ್ಟಗಳ, ತೀವ್ರವಾಗುತ್ತಿರುವ ಹಣದುಬ್ಬರ (ಬೆಲೆ ಏರಿಕೆ) ಮತ್ತು ಏರುತ್ತಿರುವ ಚಾಲ್ತಿ ಖಾತೆ ಕೊರತೆ ಹಾಗೂ ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ 'ಉಂಡೂ ಹೋದ ; ಕೊಂಡೂ ಹೋದ' ಅನ್ನುವಂತಿರುವ ವಿದೇಶಿ ಹೂಡಿಕೆದಾರರ ವರ್ತನೆಗಳಿಂದ ರೂಪಾಯಿ ಕುಸಿತ ಮುಂದುವರಿಯುತ್ತಿದೆ. ಮುಂದಿನ ಆರು ತಿಂಗಳೊಳಗೆ ಡಾಲರ್ ಎದುರು ರೂಪಾಯಿ 72ರ ಮಟ್ಟ ತಲುಪಲಿದೆ ಎನ್ನುವ ಸ್ಯಾಕ್ಸ್‌ನ ಅಂದಾಜು ಆತಂಕಕಾರಿಯಾಗಿದೆ.

ರೂಪಾಯಿ ಕುಸಿತದ ಬಗ್ಗೆ ನಮ್ಮ ಮಾಧ್ಯಮಗಳು ಮೂಡಿಸುತ್ತಿರುವ ಅಭಿಪ್ರಾಯಗಳು ಬೇರೆ ರೀತಿಯಲ್ಲಿವೆ. ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ಹರಿಕಾರರು ಮತ್ತು ಅವರ ಭಟ್ಟಂಗಿಗಳ ಮುಖವಾಣಿಯಂತಿರುವ ಮಾಧ್ಯಮಗಳ ಪ್ರಕಾರ ಆಹಾರ ಭದ್ರತಾ ವಿಧೇಯಕ ಜಾರಿಯಿಂದ ಸರ್ಕಾರದ ಮೇಲಾಗುವ ಸಬ್ಸಿಡಿ ಹೊರೆಯು ಹೂಡಿಕೆದಾರರ ಆತಂಕಕ್ಕೆ ಕಾರಣವಾಗಿ ಅವರು ಹೂಡಿಕೆ ಹಿಂತೆಗೆಯುತ್ತಿರುವುದರಿಂದ ರೂಪಾಯಿ ದುರ್ಬಲಗೊಂಡು ಕುಸಿಯುತ್ತಿದೆ. ರೂಪಾಯಿ ಕುಸಿತವು ರಫ್ತುದಾರರಿಗೆ, ಅದರಲ್ಲೂ ಸಾಫ್ಟ್‌ವೇರ್ ಕಂಪೆನಿಗಳಿಗೆ ಒಂದು ವರವಾಗಿ ಪರಿಣಮಿಸಿದೆ. ಅವರು ರೂಪಾಯಿಗಳಲ್ಲಿ ಖರ್ಚುಮಾಡಿ ಡಾಲರ್‌ಗಳಲ್ಲಿ ಸಂಪಾದಿಸುತ್ತಾರೆ. ಆದರೂ, ನಮ್ಮ ಬೇರೆ ಪದಾರ್ಥಗಳ ರಫ್ತು ಕುಂಠಿತವಾಗಿರುವುದರಿಂದ ಉದ್ಯೋಗಗಳ ಮೇಲೆ ಭಾರಿ ಹೊಡೆತ ಬಿದ್ದಿದೆ. ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಮುಚ್ಚಿದ ಹಾಗೆ ಪೆಟ್ರೋಲಿಯಂ ಮಂತ್ರಿ ವೀರಪ್ಪ ಮೊಯಿಲಿಯವರು ರೂಪಾಯಿ ಕುಸಿತವನ್ನು ತಡೆದ ಹಾಗೆ ತೋರಿಸಿಕೊಳ್ಳಲು ನೇರವಾಗಿ ರೂಪಾಯಿ ಪಾವತಿಮಾಡಿ ಇರಾನಿನಿಂದ ಪೆಟ್ರೋಲಿಯಂ ಆಮದು ಹೆಚ್ಚಿಸುವ ಮಾತನಾಡಿದ್ದಾರೆ. ವಾಸ್ತವವಾಗಿ, ಈ ಸಂಬಂಧವಾಗಿ ಇರಾನ್ ಜೊತೆ ಮಾಡಿಕೊಂಡಿರುವ ಒಪ್ಪಂದವನ್ನು ಸರಿಯಾಗಿ ಅನುಷ್ಠಾನಗೊಳಿಸಿಲ್ಲ. ಬದಲಿಗೆ, ಈ ವರ್ಷ ಇರಾನಿನಿಂದ ಮಾಡಿಕೊಂಡ ತೈಲ ಆಮದು ಪ್ರಮಾಣ ಹಿಂದಿನ ವರ್ಷದಲ್ಲಿ ಆಮದು ಮಾಡಿಕೊಂಡ ತೈಲದ ಮೂರನೇ ಒಂದು ಭಾಗದಷ್ಟು ಕಡಿಮೆ ಆಗಿದೆ. ಕಾರಣ, ಅಮೆರಿಕಾದ ಒತ್ತಡ.

ರೂಪಾಯಿ ಕುಸಿತಕ್ಕೂ ಮುಂಬರುವ ಮಹಾ ಚುನಾವಣೆಗಳಿಗೂ ಸಂಬಂಧವಿದೆ ಎಂಬುದು ಕೆಲವರ ಅಂಬೋಣ. ಕಾಕತಾಳೀಯವಾದರೂ, 1984ರಿಂದ ಈವರೆಗೆ ನಡೆದಿರುವ ಎಂಟು ಲೋಕಸಭಾ ಮಹಾ ಚುನಾವಣೆಗಳ ಮುನ್ನ, ಪ್ರತಿ ಸಂದರ್ಭದಲ್ಲೂ ಡಾಲರ್ ಎದುರು ರೂಪಾಯಿ 13%ನಿಂದ 25%ವರೆಗೆ ಕುಸಿತ ಕಂಡಿದೆ ಎಂದು ಅಂಕಿ–ಅಂಶಗಳ ಮಾಹಿತಿಯೊಂದಿಗೆ ಅಂದಾಜಿಸಲಾಗಿದೆ. 2013ರಲ್ಲಿ ಆಗಿರುವ ಕುಸಿತವೂ ಅಂದಾಜು 25% ಮಟ್ಟದಲ್ಲಿದೆ. ಹಲವು ಪ್ರಭಾವಿ ವ್ಯಕ್ತಿಗಳು ಕೆಲವರ್ಷಗಳ ಹಿಂದೆ ದುರ್ಮಾರ್ಗದಲ್ಲಿ ಸಂಪಾದಿಸಿದ ಕಪ್ಪು ಹಣವನ್ನು ಬೇನಾಮಿ ರೂಪದಲ್ಲಿ ಡಾಲರ್ ಕೊಂಡು (ಉದಾ : 1 ಡಾಲರ್ = 40 ರೂ.) ಅದನ್ನು ದೇಶದ ಹೊರಗೆ ಸಾಗಿಸಿ, ಅದರ ಕೊಳೆ ತೆಗೆದು () ಅದೇ ಹಣವನ್ನು ರಾಜಮಾರ್ಗದಲ್ಲಿ ಒಳಹರಿಸಿ ರೂಪಾಯಿ – ಡಾಲರ್ ಬೆಲೆಯಲ್ಲಾದ ಏರಿಕೆಯಿಂದ (ಉದಾ : ಡಾಲರ್ ಬೆಲೆ ಸಧ್ಯದಲ್ಲಿ ರೂ. 68) ಭಾರಿ ಲಾಭ ಗಳಿಸುತ್ತಾರೆ. ಹೂಡಿಕೆಯೂ ಆಯ್ತು, ಚುನಾವಣೆಯೂ ಆಯ್ತು.

●

ಬಾಲಂಗೋಚಿ :

ಅಂತರ್ಜಾಲದಲ್ಲಿ ಹೀಗೊಂದು ಸಾಂದರ್ಭಿಕವಾದ ಜೋಕ್ ಹರಿದಾಡುತ್ತಿದೆ. ದೇಶದ ಅರ್ಥವ್ಯವಸ್ಥೆಯ ಪರಿಪಾಟಲಿನಿಂದ ಬೇಸತ್ತಿದ್ದ ಪತ್ರಕರ್ತನೊಬ್ಬ ಪ್ರಧಾನಿ ಮನಮೋಹನ್ ಸಿಂಗ್‌ರನ್ನು ಆಟ/ಕ್ರೀಡೆಗಳಲ್ಲಿ ಅವರಿಗಿರುವ ಆಸಕ್ತಿಯ ಬಗ್ಗೆ ಪ್ರಶ್ನಿಸುತ್ತಾನೆ.

ಪ್ರ : ತಾವು ಯಾವ ಆಟವನ್ನು ಹೆಚ್ಚು ಇಷ್ಟಪಡುತ್ತೀರಿ?

ಉ : ಕ್ರಿಕೆಟ್. ಅದೂ, ಭಾರತದಲ್ಲಿ ಆಡಿದಾಗ.

ಪ್ರ : ಬೋಲಿಂಗ್ ಅಥವಾ ಬ್ಯಾಟಿಂಗ್‌ನಲ್ಲಿ ತಾವು ಯಾವುದನ್ನು ಹೆಚ್ಚು ಇಷ್ಟಪಡುತ್ತೀರಿ?

ಉ : ನಿಜ ಹೇಳಬೇಕೆಂದರೆ, ಆಟಕ್ಕಿಂತ ಮುಂಚೆ ಟಾಸ್ ಮಾಡುವುದನ್ನು (ನಾಣ್ಯ ಚಿಮ್ಮುವುದನ್ನು) ನಾನು ಬಹಳ ಇಷ್ಟಪಡುತ್ತೇನೆ.

ಪ್ರ : ಏಕೆ? ವಿವರಿಸುತ್ತೀರಾ?

ಉ : ಏಕೆಂದರೆ, ರೂಪಾಯಿ ಮೇಲೆ ಹೋಗುವುದು ಅದೊಂದೇ ಸಂದರ್ಭದಲ್ಲಿ.

ಮುಜಫ್ಫರ್‌ನಗರ- ಒಂದು ಎಚ್ಚರಿಕೆಯ ಗಂಟೆ

ಸೀತಾರಾಂ ಯೆಚೂರಿ



ಮನೆಮಾರು ಬಿಟ್ಟು 'ಸುರಕ್ಷಿತ' ಸ್ಥಳಗಳತ್ತ

ಮುಝಪ್ಫರ್‌ನಗರ ಗಲಭೆಗಳನ್ನು ನಿಯಂತ್ರಿಸುವಲ್ಲಿ ಉತ್ತರ ಪ್ರದೇಶ ಆಡಳಿತದ ವೈಫಲ್ಯಗಳತ್ತ ಬೊಟ್ಟು ಮಾಡಿ ತೋರಿಸುವಾಗಲೇ ಆರೆಸ್ಸೆಸ್-ಬಿಜೆಪಿ ಕೂಟದ ಒಟ್ಟಾರೆ ಹೂಟ ಮತ್ತು ರಾಜಕೀಯ ಆಟವನ್ನು ಕೂಡ ನಿರ್ಲಕ್ಷಿಸುವಂತಿಲ್ಲ. ಆರೆಸ್ಸೆಸ್ 2014ರ ಚುನಾವಣೆಗಳಿಗಾಗಿ ಬಿಜೆಪಿಗೆ ನಿರ್ದೇಶನ ನೀಡುತ್ತಿದೆ ಎಂಬುದೀಗ ಸುಸ್ಪಷ್ಟ. ಉತ್ತರ ಪ್ರದೇಶದಲ್ಲಿ ಕಳೆದ ಒಂದು ವರ್ಷದಲ್ಲಿ ಹಲವು ಕೋಮುವಾದಿ ಗಲಭೆಗಳು ನಡೆದಿವೆ.

ಮುಝಫ್ಫರ್‌ನಗರದ ಗಲಭೆಗಳು ಇತ್ತೀಚಿನ ವರ್ಷಗಳ ಅತ್ಯಂತ ಕೆಟ್ಟ ಕೋಮುವಾದೀ ಘಟನೆ. ಈ ಜಿಲ್ಲೆಯಲ್ಲಿ 32 ಮಂದಿ ಸತ್ತಿದ್ದಾರೆ, ಹಲವಾರು ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ ಚಿಕ್ಕ ಮಕ್ಕಳೂ ಸೇರಿದ್ದಾರೆ. ಆತಂಕದ ಸಂಗತಿಯೆಂದರೆ ಹಿಂಸಾಚಾರ ಹಳ್ಳಿಗಳಿಗೂ ಹರಡಿ ಹಲವಾರು ಮಂದಿ ತಮ್ಮ ಮನೆ-ಮಾರು ಬಿಟ್ಟೋಡುವಂತಾಗಿದೆ. ಒಂದು ಹಳ್ಳಿಯಲ್ಲಿ ಹುಡುಗಿಯನ್ನು ಚುಡಾಯಿಸಿದ ಒಂದು ಘಟನೆ ಒಬ್ಬ ಮುಸ್ಲಿಂ ಯುವಕನ ಹತ್ಯೆ, ಅದಕ್ಕೆ ಪ್ರತೀಕಾರವಾಗಿ ಇಬ್ಬರು ಹಿಂದೂ ಯುವಕರ ಹತ್ಯೆ ವ್ಯಾಪಕ ಹಿಂಸಾಕೃತ್ಯಗಳಿಗೆ ಎಡೆ ಮಾಡಿಕೊಟ್ಟಿದೆ.

ಉತ್ತರ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಕೋಮುವಾದಿ ಘಟನೆಗಳ ಸರಣಿಯ ಹಿನ್ನೆಲೆಯಲ್ಲಿ ಈ ಗಲಭೆಗಳು ನಡೆದಿವೆ. ಫೆಬ್ರುವರಿ 2012ರಲ್ಲಿ ಸಮಾಜವಾದಿ ಪಕ್ಷದ ಸರಕಾರ ರಚನೆಯಾದ ನಂತರ ಕೋಸಿಕಲಾನ್, ಬರೇಲಿ, ಪ್ರತಾಪಗಡ್, ಫೈಝಾಬಾದ್ ಮತ್ತು ಇತರ ಸ್ಥಳಗಳಲ್ಲಿ ಕೋಮುವಾದಿ ಹಿಂಸಾಚಾರಗಳು ನಡೆದಿವೆ. ಇಂತಹ ಘಟನೆಗಳಲ್ಲಿ ಕೋಸಿಕಲಾನ್, ಫೈಝಾಬಾದ್ ಮುಂತಾದೆಡೆಗಳಲ್ಲಿ ಹಿಂಸಾಚಾರವನ್ನು ಸುತ್ತಲಿನ ಹಳ್ಳಿಗಳಿಗೆ ವಿಸ್ತರಿಸುವ ಪ್ರಯತ್ನಗಳೂ ನಡೆದವು.

ಮುಝಫ್ಫರ್‌ನಗರದಲ್ಲಿ ಆಡಳಿತವಂತೂ ಖಂಡಿತವಾಗಿಯೂ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸಡಿಲತೆ ತೋರಿದೆ. ಆಗಸ್ಟ್ 27ರಂದು ಆರಂಭದ ಘಟನೆ ನಡೆದ ನಂತರ ಕೋಮುವಾದಿ ಶಕ್ತಿಗಳಿಗೆ ಅದರ ದುರುಪಯೋಗ ಪಡೆಯಲು ಪೂರ್ಣ ಹತ್ತು ದಿನಗಳ ಅವಕಾಶ ಕೊಡಲಾಯಿತು. ಈ ನಡುವೆ ಜಾಟ್ ಖಾಪ್ ಪಂಚಾಯತುಗಳು ನಡೆದವು, ಸಪ್ಟಂಬರ್ 7 ರಂದು ನಡೆದ 'ಮಹಾಪಂಚಾಯತ್'ನ್ನು ಭಾವೋದ್ರೇಕಗಳನ್ನು ಬಡಿದೆಬ್ಬಿಸಲು ಬಳಸಲಾಯಿತು. ನಂತರ ಗಲಭೆಗಳು ಭುಗಿಲೆದ್ದವು.

ಕಳೆದ ಒಂದು ವರ್ಷಗಳ ಕೋಮುವಾದಿ ಘಟನೆಗಳ ಉಬ್ಬರದ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಸರಕಾರ ಹೆಚ್ಚು ಜಾಗರೂಕವಾಗಿರಬೇಕಿತ್ತು. ಆಡಳಿತದ- ವೈಫಲ್ಯಗಳತ್ತ ಬೊಟ್ಟು ಮಾಡಿ ತೋರಿಸುವಾಗಲೇ ಆರೆಸ್ಸೆಸ್-ಬಿಜೆಪಿ ಕೂಟದ ಒಟ್ಟಾರೆ ಹೂಟ ಮತ್ತು ರಾಜಕೀಯ ಆಟವನ್ನು ಕೂಡ ನಿರ್ಲಕ್ಷಿಸುವಂತಿಲ್ಲ. ನಾಲ್ಕು ಬಿಜೆಪಿ ಶಾಸಕರಿಗೆ ಜನಗಳನ್ನು ಉದ್ರೇಕಿಸುವ ಕೆಲಸಗಳನ್ನು ವಹಿಸಲಾಗಿತ್ತು. ಅವರಲ್ಲೊಬ್ಬರು ಮುಸ್ಲಿಮರು ಹಿಂದೂಗಳನ್ನು ಕೊಲ್ಲುವ ಒಂದು ಖೋಟಾ ವೀಡಿಯೋವನ್ನು ಅಂತರ್ಜಾಲದಲ್ಲಿ ಪಸರಿಸಿದರು ಎನ್ನಲಾಗಿದೆ. ವಾಸ್ತವವಾಗಿ ಇದು ಪಾಕಿಸ್ತಾನದಲ್ಲಿ ಕೆಲವು ಸಮಯದ ಹಿಂದೆ ನಡೆದ ಒಂದು ಘಟನೆಯ ವೀಡಿಯೋ.

ಕಳೆದ ಒಂದು ವರ್ಷದಲ್ಲಿ ಆರೆಸ್ಸೆಸ್ ಮತ್ತು ಅದರ ಬಾಲಂಗೋಚಿ ಸಂಘಟನೆಗಳು ಕೋಮುದೃಷ್ಟಿಯಿಂದ ಸೂಕ್ಷ್ಮವಾದ ಪ್ರಶ್ನೆಗಳನ್ನು ಎತ್ತಲು, ಗಲಭೆಗಳನ್ನು ಸೃಷ್ಟಿಸಲು ವ್ಯವಸ್ಥಿತ ಪ್ರಯತ್ನ ನಡೆಸಿವೆ. ಆ ರಾಜ್ಯದ ಪಶ್ಚಿಮ ಭಾಗದಲ್ಲಿ ಗೋಹತ್ಯೆ-ವಿರೋಧಿ ಪ್ರಚಾರ ಅಂತವುಗಳಲ್ಲಿ ಒಂದು. ಫೈಝಾಬಾದಿನಲ್ಲಿ ಹಿಂಸಾಚಾರ ಭುಗಿಲೇಳುವ ಮೊದಲು ಯೋಗಿ ಆದಿತ್ಯನಾಥ ಮಾಡಿದ ಉದ್ರೇಕಕಾರಿ ಭಾಷಣಗಳು ಇನ್ನೊಂದು ಉದಾಹರಣೆ. ಆರೆಸ್ಸೆಸ್ ಒಂದು ಕೋಮುವಾದಿ ಧ್ರುವೀಕರಣ ತರಲು ತನ್ನ ಸಂಪನ್ಮೂಲಗಳನ್ನು ಅಲ್ಲಿ ಅಣಿಗೊಳಿಸಿದೆ. ಇದು 2014ರ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಪ್ರಯೋಜನ ಒದಗಿಸುವುದಕ್ಕಾಗಿ ಅದರ ಯೋಜನೆ. ಮುಝಫ್ಫರ್‌ನಗರದ ಗಲಭೆಗಳನ್ನು ಜಾಟ್ ಜಾತಿಯವರನ್ನು ಬಿಜೆಪಿ ಪಾಳೆಯಕ್ಕೆ ಗೆದ್ದುಕೊಳ್ಳಲು ಬಳಸಲಾಗುತ್ತದೆ.

ಗುಜರಾತಿನಲ್ಲಿ ನರೇಂದ್ರ ಮೋದಿಯವರ ಬಲಗೈ ಬಂಟನಾಗಿದ್ದ ಅಮಿತ್ ಶಹಾರನ್ನು ಬಿಜೆಪಿ ಎರಡು ತಿಂಗಳ ಹಿಂದೆ ಉತ್ತರ ಪ್ರದೇಶದಲ್ಲಿ ಪಕ್ಷದ ವ್ಯವಹಾರಗಳ ಉಸ್ತುವಾರಿಗೆ ಹಚ್ಚಿತು. ಆತನ ಕೆಲಸ ಆರಂಭವಾದದ್ದು ಅಯೋಧ್ಯೆಯಲ್ಲಿನ ತಾತ್ಕಾಲಿಕ ರಾಮದೇವಸ್ಥಾನಕ್ಕೆ ಒಂದು ಭೇಟಿಯೊಂದಿಗೆ. ಅಂದಿನಿಂದ ಆತ ಹಿಂದುತ್ವ ಅಜೆಂಡಾವನ್ನು ಮುಂದಿಡಲು ತತ್ಪರತೆಯಿಂದ ಪ್ರಯತ್ನಿಸುತ್ತಿದ್ದಾರೆ.

ಕಳೆದ ಕೆಲವು ತಿಂಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ಕೋಮುವಾದಿ ಘಟನೆಗಳಲ್ಲಿ ಗಣನೀಯ ಹೆಚ್ಚಳವಾಗಿದೆ. ಜಮ್ಮುವಿನ ಕಿಶ್ತ್ವರ್‌ನಲ್ಲಿ, ಬಿಹಾರಿನ ನವಡ ಮತ್ತು ಬೆಟ್ಟಿಯದಲ್ಲಿ ಹಿಂದು-ಮುಸ್ಲಿಂ ಘರ್ಷಣೆಗಳು ಕಾಣ ಬಂದವು. ಇದರಲ್ಲಿ ಆರೆಸ್ಸೆಸ್-ಬಿಜೆಪಿಯೇ ಆಕ್ರಮಣಕಾರೀ ಪಕ್ಷ. ಬೆಟ್ಟಿಯ, ನವಡಗಳಲ್ಲಂತೂ ಹಿಂಸಾಚಾರಕ್ಕೆ ಇಳಿದ ಜನಜಂಗುಳಿ ನರೇಂದ್ರ ಮೋದಿ-ಪರ ಘೋಷಣೆಗಳನ್ನು ಕೂಗಿದವು ಎಂದು ವರದಿಯಾಗಿದೆ.

ಆರೆಸ್ಸೆಸ್ 2014ರ ಚುನಾವಣೆಗಳಿಗಾಗಿ ಬಿಜೆಪಿಗೆ ನಿರ್ದೇಶನ ನೀಡುತ್ತಿದೆ ಎಂಬುದು ದಿಲ್ಲಿಯಲ್ಲಿ ಸಪ್ಟಂಬರ್ 8 ಮತ್ತು 9ರಂದು ಆರೆಸ್ಸೆಸ್ ಮತ್ತು ಅದರ ಬಾಲಂಗೋಚಿ ಸಂಘಟನೆಗಳು ಸಂಸತ್ ಚುನಾವಣೆಗಳಿಗೆ ಕಾರ್ಯತಂತ್ರಗಳನ್ನು ರೂಪಿಸಲು ಒಂದು ರಹಸ್ಯ ಸಭೆ ನಡೆಸಿದ ರೀತಿಯಿಂದಲೇ ಸ್ಪಷ್ಟ. ಈ ಸಭೆಯಲ್ಲಿ ರಾಜನಾಥ್ ಸಿಂಗ್, ಎಲ್.ಕೆ.ಅಡ್ವಾಣಿ ಮತ್ತು ನರೇಂದ್ರ ಮೋದಿ ಸೇರಿದಂತೆ ಎಲ್ಲ ಬಿಜೆಪಿ ನಾಯಕರೂ ಭಾಗವಹಿಸಿದ್ದರು. ಆರೆಸ್ಸೆಸ್ ನಿರ್ದೇಶನದಂತೆ ಮೋದಿಯವರನ್ನು ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಪ್ರಕಟಿಸಲು ಬಿಜೆಪಿ ಸಿದ್ಧಗೊಳ್ಳುತ್ತಿದೆ.

ಕೋಮುವಾದಿ ಘಟನೆಗಳಲ್ಲಿ ಏರಿಕೆ ಮತ್ತು ಹಿಂದುತ್ವ ಪಡೆಯ ಪಾತ್ರದ ಬಗ್ಗೆ ಸಿಪಿಐ(ಎಂ) ಎಚ್ಚರಿಕೆ ನೀಡುತ್ತಲೇ ಬಂದಿದೆ. ಮುಂದಿನ ತಿಂಗಳು ಅಕ್ಟೋಬರ್‌ನಲ್ಲಿ ದಸರಾ, ದುರ್ಗಾಪೂಜೆ, ಬಕ್ರೀದ್ ಹಬ್ಬಗಳು ಬರಲಿವೆ. ಇವು, ಧಾರ್ಮಿಕ ಮೆರವಣಿಗೆಗಳು ಸೂಕ್ಷ್ಮ ಪ್ರದೇಶಗಳಲ್ಲಿ ಹಾದು ಹೋಗುವಾಗ ಗಲಭೆಗಳನ್ನು ಸೃಷ್ಟಿಸುವ ಸಂದರ್ಭಗಳು. ಕೇಂದ್ರ ಸರಕಾರ ಮತ್ತು ರಾಜ್ಯ ಆಡಳಿತಗಳು ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲು ಮತ್ತು ಎಲ್ಲಿ ಗಲಭೆ ಸೃಷ್ಟಿಸಲು ಪ್ರಯತ್ನಿಸಿದರೂ, ಅದನ್ನು ಬುಡದಲ್ಲೇ ಚಿವುಟಿ ಹಾಕಲು ಎಚ್ಚರದಿಂದಿರಬೇಕು.

ಮುಝಫ್ಫರ್‌ನಗರ ಒಂದು ಎಚ್ಚರಿಕೆ ಗಂಟೆ. ಕೋಮುವಾದಿ ಸಂಘಟನೆಗಳು ಯಾವುದೇ ಸಮುದಾಯಕ್ಕೆ ಸೇರಿರಲಿ, ಅವನ್ನು ದೂರ ತಳ್ಳಿ ಏಕಾಂಗಿಯಾಗಿಸಲು ಸರ್ವಪ್ರಯತ್ನ ನಡೆಸಬೇಕು. ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಮತ್ತು ಎಡ ಪಕ್ಷಗಳು ಆರೆಸ್ಸೆಸ್-ಬಿಜೆಪಿ ಕೂಟದ ತಂತ್ರಗಳನ್ನು ಬಯಲಿಗೆಳೆಯಲು ಐಕ್ಯ ಪ್ರಯತ್ನ ನಡೆಸಬೇಕು.



ಕಳೆದ ಕೆಲವು ತಿಂಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ಕೋಮುವಾದಿ ಘಟನೆಗಳಲ್ಲಿ ಗಣನೀಯ ಹೆಚ್ಚಳವಾಗಿದೆ. ಜಮ್ಮುವಿನ ಕಿಶ್ತ್ವರ್‌ನಲ್ಲಿ, ಬಿಹಾರಿನ ನವಡ ಮತ್ತು ಬೆಟ್ಟಿಯದಲ್ಲಿ ಹಿಂದು-ಮುಸ್ಲಿಂ ಘರ್ಷಣೆಗಳು ಕಾಣ ಬಂದವು. ಇದರಲ್ಲಿ ಆರೆಸ್ಸೆಸ್-ಬಿಜೆಪಿಯೇ ಆಕ್ರಮಣಕಾರೀ ಪಕ್ಷ.

ಗುಜರಾತಿನಲ್ಲಿ ನರೇಂದ್ರ ಮೋದಿಯವರ ಬಲಗೈ ಬಂಟನಾಗಿದ್ದ ಅಮಿತ್ ಶಹಾ ತನ್ನ ಕೆಲಸ ಆರಂಭಿಸಿದ್ದು ಅಯೋಧ್ಯೆಯಲ್ಲಿನ ತಾತ್ಕಾಲಿಕ ರಾಮ ದೇವಸ್ಥಾನಕ್ಕೆ ಒಂದು ಭೇಟಿಯೊಂದಿಗೆ. ಅಂದಿನಿಂದ ಆತ ಹಿಂದುತ್ವ ಅಜೆಂಡಾವನ್ನು ಮುಂದಿಡಲು ತತ್ಪರತೆಯಿಂದ ಪ್ರಯತ್ನಿಸುತ್ತಿದ್ದಾರೆ.




ಕೃಪೆ: ಜಯಂತೋ, ಹಿಂದುಸ್ತಾನ್ ಟೈಮ್ಸ್

ಜನಶಕ್ತಿ
ಕನ್ನಡ ವಾರಪತ್ರಿಕೆ

ನಲುಮೆಯ ಸಂಗಾತಿ ಪಿ.ಆರ್. ಮಾಸ್ತ್ರು

ಕೆಲವು ನೆನಪುಗಳು


ಸಂಗಾತಿ ಪಿ. ರಾಮಚಂದ್ರ ರಾವ್

ಪ್ರೀತಿಯಿಂದ ಎಲ್ಲರೂ 'ಮಾಸ್ತ್ರು' ಎಂದೇ ಕರೆಯುತ್ತಿದ್ದ ಕಾಮ್ರೇಡ್ ಪಿ. ರಾಮಚಂದ್ರರಾವ್ ಅವರು ನಮ್ಮನ್ನು ಅಗಲಿ ಇದೇ ಸೆಪ್ಟೆಂಬರ್ 18 ಕ್ಕೆ 15 ತುಂಬುತ್ತವೆ. 1998 ರಲ್ಲಿ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸಭೆಗೆಂದು ದೆಹಲಿಗೆ ತೆರಳಿದ್ದ ಕಾಂ.ಪಿ.ಆರ್. ಅವರನ್ನು ಕರ್ನಾಟಕದ ಸಂಗಾತಿಗಳು ಮತ್ತೆ ಜೀವಂತವಾಗಿ ನೋಡಲೇ ಇಲ್ಲ. ಹೃದಯಾಘಾತದಿಂದ ಅವರು ದೆಹಲಿಯಲ್ಲೇ ಇನ್ನಿಲ್ಲವಾದರು.

ಮಂಗಳೂರಿನ ರೋಸಾರಿಯೋ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಮತ್ತು ಸಹೋದ್ಯೋಗಿಗಳ ಅತ್ಯಂತ ಪ್ರೀತಿಪಾತ್ರ ಶಿಕ್ಷಕರಾಗಿದ್ದ ಪಿ. ರಾಮಚಂದ್ರ ರಾವ್ ಅವರು 50 ದಶಕದಲ್ಲೇ ಕಮ್ಯುನಿಸ್ಟ್ ಚಳುವಳಿಗೆ ಸೆಳೆಯಲ್ಪಟ್ಟು 1952 ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದವರು. 1961 ರಲ್ಲಿ ಉದ್ಯೋಗ ತೊರೆದು ಪೂರ್ಣಾವಧಿ ಕ್ರಾಂತಿಕಾರಿಯಾಗಿ ಚಳುವಳಿಗೆ ಧುಮುಕಿದವರು. ಕರ್ನಾಟಕ ರಾಜ್ಯದಲ್ಲಿ ರೈತ-ಕಾರ್ಮಿಕ ಚಳುವಳಿಯನ್ನು ಮತ್ತು ಕಮ್ಯುನಿಸ್ಟ್ ಚಳುವಳಿಯನ್ನು ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಿದ ಅಗ್ರಪಂಕ್ತಿಯ ನಾಯಕರು ಅವರು. ನಮ್ಮನ್ನು ಅಗಲುವಾಗ ಅವರು ಸಿಪಿಐ(ಎಂ) ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿಯಾಗಿದ್ದರು. 1982 ರಿಂದ 1988 ರಲ್ಲಿ ಅವರು ನಿಧನರಾಗುವವರೆಗೆ ನಿರಂತರವಾಗಿ ಅವರು ಆ ಹೊಣೆ ನಿಭಾಯಿಸುತ್ತಿದ್ದರು. 1983 ರಿಂದ 1985 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ 'ಉಳ್ಳಾಲ'ದಿಂದ ಶಾಸಕರಾಗಿದ್ದವರು. ರಾಜ್ಯದ ರೈತರು ಕಾರ್ಮಿಕರು ನೊಂದವರ ಪರವಾದ ದನಿಯನ್ನು ಶಾಸನಸಭೆಯಲ್ಲಿ ಮೊಳಗಿಸಿದವರು ಅವರು.

ಪಿ.ಆರ್. ಮಾಸ್ತ್ರ ಪ್ರೀತಿ, ವಿಶ್ವಾಸಕ್ಕೆ -ಅವರ ಸರಳ ಅರ್ಥಪೂರ್ಣ ಬದುಕಿನ ರೀತಿಗೆ, ದುಡಿಯುವ ಜನರ ಪರವಾದ ಅವರ ಹೋರಾಟದ ಕೆಚ್ಚಿಗೆ, ಅವರ ಬದುಕಿನ ಸಂದೇಶಕ್ಕೆ ಮಾರು ಹೋಗಿ ಕಮ್ಯೂನಿಸ್ಟ್ ಚಳುವಳಿಯ ಕಡೆಗೆ ಬಂದವರೆಷ್ಟೋ- ಅವರ ಸರಳ ಪಾಠಗಳನ್ನು ಕೇಳಿ ಪ್ರೇರಿತರಾಗಿ ಪ್ರಗತಿಪರ ವಿಚಾರಗಳಿಗೆ ಹಾಗೂ ಚಳುವಳಿಗೆ ತಮ್ಮನ್ನು ಅರ್ಪಿಸಿಕೊಂಡವರು ಅದೆಷ್ಟೋ.

ಸಂಗಾತಿಗಳ ನೋವು, ದುಃಖ, ಆತಂಕಗಳನ್ನು ಹೀರಿಕೊಂಡು ಉತ್ಸಾಹ, ಗೆಲುವು, ಚೈತನ್ಯ ತುಂಬುತ್ತಿದ್ದ ಅವರ ವ್ಯಕ್ತಿತ್ವದ ಆತ್ಮೀಯ ಸ್ಪರ್ಶಕ್ಕೆ, ಪ್ರೀತಿಯ ಸಿಂಚನ ತಂಪಿಗೆ ಮರುಳಾಗದವರು ಕಡಿಮೆ. ಕಾಮ್ರೇಡ್ ಪಿ. ರಾಮಚಂದ್ರ ರಾವ್ ಅವರು ಹುಟ್ಟಿದ್ದು ಏಪ್ರಿಲ್ 24, 1924 ರಂದು. ಅವರು ನಿಧನರಾದದ್ದು ಸೆಪ್ಟೆಂಬರ್ 18, 1998 ರಂದು. 74 ವರ್ಷಗಳ ಸಾರ್ಥಕ ಬದುಕು ಅವರದ್ದು.

ರೈತ ಮುಖಂಡರಾಗಿ ರಾಜ್ಯದಲ್ಲಿ ಮತ್ತು ವಿಶೇಷವಾಗಿ ಕರಾವಳಿಯ ಭಾಗದಲ್ಲಿ ರೈತರ ಭೂಮಿ ಹಕ್ಕಿಗಾಗಿ-ಭೂಸುಧಾರಣೆಗಾಗಿ ನಡೆದ ಚಳುವಳಿಯಲ್ಲಿ ಪಿ.ಆರ್. ಅವರು ವಹಿಸಿದ ಪಾತ್ರ ತುಂಬಾ ಮಹತ್ವದ್ದು. ಮೃದುಮಾತಿನ, ಕೋಮಲ ಸ್ವಭಾವದ ನಗುಮುಖದ ಈ ಸಂಗಾತಿ ಕಮ್ಯೂನಿಸ್ಟ್ ಚಳುವಳಿಯಲ್ಲಿ ದುಡಿಯುವವರಿಗೆ ಧೈರ್ಯತುಂಬಿ ಗಟ್ಟಿಗೊಳಿಸುತ್ತಿದ್ದ ರೀತಿ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದ ರೀತಿಯಂತೂ ತುಂಬಾ ವಿಶಿಷ್ಟ. ಆದರೆ ನೊಂದವರ-ದುಡಿಯುವ ವರ್ಗದ ಹಿತರಕ್ಷಣೆಯ ಪ್ರಶ್ನೆ ಬಂದಾಗ ಅವರ ಧೋರಣೆ ಕಠೋರ. ಬದ್ಧತೆ ಪ್ರಶ್ನಾತೀತ.

ಮಾಸ್ತ್ರು ನಿಧನರಾಗಿ ಒಂದು ವರ್ಷವಾದ ಸಂದರ್ಭದಲ್ಲಿ 'ಐಕ್ಯರಂಗ' ಹೊರತಂದ ನೆನಪಿನ ಸಂಚಿಕೆಯಿಂದ ಆಯ್ದ ಕೆಲವು ಬರಹಗಳು ಇಲ್ಲಿವೆ.

ಮಾಸ್ತ್ರ ಕೊಡುಗೆ, ವ್ಯಕ್ತಿತ್ವದ ಕೆಲವು ಮುಖಗಳನ್ನು ಪರಿಚಯಿಸುವ ಆತ್ಮೀಯ ಬರಹಗಳಿವು. 1999ರಲ್ಲಿ 'ಐಕ್ಯರಂಗ'ಕ್ಕಾಗಿ ಎನ್.ಕೆ. ವಸಂತ ರಾಜ ಅವರು ಸಂಗಾತಿಗಳನ್ನು ಸಂದರ್ಶಿಸಿ ನಿರೂಪಿಸಿದ ಬರಹಗಳ ಆಯ್ದ ಭಾಗಗಳು.

'ಬಸ್ರೂರಲ್ಲಿ ನಮ್ಮ ರಕ್ತ ಬಿದ್ದಿತ್ತು. ಆದರೂ ಮಾಸ್ತ್ರ ಭಾಷಣ ನಿಲ್ಲಲಿಕ್ಕೆ ಬಿಡ್ಲಿಲ್ಲ'

ಅಬ್ರಹಾಂ ಕರ್ಕಡರ ನೆನಪುಗಳು

ಭೂಮಿ ಹಕ್ಕಿಗಾಗಿ -ಒಕ್ಕಲೆಬ್ಬಿಸುವಿಕೆ ವಿರುದ್ಧ ಚಳುವಳಿಯಲ್ಲಿ ಮಾಸ್ತ್ರು

ಕುಂದಾಪುರದ ಸುತ್ತಮುತ್ತ ರೈತ ಚಳುವಳಿಯಲ್ಲಿ ಮಾಸ್ತ್ರ ಪಾತ್ರ ದೊಡ್ಡದು. 1965ರಲ್ಲಿ ಕಿಸಾನ್ ಸಭಾ ಮೆಂಬರ್‌ಶಿಪ್ ಶುರುವಾಗಿತ್ತು. ಒಕ್ಕಲೆಬ್ಬಿಸುವುದರ ವಿರುದ್ಧ ಆಗಿನ ಚಳುವಳಿ. ಹಲವು ಪ್ರಮುಖ ಹೋರಾಟಗಳಲ್ಲಿ ಮಾಸ್ತ್ರು ಸ್ವತಃ ಭಾಗವಹಿಸಿ ನಾಯಕತ್ವ ಕೊಟ್ಟಿದ್ದರು. ಒಕ್ಕಲೆಬ್ಬಿಸುವುದರ ಸುದ್ದಿ ಕೇಳಿದ ಕೂಡಲೇ ನಮ್ಮ ರೈತ ಸಂಘದ ಕಾರ್ಯಕರ್ತರು ಅಲ್ಲಿಗೆ ಹೋಗಿ ಅದನ್ನು ನಿಲ್ಲಿಸುತ್ತಿದ್ದರು. ಟ್ರೇಡ್ ಯೂನಿಯನ್(ಮುಖ್ಯವಾಗಿ ಹಂಚು) ಕಾರ್ಯಕರ್ತರು ಹೋಗಿ ಬೆಂಬಲ ನೀಡುತ್ತಿದ್ದರು. ಭೂಮಾಲಕರ ಗೂಂಡಾಗಳ ಎದುರು ನಿಂತು ನೆಡುವುದು, ಕುಯ್ಲು ಆಗುವವರೆಗೆ ಒಕ್ಕಲಿಗೆ ರಕ್ಷಣೆ ಕೊಡುವುದು ನಡೆಯುತ್ತಿತ್ತು. ಇಂತಹ ಹೋರಾಟದಲ್ಲಿ 1968-69ರ ಸುಮಾರಿಗೆ ನಡೆದ ಕೋಣಿಘರಂಗಿ ಮನೆ ಕುಟುಂಬದ ಒಕ್ಕಲೆಬ್ಬಿಸುವುದರ ವಿರುದ್ಧ ಕೋರ್ಟಿನ ಇಂಜಕ್ಷನ್ ಇದ್ದರೂ ನಿಂತು ನೆಟ್ಟದ್ದು, ಕುಯ್ಲು ಮಾಡಿದ್ದು ಒಂದು ಪ್ರಮುಖ ಮೈಲಿಗಲ್ಲು. ಅದೇ ರೀತಿ ಆನಗಳ್ಳಿಯಲ್ಲಿ ಗೋವಿಂದ ಎಂಬಾತನ ದಲಿತ ಕುಟುಂಬ ಇಡೀ ಭೂಮಾಲಕರ ಒತ್ತಡದಿಂದ ಏಳದ್ದಕ್ಕೇ ಲಾಕಪ್ಪಿಗೆ ಹಾಕಿದಾಗ ಮೂರು ಸಾವಿರ ಜನ ರೈತ-ಕಾರ್ಮಿಕರು ಸ್ಟೇಶನ್‌ಗೆ ಮುತ್ತಿಗೆ ಹಾಕಿದ್ದು ಎಲ್ಲಾ ಭೂಮಾಲಕರಿಗೆ ಎಚ್ಚರಿಕೆ ಗಂಟೆ ಆಗಿತ್ತು. ಭೂಮಾಲಕರು ಸುಮ್ಮನೆ ಕುಳಿತುಕೊಳ್ಳಲಿಲ್ಲ.

ಬಸ್ರೂರಲ್ಲಿ ನಮ್ಮ ರಕ್ತ ಬಿದ್ದಿತ್ತು....

ಭೂಮಾಲಕರ ಧಾಳಿ ಆರಂಭವಾಯ್ತು. ನನಗೆ ಈಗಲೂ ನೆನಪಾಗ್ತದೆ. ಇದೇ ಆಫೀಸಿನ ಒಂದು ಮೂಲೆಯಲ್ಲಿ ಸಂಕಪ್ಪ ಶೆಟ್ಟರು ಅಂತ ನಮ್ಮ ಕಾರ್ಯಕರ್ತರು ಹೇಳಿದ್ದು 'ಕರ್ಕಡರೇ ಅವರು ನನ್ನನ್ನು ಕೊಲ್ತಾರೆ' ಅಂತ. ಗುಲ್ವಾಡಿಯಲ್ಲಿ ಅವರ ಕೊಲೆ ನಡೆದೇ ಹೋಯಿತು. ಭೂಮಾಲಕರು ನಮ್ಮ ಕಾರ್ಯಕರ್ತರ ಮೇಲೆ ದಾಳಿ ಮಾಡಲಾರಂಭಿಸಿದ್ದರು. ನಾವು ಆಲೋಚನೆ ಮಾಡಿದೆವು. ಇದು ಯೋಜನಾಬದ್ಧ ದಾಳಿ. ರೈತ ಸಂಘವನ್ನು ದಮನ ಮಾಡಿ ಮುಗಿಸುವ ಆಲೋಚನೆ. ನಾವು ಎಲ್ಲದಕ್ಕೂ ತಯಾರಾದೆವು. ಭೂಮಿ ಪ್ರಶ್ನೆ, ಒಕ್ಕಲೆಬ್ಬಿಸುವುದರ ವಿರುದ್ಧ ಹೋರಾಟದ ಈ ವರ್ಗ ಸಂಘರ್ಷವು ತುತ್ತ ತುದಿಗೆ ಮುಟ್ಟಿದ್ದು- ಬಸ್ರೂರು ಸಂಘರ್ಷದಲ್ಲಿ. ಒಂದು ರೀತಿಯಲ್ಲಿ ರೈತರ ಭೂಮಾಲಕರ ನಡುವೆ ಸಶಸ್ತ್ರ ಹೋರಾಟವೇ ಆಗಿತ್ತು. ಬಸ್ರೂರು ಪೇಟೆಯಲ್ಲಿ ಈ ಭೂಮಾಲಕರ ದಬ್ಬಾಳಿಕೆಯ ವಿರುದ್ಧ ರೈತ ಸಂಘ ಸಭೆ ಮಾಡಿತ್ತು. ಸುಮಾರು 400- 500 ಜನ ರೈತ-ಕಾರ್ಮಿಕ ಕಾರ್ಯಕರ್ತರು ಮೆರವಣಿಗೆಯಲ್ಲಿ ಬಂದರು. ಭೂಮಾಲಕರು ಹೇಗಾದರೂ ಮಾಡಿ ತಡೆಯಲು ಬೇಕಾದ ಪ್ರಯತ್ನ ಮಾಡ್ತಾ ಇದ್ರು. ಆಗ ಭೂಮಾಲಕರ ಸೇನೆಯೇ ಒಂದು ಇತ್ತು. 'ಕಟ್ಟೆ ಮಾರ್ ರತ್ನಾಕರ ಸೇನೆ' ಅಂತ. ಪುಂಡು ಪೋಕರಿ ಹುಡುಗರು, ಬಾಡಿಗೆ ಗೂಂಡಾಗಳಿಂದ ಆದ ಸೇನೆ ಅದು. ಒಕ್ಕಲುಗಳ ಮೇಲೆ ದಾಳಿಗೆ ಬಳಸುತ್ತಿದ್ದರು. ಅವರಿಗೆಲ್ಲಾ ಒಂದು ಬಿಳಿನಾಮ! ಈ ಸೇನೆಯ 2,000 ಜನ ನಮ್ಮ ಸಭೆಯ ಮೇಲೆ ದಾಳಿ ಮಾಡ್ಲಿಕ್ಕೆ ಬಂದಿದ್ದರು. ಕಡೆಗೆ ಕಲ್ಲಿನಿಂದ ನಮ್ಮ ಮೇಲೆ ಧಾಳಿ ಆರಂಭವಾಯ್ತು. ಮಾಸ್ತ್ರ ಭಾಷಣವೂ ಆರಂಭವಾಯ್ತು. ಕಲ್ಲುಗಳು ಬೀಳುತ್ತಲೇ ಇದ್ದವು. ನಾವೂ ತಯಾರಾಗೇ ಹೋಗಿದ್ದೆವು. ಸೋಟೆಗೆ(ದೊಣ್ಣೆಗೆ) ಧ್ವಜ ಕಟ್ಟಿ ಹೋಗಿದ್ದೆ ನಮ್ಮ ಆಯುಧವಾಗಿತ್ತು. ಬೀಳುವ ಕಲ್ಲುಗಳನ್ನು ಕ್ಯಾಚ್ ಹಿಡಿದು ನಮ್ಮ ಕಾರ್ಯಕರ್ತರು ವಾಪಸು ಬೀಸಾಕುತ್ತಿದ್ದರು. ಹಲವರಿಗೆ ಕಲ್ಲು ಬಿದ್ದು ಗಾಯವಾಗಿತ್ತು.

ಪುಟ 10 ಕ್ಕೆ

'ಒಂದು ಪುಸ್ತಕ ಗೆದ್ದಲು ಹಿಡಿದು ಹಾಳಾಗಿ ಹೋದಾಗ ಅವರು ಅತ್ತಿದ್ದರು.' ಮಡದಿ ಲೀಲಾ ರಾಮಚಂದ್ರ ರಾವ್ ನೆನಪುಗಳು.

ಮಾಸ್ತ್ರ ತಂದೆ ಮಂಗಳೂರಲ್ಲೇ ಇದ್ದವರು. ಟ್ರೈನಿಂಗ್ ಶಾಲೆಯಲ್ಲಿ ಹೆಡ್ ಮಾಸ್ಟರ್ ಆಗಿದ್ದವರು. ಒಂಭತ್ತು ಮಕ್ಕಳಲ್ಲಿ ಮಾಸ್ತ್ರೆ ಕೊನೆಯವರು. ..ದೊಡ್ಡ ಕುಟುಂಬ. ಆದ್ದರಿಂದ ಬಹಳ ಕಷ್ಟದ ಜೀವನ. ಊಟಕ್ಕೂ ಕಷ್ಟ ಕೆಲವೊಮ್ಮೆ. ಅವರ ಕುಟುಂಬದಲ್ಲಿ ಅವರೊಬ್ಬರೇ ಓದಿದ್ದು... ..ಒಳ್ಳೆ ಮಾರ್ಕ್ಸ್ ಇದ್ದು ಇಂಜಿನಿಯರ್ ಆಗಬೇಕೆಂತ ಆಸೆ ಇತ್ತಂತೆ ಅವರಿಗೆ. ಆದರೆ ಬಡತನದಿಂದ ಬಿ.ಎಸ್.ಸಿ. ಓದಿ, ಬಿ.ಟಿ. ಮಾಡಿ ಹೈಸ್ಕೂಲಲ್ಲಿ ಮಾಸ್ತ್ರಾಗಿದ್ದರು. ಆಮೇಲೆ ಇಡೀ ಕುಟುಂಬವನ್ನು ಸಾಕಿದ್ದು ಅವರೇ. ....

ಮಾಸ್ತ್ರ ಓದುವ ಹುಚ್ಚು ಬಂದದ್ದು ಅವರ ಅಪ್ಪನಿಂದ. ಮಾಸ್ತ್ರ ಪುಸ್ತಕ ಪ್ರೀತಿ ನನಗೆ ಮದುವೆ ಆಗುವ ಮೊದಲೇ ಪರಿಚಯ ಆಗಿತ್ತು. ನಮ್ಮ ಮದುವೆ ನಿಶ್ಚಯ ಆದ ಮೇಲೆ, ಸೂರತ್‌ಗೆ ನನಗೆ ಎರಡು ಪುಸ್ತಕ ಕಳಿಸಿದ್ದರು. ಒಂದು ನೆಹರು ಅವರ ಮಗಳು ಇಂದಿರಾಗೆ ಜೈಲಿನಿಂದ ಬರೆದ ಪತ್ರಗಳದ್ದು. ಇನ್ನೊಂದು ಮಾರ್ಕ್ಸ್‌ನ ಜೀವನ ಚರಿತ್ರೆ. ನನಗೆ ಈಗಲೂ ಸರಿಯಾಗಿ ನೆನಪಿದೆ.

ಪಾರ್ಟಿ ಹೇಳಿತು ಅವರಿಗೆ. ಫುಲ್ ಟೈಮರ್ ಆಗಿ ಬನ್ನಿ ಅಂತ. ಅದಕ್ಕಿಂತ



ಮೊದಲೇ ಫುಲ್ ಟೈಮರ್ ಥರ ದುಡಿ-ತಿದ್ರು, ಸ್ಕೂಲ್ ಬಿಟ್ರೆ ಅವರು ಪಾರ್ಟಿ ಕೆಲಸದಲ್ಲೇ ಮುಳಿಗಿರ್ತಿದ್ರು-ಅಂತ ಹೇಳಿದ್ನಲ್ಲಾ-ಆಗಲೇ ಕಷ್ಟ ಆಗ್ತದೆ ಅಂತ ಗೊತ್ತಿತ್ತು. ಆದರೂ ಅವರು ನಂಬಿದ್ದು ಸಾಧಿಸಬೇಕಾದರೆ ಕಷ್ಟ ಸಹಿಸಬೇಕಲ್ಲ. ಮೊದಮೊದಲು ಕಷ್ಟ ತುಂಬಾ. ಆಗಿನ ಕಾಲದಲ್ಲಿ ಅಲೋಯೆನ್ಸ್ ಅಂತಲೇ ಇರುತ್ತಿರಲಿಲ್ಲ. ಆಮೇಲೆ 50 ರೂ. ಅಲೋಯೆನ್ಸ್ ಸಿಗುತ್ತಿತ್ತು....

ಆದರೆ ತುಂಬಾ ಕಷ್ಟ ಆದದ್ದು ನಮಗೆ ಅವರನ್ನು ಒಂದುವರೆ ವರ್ಷ ಜೈಲಿನಲ್ಲಿ ಹಾಕಿದಾಗ. 1965–66 ರಲ್ಲಿ. ಎಲ್ಲಾ ಕಡೆ ಒಂದೇ ದಿನ ರಾತ್ರಿ ಪಾಕಿಸ್ತಾನದ ಜತೆ ಯುದ್ಧ ಸಮಯದ ಎಮರ್ಜೆನ್ಸಿ ಬಳಸಿ ಪಾರ್ಟಿಯ ಎಲ್ಲಾ ಪ್ರಮುಖ ನಾಯಕರ[ನ್ನು] ಅರೆಸ್ಟ್ ಮಾಡಿದ್ದರಿಂದ.

ನಾನು ನನ್ನ ಮೊದಲ ಓಟು ಕೊಟ್ಟ[ದ್ದು] ಅವರಿಗೆ. 1969 ರಲ್ಲಿ ಅವರು ಮಂಗಳೂ[ರು] ಮುನಿಸಿಪಲ್ ಕೌನ್ಸಿಲ್‌ಗೆ ನಿಂತಿದ್ದರು. ಇ[...] ಸಹ ಆಗಿದ್ದರು. ಅವರ ನೆನಪಾದಾಗಲೆಲ್ಲಾ ನೆನಪಾಗುವುದು ಅವರ ಪುಸ್ತಕಗಳು. ಮನೆಯಲ್ಲಂತೂ ಪುಸ್ತಕಗಳಿಲ್ಲದೆ ಅವರನ್[ನು] ಊಹಿಸಿಲಿಕ್ಕೆ ಸಾಧ್ಯ ಇಲ್ಲ. ಈಸೀ ಚೇರ್‌ನಲ್ಲಿಕುಳಿತಾಗಲೂ, ಮಲಗಿರುವಾಗಲ[ೂ] ಕೈಯಲ್ಲೊಂದು ಪುಸ್ತಕ. ಪಕ್ಕದಲ್ಲಿ ಇನ್ನೂ ಹಲವು ಪುಸ್ತಕಗಳ ರಾಶಿ. ನನಗೂ ನನ್ನ ಮಕ್ಕಳಿಗೂ ಈ ಪುಸ್ತಕಗಳ ಬಗ್ಗೆ ಹೊಟ್ಟೆಕಿ[ಚ್ಚು] ಆಗ್ತಿತ್ತು. ಆ ಪುಸ್ತಕಗಳಿಗೆ ಇರುವ ಭಾಗ್ಯ ನಮಗೆ ಇಲ್ಲವಲ್ಲ ಅಂತ. ಒಂದು ಪುಸ್ತಕ ಗೆದ್ದಲು ಹಿಡಿದು ಹಾಳಾಗಿ ಹೋದಾಗ ಅವರು ಅತ್ತದ್ದು ನನಗೆ ನೆನಪಿದೆ.

ನಲುಮೆಯ ಮೇಸ್ತ್ರು.....

ಪುಟ 9 ರಿಂದ

ನಮ್ಮ ರಕ್ತ ಬಸ್ರೂರು ಪೇಟೆಯಲ್ಲಿ ಬಿದ್ದಿತ್ತು. ಆದ್ರೂ ನಾವೆಲ್ಲರೂ ಹೇಳುತ್ತಿದ್ದೆವು 'ಮಾಸ್ತ್ರೇ ನಿಮ್ಮ ಭಾಷಣ ನಿಲ್ಬಾರ್ದು, ಏನೇ ಆಗಲಿ ಇವತ್ತು ನೋಡೇ ಬಿಡೋಣ' ಅಂತ. ಒಂದು ಬಾರಿ ನೆರೆದಿದ್ದ ಕಾರ್ಯಕರ್ತರನ್ನು 'ಸೇನೆ'ಯವರು ಚದುರಿಸಿಯೇ ಬಿಟ್ಟಿದ್ದರು. ಆದರೆ ಪುನಃ ಸೇರಿಸಿ ನಮ್ಮ ಕಾರ್ಯಕರ್ತರು ಸೋಟೆ ಬೀಸಲು ಆರಂಭಿಸಿದರು. ನಮ್ಮ ಕಾರ್ಯಕರ್ತರು, ತರಬೇತಿ ಹೊಂದಿದ ಸ್ವಯಂಸೇವಕರು ಸೋಟೆ ಬೀಸಲು ಆರಂಭಿಸಿದಂತೆ 'ಸೇನೆ'ಯ ಬಾಡಿಗೆ ಗೂಂಡಾಗಳಿಗೆ ಹೆದ್ರಿಕೆ ಆಯ್ತು. ಚದುರಿದರು. ಮಾಸ್ತ್ರ ಭಾಷಣ ಮುಂದುವರಿದೇ ಇತ್ತು. ಆದಿನ ಬಸ್ರೂರಲ್ಲಿ ಬಿದ್ದ ರಕ್ತದ ಮಧ್ಯೆ ಮಾಸ್ತ್ರ ಭಾಷಣ ಭೂಮಾಲಕರ ಸದ್ದಡಗಿಸಿತು. ಈ ಚಳುವಳಿಯ ನಂತರ ಬೆಂಗಳೂರಿಗೆ ಭೂಸುಧಾರಣೆಗೆ ಒತ್ತಾಯಿಸಿ 1973ರ ವರೆಗೆ ನಾಲ್ಕು ಬಾರಿ ಜಾಥಾಗಳು ಆದವು. ಇದೆಲ್ಲದರ ಫಲವಾಗಿ 1974 ರಲ್ಲಿ ಭೂಸುಧಾರಣಾ ಕಾಯ್ದೆ ಜಾರಿಗೆ ಬಂತು. ಆಮೇಲೆ ರೈತ ಸಂಘದ ಮೇಲೆ ದಬ್ಬಾಳಿಕೆ, ದಾಳಿ ಇರಲಿಲ್ಲ ಅಂತ ಅಲ್ಲ. 1975 ರಲ್ಲಿ ದಾಸ್ ಭಂಡಾರಿ, ಅನಂತರ ಕೋಣಿ ಮೇಲೆ ದಾಳಿ ಮಾಡಿದ್ದರು. ಆದರೂ ರೈತ ಸಂಘವನ್ನು ಬಗ್ಗಿಸುವುದು ಸಾಧ್ಯ ಇಲ್ಲ ಎಂದು ಅವರಿಗೆ ಮನದಟ್ಟು ಆಗಿತ್ತು.

'ಏನಾ! ನಿಮ್ಮ ಕುಟುಂಬ ಸಾಕಲಿಕ್ಕೆ ಪಾರ್ಟಿಯ ಹತ್ತಿರ ತಾಕತ್ತಿಲ್ವಾ!' ಮಂಗಳೂರಿನ ಕಮಲಾಕ್ಷ ಬಂಗೇರರ ನೆನಪುಗಳು

ಈಗ ನಮ್ಮನ್ನು ಅಗಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಸಂಗಾತಿ ಕಮಲಾಕ್ಷ ಬಂಗೇರ ಅವರು 1999 ರಲ್ಲಿ ಪಿ. ಆರ್. ಮಾಸ್ತ್ರು ಕುರಿತು ಬರೆದ ಬರಹ ಇದು.

.. .. .. ಮಾಸ್ತ್ರು ನನಗೆ ಪಕ್ಷದ ಪ್ರಾಥಮಿಕ ಪಾಠ ಹೇಳಿದ, ಟ್ರೇಡ್ ಯೂನಿಯನ್ ಕೆಲಸದಲ್ಲಿ ಮಾರ್ಗದರ್ಶನ ಮಾಡಿದ ನನ್ನ ನಾಯಕರು ಮಾತ್ರವಲ್ಲ, ಇವೆಲ್ಲಕ್ಕಿಂತ ಹೆಚ್ಚಿನವರಾದ ನಿಕಟ ಗೆಳೆಯರಾಗಿದ್ದರು. ಬೋಳಾರದಿಂದ ಅವರ ಪರಿಚಯ ಆದ 30 ವರ್ಷದಿಂದ ಒಟ್ಟಿಗೆ ಮಾತನಾಡುತ್ತಾ ನಡಕೊಂಡು ತಾಜಮಹಲ್ ಹೋಟೆಲ್‌ನಲ್ಲಿ ಚಾ ಕುಡಿದದ್ದು ಇನ್ನೂ ನೆನಪಾಗ್ತದೆ- ತಾಜಮಹಲ್ ಹೋಟೆಲ್‌ಗೆ ಹೋದಾಗಲೆಲ್ಲ.

ನಾನು ಪಾರ್ಟಿ ಸದಸ್ಯನಾದಾಗ (35 ವರ್ಷದ ಹಿಂದೆ) ಪೋಟೊಗ್ರಾಫರ್ ಆಗಿ ಕೆಲಸಮಾಡುತ್ತಿದ್ದೆ. ಮಾಸ್ತ್ರ ಆತ್ಮೀಯ ಒತ್ತಾಯ ಇಲ್ಲದಿದ್ರೆ ನಾನು ಬಹುಶಃ ಎಂದೂ ಪೂರ್ಣಾವಧಿ ಕಾರ್ಯಕರ್ತನಾಗುತ್ತಿರಲಿಲ್ಲ. ಇಪ್ಪತ್ತು ವರ್ಷದ ಹಿಂದೆ ಪೂರ್ಣಾವಧಿ ಕಾರ್ಯಕರ್ತನಾದ ಸಂದರ್ಭ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಮಾಸ್ತ್ರು ಒತ್ತಾಯ ಮಾಡುತ್ತಿದ್ದರು. ನನಗೆ ದುಡಿಯಲು ಉತ್ಸಾಹ, ಆದರೂ ಅಳುಕು. ಕೆಲಸ ಮಾಡುತ್ತಿರುವಾಗಲೇ ಜೀವನ ಸಾಗಿಸಲು ಕಷ್ಟ. ನನ್ನ ಹೆಂಡತಿಗೂ ಅದೇ ಅಳುಕು. ಅವಳು ಸ್ವತಃ ಕಾರ್ಮಿಕಳಾಗಿ ಹೋರಾಟದ ಅನುಭವ, ರಾಜಕೀಯ ಪ್ರಜ್ಞೆ ಇದ್ದರೂ ನಾನು ಫುಲ್ ಟೈಮರ್ ಆಗುವುದನ್ನು ವಿರೋಧಿಸಿದಳು- ಸ್ವಾಭಾವಿಕವಾಗಿಯೇ ನಾನು ಫುಲ್ ಟೈಮರ್ ಆದರೆ ಸಂಸಾರದ ಇಡೀ ಭಾರ ಬೀಳುವುದು ಅವಳ ಮೇಲೆಯೇ ಅಲ್ವಾ! ಇದು ಮಾಸ್ತ್ರಿಗೆ ಗೊತ್ತಾಯ್ತು. ಅವರಿಗೆ ನನ್ನ ಹೆಂಡತಿ ಮನೆಯವರೆಲ್ಲ ಪರಿಚಯ. ಮಾಸ್ತ್ರು ಮನೆಗೆ ಬಂದರು. ನನ್ನ ಹೆಂಡತಿ ಹತ್ತಿರ ನಾನು ಫುಲ್ ಟೈಮರ್ ಆಗುವ ಬಗ್ಗೆ, ಆಕೆಯ ವಿರೋ ಧದ ಬಗ್ಗೆ ಮಾತು ಆರಂಭವಾಯಿತು. ಆಕೆ ಸಂಸಾರದ ಕಷ್ಟದ ಬಗ್ಗೆ ಹೇಳಿದಾಗ ಮಾಸ್ತ್ರು ಏಕಾಏಕಿ ರೇಗಿಬಿಟ್ರು, "ಏನಾ! ನಿಮ್ಮ ಕುಟುಂಬ ಸಾಕಲಿಕ್ಕೆ ಪಾರ್ಟಿಯ ಹತ್ತಿರ ತಾಕತ್ತಿಲ್ವಾ? ಎಷ್ಟು ಬ್ಯಾಂಕಿನಲ್ಲಿ ಇಡಬೇಕು ಹೇಳು?" ಅಂತ ಅಂದು ಬಿಟ್ಟರು. ನನ್ನ ಹೆಂಡತಿ ಮಾಸ್ತ್ರೇ! ನೀವೇ ಇಷ್ಟು ಹೇಳಿದ ಮೇಲೆ ನಾನು ಇಲ್ಲಾ ಅಂತ ಹೇಳ್ಲಿಕ್ಕೆ ಆಗ್ತದಾ' ಅಂದಳು. ಬ್ಯಾಂಕ್‌ನಲ್ಲಿ ಏನೂ ಇಡಲಿಕ್ಕೆ ಆಗ್ಲಿಲ್ಲ ಅಂತ ಮಾತು ಬೇರೆ! ಆದರೂ ಅವರ ಆತ್ಮೀಯತೆ, ಅವರ ಮೇಲೆ ನಂಬಿಕೆ ಎಷ್ಟಿತ್ತೆಂದರೆ ಅವರು ಯಾರನ್ನು ಬೇಕಾದರೂ ಯಾವುದಕ್ಕೆ ಬೇಕಾದರೂ ಒಪ್ಪಿಸಬಹುದಿತ್ತು....

ಮಾಸ್ತರರ ರೌದ್ರಾವತಾರ ಸಹ

ಮಾಸ್ತರರ ರೌದ್ರಾವತಾರ ಸಹ ಅನುಭವಿಸಿದವರಿಗೇ ಗೊತ್ತು. ಒಂದು ದಿನ ಲೇಬರ್ ಆಫೀಸರ್ ಎದುರು ಎಲ್ಲಾ ಟ್ರೇಡ್ ಯೂನಿಯನ್‌ಗಳ ಮೀಟಿಂಗ್ ನಡೆಯುತ್ತಾ ಇತ್ತು. ಇಂಟಕ್ ನಾಯಕ ಆಡ್ಯಂತಾಯ ಏನೋ ಹೇಳುವಾಗ ಮಾಸ್ತ್ರಿಗೆ ಕೋಪ ಬಂತು. ಎದ್ದು ನಿಂತು ಹೇಳೇ ಬಿಟ್ಟರು- 'ಎಂಥದಾ ನೀನು ಹೇಳುದು? ನೀನು ಎಂಥದು ಮಾತಾಡ್ತಾ ಇದ್ದೀಯ ಅಂತ ಗೊತ್ತುಂಟಾ ನಿನಗೆ? ಏನೂ ಸ್ಟಡೀ ಮಾಡದೇ ಬಾಯಿಗೆ ಬಂದ ಹಾಗೆ ಮಾತಾಡ್ತಿದ್ದೀಯಲ್ಲ' ಎಂದು ಕಂಡಾಪಟ್ಟೆ ಬೈದು ಬಿಟ್ಟರು. ಎಲ್ಲರೂ ದಂಗಾಗಿದ್ದರು. ಮೀಟಿಂಗ್ ಮುಗುದಮೇಲೆ ನಾನು ಆಡ್ಯಂತಾಯರನ್ನು ಕೇಳಿದೆ ಬೇಜಾರಾಯ್ತೋ ಅಂತ. ಅವರು ನಗುತ್ತಾ ಹೇಳಿದರು-' ಮಾಸ್ತ್ರು ಹೇಳಿದ್ದು ಕರೆಕ್ಟ್ ಅಲ್ವಾ? ನಮ್ಮ ಮಾಸ್ತ್ರು ಮೇಲೆ ಯಾರಾದರೂ ಬೇಜಾರು ಮಾಡುವುದುಂಟಾ?'. ವಿರೋಧಿಗ[ಳ] ಮೇಲೂ ಅವರ ಪ್ರಭಾವ ಅಷ್ಟಿತ್ತು........

ಅಷ್ಟೇ ಅವರ ಹೃದಯ ಮೃದುವಾಗಿತ್ತು[.] ಯಾರ ಕಷ್ಟವನ್ನು ಅವರಿಂದ ನೋಡಲ[ು] ಸಾಧ್ಯವಿಲ್ಲ. ನಾನು ಮಗಳ ಮದು[ವೆ] ಮಾಡುವ ಸಂದರ್ಭದಲ್ಲಿ ಭಾರೀ ಕಷ್ಟದಲ್ಲಿದ್ದೆ[.] ನಾನು ಏನೂ ಹೇಳದಿದ್ದರೂ ಅವರೇ ಕ-ರೆದು ಚೆಕ್ಕು ಬರೆದು ಕೊಟ್ಟರು. ಬ್ಯಾಂಕ್‌ನಲ್ಲಿ ದುಡ್ಡು ತೆಗೆದುಕೊಳ್ಳುವಾಗ ನನ[ಗೆ] ಕುತೂಹಲವಾಯಿತು. ನನಗೆ ಬ್ಯಾಂಕ್‌ನಲ್ಲಿ ಗುರುತು ಇದ್ದವರಿದ್ದದ್ರಿಂದ ಎಷ್ಟು ಬಾ[ಕಿ] ಇದೆ ಅಂತ ಕೇಳಿದೆ. 75 ರೂ. ಇದೆ ಅಂತ ಉತ್ತರ ಬಂತು. ಅದು ಏನೂ ವಿಶೇಷವಲ್ಲ[.] ಬೇರೆಯವರ ಬಳಿಸಾಲ ತಂದೂ ಸಹಾಯ ಮಾಡಿದ್ದಿದೆ. ಯಾರಾದರೂ ಸಹಾಯ ಬೇಕು ಅಂತ ಕೇಳಬೇಕಂತಲೂ ಇ[...] ಬೇರೆಯವರಿಂದ ತಿಳಿದು ಅ[...] ಸಹಾಯಕ್ಕೆ ಮುಂದಾಗುತ್ತಿದ್ದರು. ಮಾಸ್ತ್ರು ಯಾರಿಗೂ ಇಲ್ಲವೆಂದವರಲ್ಲ. ಮಾಸ್ತ್ರಿಗೆ ಯಾರಿಗೂ ಇಲ್ಲವೆನ್ನಲು ಆಗುತ್ತಿರಲಿಲ್ಲ[.] ಪಾರ್ಟಿಗೆ ಫಂಡ್ ಎತ್ತುವುದರಲ್ಲಿ ಅವರನ್[ನು] ಮೀರಿಸುವವರಿಲ್ಲ........

ಇಲ್ಲಿ ಮಂಗಳೂರಿನಲ್ಲಿ ಈವರೆಗೆ ಮೂವರ[ು] ಕಮ್ಯೂನಿಸ್ಟ್ ನಾಯಕರ ಭಾರೀ ಶವಯಾ[ತ್ರೆ] ನಡೆದಿದೆ. ಸಿಪಿಐ ನಾಯಕ ಶಾಂತಾರಾಂ ಪೈ[,] ಸಿಪಿಐ(ಎಂ) ನಾಯಕರಾಗಿದ್ದ ಕೃಷ್ಣ ಶೆ[ಟ್ಟಿ] ಮತ್ತು ಮಾಸ್ತ್ರದ್ದು. ಈ ಮೂವರಲ್ಲಿ ಮಾಸ್ತ್ರ ಶವಯಾತ್ರೆ ಅತ್ಯಂತ ದೊಡ್ಡದಾಗಿತ್ತು. ಎಲ್ಲಾ ವರ್ಗದ ಜನ ಬಂದಂತದ್ದು ಆಗಿತ್ತು. ಹಾಗೆ[ಯೇ] ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ[ು] ಬಂದದ್ದು ಆಗಿತ್ತು. ಜೀವನದಲ್ಲಿ ಅಷ್ಟು ಜನರಿ[ಗೆ] ಒಳ್ಳೆಯದು ಮಾಡಿ, ಸತ್ತಾಗ ಸಾವಿರಾರು ಜ[ನ] ಕಣ್ಣೀರು ಹಾಕುವುದು ಅದೇ ಅಲ್ವಾ ಗೌ[ರವ] ಅಲ್ವಾ ಮಾರಾಯ್ರೆ? ಉಳಿದ್ದೆಲ್ಲಾ ಅರ್ಥ ಇಲ್ಲದ್ದು. (ಆಗ ಕಮಲಾಕ್ಷ ಬಂಗೇರರ ಕಣ್[ಣು] ತೇವವಾಗಿತ್ತು).

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ರಕ್ಷಣೆಗಾಗಿ ನಬಾರ್ಡ್ ಸುತ್ತೋಲೆ ತಡೆ ಹಿಡಿಯಲು ಆಗ್ರಹ ಪ್ರತಿಭಟನೆ

'ನಬಾರ್ಡ್'-ಅಂದರೆ 'ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಉದ್ದೇಶದ ರಾಷ್ಟ್ರೀಯ ಬ್ಯಾಂಕ್'ನ ಜುಲೈ 22, 2013ರ ಸುತ್ತೋಲೆ ಜಾರಿಯಾದರೆ ನಮ್ಮ ಹಳ್ಳಿಗಳ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ರೈತರಿಂದ, ಗ್ರಾಮೀಣ ಜನರಿಂದ ಠೇವಣಿಯನ್ನು ಸ್ವೀಕರಿಸುವಂತಿಲ್ಲ ಮತ್ತು ರೈತರು ಕೃಷಿಕರು ಸೇರಿದಂತೆ ಯಾರಿಗೂ ಸಾಲ ನೀಡುವಂತಿಲ್ಲ. ಎಲ್ಲಾ ವ್ಯವಹಾರಗಳ ಜವಾಬ್ದಾರಿಯನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಿಗೆ (DCC) ವರ್ಗಾಯಿಸಿ, ಡಿ.ಸಿ.ಸಿ. ಬ್ಯಾಂಕ್‌ನ ಕಮಿಷನ್ ಏಜೆಂಟ್‌ರಾಗಿ ಕೆಲಸ ಮಾಡಬೇಕಾಗುತ್ತದೆ. ಇದು ಸಂಪೂರ್ಣವಾಗಿ ರೈತ ವಿರೋಧಿ ಮತ್ತು ಕೃಷಿ ವಿರೋಧಿ ಸೂಚನೆಯಾಗಿದ್ದು, 'ನಬಾರ್ಡ' ಈ ಸುತ್ತೋಲೆಯನ್ನು ಕೂಡಲೇ ವಾಪಸ್ಸು ಪಡೆಯುವಂತೆ ಕೇಂದ್ರ ಸರಕಾರ ಆದೇಶ ಹೊರಡಿಸಲು ರಾಜ್ಯ ಸರ್ಕಾರ ಒತ್ತಡ ತರಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ, ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಆಡಳಿತ ಮಂಡಳಿಗಳು, ನೌಕರರು, ರೈತಾಪಿ ಜನತೆ ಜಂಟಿಯಾಗಿ ಅಂಕೋಲಾ ನಗರದಲ್ಲಿ ಸೆಪ್ಟೆಂಬರ್ 6 ಪ್ರತಿಭಟನಾ ಮೆರವಣಿಗೆ ನಡೆಸಿದರು. ಹಾಗೂ ತಹಶೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ನೀಡಿದರು.

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಅಸ್ತಿತ್ವಕ್ಕೆ ಧಕ್ಕೆ ತರುವ ನಬಾರ್ಡ್




ಸುತ್ತೋಲೆ ವಾಪಸ್ಸಾಗಬೇಕು. [illegible] ಪತ್ರಿಕೆಯಲ್ಲಿ [illegible] ನಮೂದಿಸಬೇಕೆಂದು ಹೋರಾಟಗಾರರು ಒತ್ತಾಯಿಸಿದರು. ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಉತ್ತರ ಕನ್ನಡ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಅಂಕೋಲಾ ತಾಲೂಕು ಅಧ್ಯಕ್ಷರಾದ ಗೌರೀಶ ನಾಯಕ ವಹಿಸಿದ್ದರು. ಈ ಸಂದರ್ಭದಲ್ಲಿ ಕೆ.ಡಿ.ಸಿ.ಸಿ. ಬ್ಯಾಂಕ್ ಉಪಾಧ್ಯಕ್ಷರಾದ ಡಿ.ಎನ್. ನಾಯಕ, ಜಿಲ್ಲಾ ಪಂಚಾಯತ ಸದಸ್ಯರಾದ ಉದಯ ನಾಯ್ಕ, ಪ್ರಾಥಮಿಕ ಸಹಕಾರಿ ಸಂಘಗಳ ಅಧ್ಯಕ್ಷರುಗಳಾದ ಜಯರಾಮ ನಾಯಕ ಬಾಸಗೋಡ, ಹರೀಶ ನಾಯಕ ವಂದಿಗೆ, ಗಣಪತಿ ನಾಯಕ ಅಗಸೂರು, ಮುಖಂಡರಾದ ರಮಾನಂದ ನಾಯಕ ಅಚವೆ, ಎ.ಪಿ.ಎಂ.ಸಿ. ಸದಸ್ಯ ಗಣಪತಿ ನಾಯಕ, ರಾಮಚಂದ್ರ ನಾಯಕ ಅಗಸೂರು, ಲೀಲಾವತಿ ನಾಯ್ಕ ಮಂಜಗುಣಿ, ಕೆ.ಆರ್. ನಾಯಕ, ಸಂದೀಪ ಬಂಟ, ನಿತ್ಯಾನಂದ ಗಾಂವಕರ ಮುಂತಾದವರು ಉಪಸ್ಥಿತರಿದ್ದರು. ತಹಶೀಲ್ದಾರ ಮೀರಾ ಅಂಕೋಲೆಕರ ಮನವಿ ಸ್ವೀಕರಿಸಿದರು.

'ಗ್ರಾಮೀಣ ಬಡವರು ಹಾಗೂ ರೈತರನ್ನು ಖಾಸಗಿ ಬಡ್ಡಿ ಲೇವಾದೇವಿಗಾರರ ತೆಕ್ಕೆಗೆ ತಳ್ಳುವ ನೀತಿ'

ಮುಂಡು ಮೇಜಿನ ಸಭೆಯಲ್ಲಿ ಜಿ.ಸಿ. ಬಯ್ಯಾರೆಡ್ಡಿ ಖಂಡನೆ

ಸೆಪ್ಟಂಬರ್ 04 ರಂದು ಅಂಕೋಲದ ತಾಲ್ಲೂಕು ಪಂಚಾಯತ್ ಸಭಾ ಭವನದಲ್ಲಿ ಈ ವಿಷಯದ ಕುರಿತು ಪ್ರಾಂತ ರೈತ ಸಂಘವು ದುಂಡುಮೇಜಿನ ಸಭೆಯನ್ನು ಏರ್ಪಡಿಸಿತ್ತು. 'ರೈತರಿಗೆ ಸಾಲ ಸೌಲಭ್ಯ ನೀಡುವ ಮೂಲಕ ಕೃಷಿಗೆ ಉತ್ತೇಜನ ನೀಡುತ್ತಿದ್ದ ಸಹಕಾರಿ ವ್ಯವಸಾಯ ಸಂಘಗಳನ್ನು ನೇರವಾಗಿ ಜಿಲ್ಲಾ ಸಹಕಾರಿ ಬ್ಯಾಂಕುಗಳ ಅಧೀನಕ್ಕೆ ಒಳಪಡಿಸುವಂತೆ ನಬಾರ್ಡ್ ಬ್ಯಾಂಕ್‌ನವರು ರಾಜ್ಯ ಸರ್ಕಾರಕ್ಕೆ ಜುಲೈ



22, 2013 ರಂದು ನೀಡಿರುವ ಸುತ್ತೋಲೆ ಕೃಷಿಕರಿಗೆ ಮಾರಕವಾಗಿದೆ. ಗ್ರಾಮೀಣ ಬಡವರು, ರೈತರ ನೆರವಿಗೆ ಇರುವ ಸಹಕಾರಿ ಸಂಘಗಳನ್ನು ನಿರ್ಜೀವಗೊಳಿಸುವುದರ ಮೂಲಕ ರೈತರನ್ನು ಮತ್ತಷ್ಟು ಖಾಸಗಿ ಬಡ್ಡಿ ಲೇವಾದೇವಿಗಾರರ ತೆಕ್ಕೆಗೆ ತಳ್ಳುವ ಹಾಗೂ ಬ್ಯಾಂಕ್‌ಗಳ ಸಾಲಗಳನ್ನು ಹೆಚ್ಚು ಹೆಚ್ಚು [illegible] ಬಂಡವಾಳಶಾಹಿ ಕಂಪನಿಗಳಿಗೆ [illegible]ಗೊಳಿಸುವ ಈ ನೀತಿ ಜಾರಿಗೆ ಬಂದಲ್ಲಿ ತುಂಬಾ ಅಪಾಯಕಾರಿಯಾಗಲಿದೆ ಎಂದು ದುಂಡು ಮೇಜಿನ ಸಭೆಯಲ್ಲಿ ಮತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಎಚ್ಚರಿಸಿದರು.

1991 ರಿಂದ ಆರಂಭವಾದ ಜಾಗತೀಕರಣದಿಂದಾಗಿ 2013ರ ವರೆಗೆ ದೇಶದಲ್ಲಿ 3 ಲಕ್ಷಕ್ಕೂ ಅಧಿಕ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ದೇಶದಲ್ಲಿ 93 ಸಾವಿರ ಸಹಕಾರಿ ಬ್ಯಾಂಕುಗಳಿದ್ದು, 370 ಡಿ.ಸಿ.ಸಿ. ಬ್ಯಾಂಕ್ ಹಾಗೂ 32 ಇತರೇ ಸಹಕಾರಿ ಬ್ಯಾಂಕ್‌ಗಳಿವೆ. ಇವುಗಳಿಂದ 3.09 ಕೋಟಿ ರೈತರು ಸಾಲ ಪಡೆಯುತ್ತಿದ್ದಾರೆ. ರಾಜ್ಯದಲ್ಲಿ 2012-13ನೇ ಸಾಲಿನಲ್ಲಿ ಕೃಷಿಗೆ ನೀಡಲಾದ ಒಟ್ಟು ಸಾಲ ಸುಮಾರು 24.000 ಕೋಟಿ ರೂ.ಗಳು. ಇದರಲ್ಲಿ 5.099 ಪ್ರಾಥಮಿಕ ಸಹಕಾರ ಸಂಘಗಳ ಮೂಲಕ 6,030 ಕೋಟಿ ರೂ.ಗಳನ್ನು ಸಹಕಾರಿ ಕ್ಷೇತ್ರದ ಮೂಲಕ ನೀಡಲಾಗಿದೆ. ಅಂದರೆ ವಾಣಿಜ್ಯ ಬ್ಯಾಂಕ್‌ಗಳು, ನ್ಯಾಷನಲ್ ಬ್ಯಾಂಕ್‌ಗಳು ಹಾಗೂ ಗ್ರಾಮೀಣ ಬ್ಯಾಂಕ್‌ಗಳು ನೀಡಿರುವ ಒಟ್ಟು ಸಾಲದಲ್ಲಿ ಸಹಕಾರಿ ಬ್ಯಾಂಕ್‌ಗಳು ನೀಡಿರುವ ಸಾಲದ ಪ್ರಮಾಣ ಸು. ಶೇ. 25 ಇದೆ. ರಾಷ್ಟ್ರಮಟ್ಟದಲ್ಲಿ ಈ ಪ್ರಮಾಣ ಶೇ. 17 ಇದೆ. ಸಹಕಾರಿ ಬ್ಯಾಂಕುಗಳು ಜನರ ಬದುಕಿನ ಜೊತೆ ಹಾಸು ಹೊಕ್ಕಾಗಿ ಬೆರೆತಿವೆ. ಜನರಿಗೆ ಸುಲಭವಾಗಿ ಕೈಗೆಟುಕುವಂತಿವೆ.

ರಾಜ್ಯ ಸರ್ಕಾರ ಸಹಕಾರಿ ಸಂಘಗಳಿಂದ ಪಡೆಯುವ 2 ಲಕ್ಷ ರೂ.ವರೆಗಿನ ಕೃಷಿ ಸಾಲವನ್ನು ಬಡ್ಡಿ ರಹಿತವಾಗಿ ನೀಡಬೇಕೆಂದು ಘೋಷಣೆ ಮಾಡಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಿದೆ. ಬಡ ರೈತರು, ಮಧ್ಯಮ ರೈತರು, ಬಡ ಕೂಲಿಕಾರರು ಗ್ರಾಮೀಣ ಪ್ರದೇಶಗಳ ಜನಸ್ನೇಹಿಯಾದ ಸಹಕಾರಿ ಬ್ಯಾಂಕ್‌ಗಳ ಕತ್ತು ಹಿಸುಕುವ ಕೆಲಸ ಖಂಡಿತ ಸಲ್ಲದು. ಈಗ 'ನಬಾರ್ಡ್'ನವರ ಈ ಸುತ್ತೋಲೆಯು ಜಾರಿಗೆ ಬಂದರೆ ಕೃಷಿ ಕ್ಷೇತ್ರದ ಪ್ರಗತಿ ಗಣನೀಯವಾಗಿ ಕುಂಠಿತವಾಗುವುದರ ಜೊತೆಗೆ ಸುಮಾರು 25 ಸಾವಿರ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಗಳು ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಇದು ಒಂದು ರೀತಿಯಲ್ಲಿ ಗ್ರಾಮೀಣ ಮಟ್ಟದ ಚಳವಳಿಯ ಹತ್ಯೆಯಾದಂತೆ ಎಂದು ಬಯ್ಯಾರೆಡ್ಡಿ ಕಳವಳ ವ್ಯಕ್ತಪಡಿಸಿದರು. ಕೇರಳ ಮತ್ತು ಗುಜರಾತ್ ರಾಜ್ಯ ಸರ್ಕಾರಗಳು ನಬಾರ್ಡ್‌ನ ಈ ಸೂಚನೆಯನ್ನು ತಾವು ಜಾರಿಮಾಡುವುದಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಅಧಿಕೃತವಾಗಿ ತಿಳಿಸಿವೆ. ಅದರಂತೆ ಕರ್ನಾಟಕ ರಾಜ್ಯ ಸರ್ಕಾರವು ಕೂಡ ಈ ಬಗ್ಗೆ ಸ್ಪಷ್ಟ ತೀರ್ಮಾನ ಕೈಗೊಂಡು ಕೇಂದ್ರ-ಕ್ಕೆ ತಿಳಿಸಬೇಕು ಎಂದು ಬಯ್ಯಾರೆಡ್ಡಿ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ತೊಟ್ಟಿಲಿನಿಂದ ಶ್ಮಶಾನದವರೆಗೆ

ಡಿ.ಸಿ.ಸಿ. ಉಪಾಧ್ಯಕ್ಷ ಡಿ.ಎನ್. ನಾಯಕ ಅವರು ಮಾತನಾಡಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೂ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಸಹಕಾರ ಚಳುವಳಿ ಬಲವಾಗಿದೆ. ಶಿರಸಿಯಲ್ಲಿ ಮೂರು-ನಾಲ್ಕು ಸಹಕಾರಿ ಬ್ಯಾಂಕುಗಳು ಇವೆ. ಮನುಷ್ಯನ ಹುಟ್ಟಿನಿಂದ ಆರಂಭಿಸಿ ಗ್ರಾಮೀಣ ಜನರ ಆರೋಗ್ಯ, ಮಕ್ಕಳ ಶಿಕ್ಷಣ, ಮದುವೆ, ಬದುಕಿನ ಅಗತ್ಯಗಳು ಕೊನೆಗೆ ಸಾವು ಉಂಟಾದಾಗ ಅಂತ್ಯಸಂಸ್ಕಾರದ ವೆಚ್ಚಗಳಿಗಾಗಿ ಅಂದರೆ ತೊಟ್ಟಿಲಿನಿಂದ ಸ್ಮಶಾನದ ವರೆಗಿನ ಅಗತ್ಯಗಳಿಗೆ ಸಹಕಾರಿ ಬ್ಯಾಂಕುಗಳು ಅಗತ್ಯ ನೆರವು. ಸುಲಭ ಸಾಲ ನೀಡುತ್ತಾ ಜನಜೀವನದಲ್ಲಿ ಬೆರೆತಿವೆ. ಇದ-ರಿಂದ ಗ್ರಾಮೀಣ ಜನರು ತಿಂಗಳಿಗೆ ಶೇ. 4 ಅಥವಾ 5 ರ ಖಾಸಗಿ ಬಡ್ಡಿಯಲ್ಲಿ ಸಾಲ ತೆ-ಗೆದುಕೊಂಡು ರೈತರು, ಗ್ರಾಮೀಣ ಬಡವರು ಆತ್ಮಹತ್ಯೆಗೆ ಶರಣಾಗುವುದು ತಪ್ಪುತ್ತಿದೆ ಎಂದರು.

ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಅಧ್ಯಕ್ಷತೆ ವಹಿಸಿದ್ದು, ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲೆಯ ಹಿರಿಯ ಸಹಕಾರಿ, ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ, ತಾಲೂಕ ಪಂಚಾಯತ್ ಮಾಜಿ ಅಧ್ಯಕ್ಷರಾದ ಎಸ್.ಎಂ. ವೈದ್ಯ, ಜಿಲ್ಲಾ ಪಂಚಾಯತ್ ಸದಸ್ಯರಾದ ಉದಯ ಡಿ. ನಾಯ್ಕ, ವಿವಿಧ ಸಹಕಾರಿ ಸಂಘಗಳ ಅಧ್ಯಕ್ಷರಾದ ಜಯರಾಮ ನಾಯಕ, ರಾಮಚಂದ್ರ ನಾಯಕ, ರಾಮಕೃಷ್ಣ ನಾಯಕ ಸೂರ್ವೆ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ರಮಾನಂದ ನಾಯಕ ವಿಷಯದ ಕುರಿತು ಮಾತನಾಡಿದರು. ಸಭೆಯಲ್ಲಿ ಸಹಕಾರಿ ಸಂಘದ ಪ್ರಮುಖರಾದ ರಾಜು ನಾಯಕ, ಗುರು ನಾಯಕ, ರಮಾನಂದ ನಾಯಕ ಅಚವೆ, ಬೊಮ್ಮಯ್ಯ ನಾಯಕ, ಕೃಷ್ಣ ನಾಯ್ಕ ಇತರರಿದ್ದರು. ಪ್ರಾಂತ ರೈತರ ಸಂಘದ ತಾಲೂಕಾಧ್ಯಕ್ಷ ಗೌರೀಶ ನಾಯಕ ಸ್ವಾಗತಿಸಿದರು.

'ರೈತ ವಿರೋಧಿಯಾದ ವಿ.ವಿ. ಸಂಶೋಧನೆಗಳು'
ಹೋಳೂರು ಶಂಕರ್ ಸ್ಮಾರಕ ವಿಚಾರಗೋಷ್ಠಿಯಲ್ಲಿ ಸಿ. ಯತಿರಾಜು

ವರದಿ: ವೀಕ್ಷಕ

- ದೇಶದಲ್ಲಿ ರಾಜಸ್ಥಾನದ ನಂತರ ಮರುಭೂಮಿಯಾಗುವ ಅಪಾಯವಿರುವ ರಾಜ್ಯವೆಂದರೆ ಅದು ಕರ್ನಾಟಕ. ಅದರಲ್ಲೂ ಅವಿಭಜಿತ ಕೋಲಾರ ಜಿಲ್ಲೆ ಈ ವಿಚಾರದಲ್ಲಿ ಪ್ರಥಮ ಸ್ಥಾನದಲ್ಲಿದೆ. ...
- ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳು ಹಾಗೂ ವಿಜ್ಞಾನಿಗಳು ನಡೆಸುವ ಸಂಶೋಧನೆಗಳು ದೇಶದ ಕೃಷಿಕರಿಗೆ ಯಾವುದೇ ರೀತಿಯಲ್ಲೂ ಪ್ರಯೋಜನಕಾರಿ ಆಗುತ್ತಿಲ್ಲ. ಯಾಕೆಂದರೆ ಅವೆಲ್ಲವೂ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ ತಾಳಕ್ಕೆ ತಕ್ಕಂತೆ ಕುಣಿದು ವಿದೇಶಿ ಮಾರುಕಟ್ಟೆಗೆ ಅನುಕೂಲವಾದ ಸಂಶೋಧನೆಗಳನ್ನಷ್ಟೇ ಕೈಗೊಳ್ಳುತ್ತಿವೆ. ನಮ್ಮ ದೇಶದ ರೈತರ ತಮ್ಮ ಅಪಾರ ಅನುಭವವನ್ನು ಬಳಸಿಕೊಂಡು ನಮ್ಮ ಕೃಷಿಯನ್ನು ಹಾಗೂ ತನ್ಮೂಲಕ ಬದುಕನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಬೇಕಾಗಿದೆ.

ತುಮಕೂರಿನ ಕಾಳಿದಾಸ ಪದವಿಪೂರ್ವ ಕಾಲೇಜ್‌ನ ನಿವೃತ್ತ ಪ್ರಾಂಶುಪಾಲ ಹಾಗೂ ಭಾರತ ಜ್ಞಾನವಿಜ್ಞಾನ ಸಮಿತಿಯ ಮುಖಂಡ ಸಿ. ಯತಿರಾಜು ಅವರ ಎಚ್ಚರಿಕೆಯ ಮಾತುಗಳು ಹಾಗೂ ಸಲಹೆಗಳಿವು.

ಸಂದರ್ಭ:


ಆಗಸ್ಟ್ 28ರಂದು ಕೋಲಾರದಲ್ಲಿ ಹೋಳೂರು ಶಂಕರ್ ಸ್ಮಾರಕ ಸಮಿತಿ ಏರ್ಪಡಿಸಿದ್ದ 'ಕೋಲಾರ ಜಿಲ್ಲೆಯ ಬರಗಾಲ: ಪ್ರಕೃತಿಯ ಮುನಿಸೋ ಮಾನವ ನಿರ್ಮಿತವೋ' ವಿಚಾರ ಸಂಕಿರಣ. ರೈತ ಹೋರಾಟಗಾರ ಸಂಗಾತಿ ಹೋಳೂರು ಶಂಕರ್ ಅವರ ನಿಧನದ ನಾಲ್ಕನೇ ವಾರ್ಷಿಕದ ಅಂಗವಾಗಿ ವಿಚಾರಗೋಷ್ಠಿಯನ್ನು ವ್ಯವಸ್ಥೆಗೊಳಿಸಲಾಗಿತ್ತು.

ಜಾಗತಿಕ ತಾಪಮಾನ (ಗ್ಲೋಬಲ್ ವಾರ್ಮಿಂಗ್) ಪರಿಣಾಮವಾಗಿ ಜಗತ್ತಿನ ನಾನಾ ಭಾಗಗಳಲ್ಲಿ ವಾತಾವರಣದಲ್ಲಿ ಏರುಪೇರು ಆಗುತ್ತಿದೆ ಎಂದು ಹೇಳಿದ ಯತಿರಾಜು ಜಗತ್ತಿನೆಲ್ಲೆಡೆ ದಾಖಲಾದ ಪ್ರವಾಹ, ಸುನಾಮಿ, ಚಂಡಮಾರುತಗಳು, ಭೂಕಂಪ, ಬರಗಾಲ ಮೊದಲಾದ ಪ್ರಕೃತಿ ವಿಕೋಪಗಳಿಂದ ಆದ ಅನಾಹುತಗಳು ಹಾಗೂ ಜೀವಹಾನಿ ಬಗ್ಗೆ ವಿವರಿಸಿದರು.

ಗ್ಲೋಬಲ್ ವಾರ್ಮಿಂಗ್‌ಗೆ ಕಾರಣವಾಗುವ ಹಸಿರುಮನೆ ಅನಿಲದ ಪ್ರಮಾಣ 280 ಪಿಪಿಎಂ (ಪಾಯಿಂಟ್ ಪರ್ ಮಿಲಿಯನ್) ನಿಂದ 480ಕ್ಕೆ ಏರಿದೆ. ಇದನ್ನು ನಿಯಂತ್ರಿಸದಿದ್ದರೆ ವಿನಾಶ ಕಟ್ಟಿಟ್ಟ ಬುತ್ತಿ ಎಂಬ ವಿಜ್ಞಾನಿಗಳ ಎಚ್ಚರಿಕೆಯನ್ನು ಅವರು ನೆನಪಿಸಿದರು.

ಬಯಲು ಸೀಮೆಯ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಮೊದಲಾದ ಜಿಲ್ಲೆಗಳು ಒಣಾವಲಯದ ಪ್ರದೇಶಗಳಾಗಿದ್ದು ಇಲ್ಲಿನ ಜಮೀನಿಗೆ ನೀರನ್ನು ಹಿಡಿದಿಡುವ ಸಾಮರ್ಥ್ಯ ಕಮ್ಮಿ. ಇದುವೇ ಸತತ ಬರಗಾಲಕ್ಕೆ ಕಾರಣ ಎಂದು ವಿಶ್ಲೇಷಿಸಿದರು.

ಕೋಲಾರದ ಜನರು ಶ್ರಮಜೀವಿಗಳು ಎಂದು ಮೆಚ್ಚಿದ ಅವರು, ಇಲ್ಲಿನ ರೈತರು ಪ್ರಯೋಗಶೀಲರು ಎಂದೂ ನುಡಿದರು.



ಕೋಲಾರ ಜಿಲ್ಲೆಯನ್ನು ಪದೇ ಪದೇ ಕಾಡುವ ಬರಗಾಲವನ್ನು ವಿಶ್ಲೇಷಿಸಿದ ಅವರು, ಇಲ್ಲಿನ ಕೃಷಿಗೆ 55 ದಿನಗಳ ಮಳೆ ಬೇಕಾಗುತ್ತದೆ ಎಂದರು. ಆದರೆ ಈ ಮಳೆ ಬೇರೆ ಬೇರೆ ಘಟ್ಟಗಳಲ್ಲಿ ಬೀಳಬೇಕಾಗುತ್ತದೆ. ಯಾವುದೋ ಸಂದರ್ಭದಲ್ಲಿ ಬಂದು ಹೋದರೆ ಕೃಷಿಗೆ ಪ್ರಯೋಜನವಿಲ್ಲ ಎಂದರು.

ಭಾರತದ ಕೃಷಿಯನ್ನು ಸಾಮಾನ್ಯವಾಗಿ ಮಳೆ ಜತೆಗಿನ ಜೂಜಾಟ ಎನ್ನಲಾಗುತ್ತದೆ. ಬದಲಾದ ಪರಿಸ್ಥಿತಿಯಲ್ಲಿ ಅದು ಹವಾಮಾನ ವೈಪರೀತ್ಯ ಜತೆಗಿನ ಜೂಜಾಟವಾಗಿದೆ ಎಂದರು.

ವಿರೋಧಾಭಾಸ

ಒಂದೆಡೆ ರಾಜ್ಯದ ಎಲ್ಲಾ ಅಣೆಕಟ್ಟುಗಳು ತುಂಬಿ ತುಳುಕುತ್ತಿವೆ ಎಂದು ಸಂಭ್ರಮಿಸುವಾಗಲೇ ರಾಜ್ಯದ ಬಹಳಷ್ಟು ಜಿಲ್ಲೆಗಳು ಮಳೆಯನ್ನೇ ಕಾಣದೆ ಕಂಗಾಲಾಗಿವೆ ಎಂದು ನುಡಿದರು.

ಬಯಲುಸೀಮೆ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಬೇಕೆಂಬ ಬೇಡಿಕೆ ಹಾಗೂ ಅದರ ಕುರಿತಾದ ಯೋಜನೆಯನ್ನು ಪ್ರಸ್ತಾಪಿಸಿದ ಯತಿರಾಜು, ಆ ರೀತಿ ನೀರು ಬರುವವರೆಗೆ ಏನು ಮಾಡುತ್ತೀರಿ ಎಂದು ಪ್ರಶ್ನಿಸುತ್ತಾ ಲಭ್ಯ ಜಲಸಂಪನ್ಮೂಲದ ಬಳಕೆ ಹಾಗೂ ಇರುವ ಕೆರೆ ಕುಂಟೆಗಳ ನೀರನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೆಚ್ಚಿಸುವತ್ತ ಗಮನ ಹರಿಸಬೇಕಾದುದು ಅಗತ್ಯ ಎಂದು ಪ್ರತಿಪಾದಿಸಿದರು.

ಕೃಷಿ, ತೋಟಗಾರಿಕೆ, ಅರಣ್ಯ, ಮೀನುಗಾರಿಕೆ ... ಹೀಗೆ ಎಲ್ಲಾ ಇಲಾಖೆಗಳು, ವಿವಿಗಳು ನಡೆಸುವ ಸಂಶೋಧನೆಗಳು ಎಂಎನ್‌ಸಿ ಪ್ರಾಯೋಜಿತವಾಗಿದ್ದು ಜನರಿಗೆ ಪ್ರಯೋಜನ ಆಗುತ್ತಿಲ್ಲ ಎಂದರು.

ರೈತರು ಆಯಾ ಪ್ರದೇಶಕ್ಕೆ ಒಗ್ಗುವ ಬೆಳೆಗಳನ್ನು ಕೃಷಿ ಮಾಡುವತ್ತ ಗಮನ ಹರಿಸಬೇಕೇ ಹೊರತು ದಿಕ್ಕು ತಪ್ಪಿಸುವ ಕೃಷಿ, ತೋಟಗಾರಿಕೆ ಅಧಿಕಾರಿಗಳ ಮಾತನ್ನು ಕೇಳಬಾರದು ಎಂಬುದು ಯತಿರಾಜು ಅವರ ಸಲಹೆಯಾಗಿತ್ತು.

ರಸಗೊಬ್ಬರ, ಕೀಟನಾಶಕ ಮೊದಲಾದವುಗಳ ಅತಿಯಾದ ಬಳಕೆಯಿಂದಾಗಿ ಆಹಾರ ಉತ್ಪನ್ನಗಳು ವಿಷಯುಕ್ತವಾಗುತ್ತಿರುವುದನ್ನೇ ಮುಂದಿಟ್ಟುಕೊಂಡು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ತೆಗಳುವ ಪ್ರವೃತ್ತಿ ಸರಿಯಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸೂಕ್ತ ರೀತಿಯಲ್ಲಿ ಸಂಯೋಜಿಸದಿರುವುದೇ ಸಮಸ್ಯೆಯ ಮೂಲ ಎಂದವರು ಹೇಳಿದರು.

ಪೌಷ್ಟಿಕಾಂಶಭರಿತ ಸಿರಿಧಾನ್ಯಗಳೆಂದು ಕರೆಯಲಾಗುವ ಕಿರುಧಾನ್ಯಗಳಾದ ರಾಗಿ, ನವಣೆ, ಸಜ್ಜೆ ಮೊದಲಾದವುಗಳಿಗೆ ಬೇಡಿಕೆ ಹೆಚ್ಚಾಗುತ್ತಿದ್ದು ಅವುಗಳನ್ನು ಬೆಳೆದು ಉತ್ತಮ ಜೀವನ ನಡೆಸುವತ್ತ ಮುಂದಾಗಿ ಎಂದರು.

ಮೂರಂಶ ಸೂತ್ರ

ಲಭ್ಯ ನೀರಿನ ಬಳಕೆ, ಹೊಂದಾಣಿಕೆಯಾಗುವ ಬೆಳೆ, ಗರಿಷ್ಠ ಲಾಭ– ಈ ಸೂತ್ರದ ಆಧಾರದಲ್ಲಿ ರೈತ ಚಳವಳಿಯನ್ನು ಹುಟ್ಟುಹಾಕುವ ಅಗತ್ಯವಿದೆ ಎಂದು ಕೃಷಿ ವಿಚಾರದಲ್ಲಿ ಸತತ ಅಧ್ಯಯನ ಮಾಡುತ್ತಿರುವ ಅವರು ಪ್ರತಿಪಾದಿಸಿದರು.

ಸ್ಮಾರಕ ಸಮಿತಿಯ ಅಧ್ಯಕ್ಷ ಎಸ್. ಚಂದ್ರಶೇಖರ್ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತಸಂಘ ರಾಜ್ಯ ಉಪಾಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, ಜಿಲ್ಲಾ ಅಧ್ಯಕ್ಷ ಪಿ. ಆರ್. ಸೂರ್ಯನಾರಾಯಣ, ಪ್ರಧಾನ ಕಾರ್ಯದರ್ಶಿ ಟಿ.ಎಂ. ವೆಂಕಟೇಶ್, ಸಹ ಕಾರ್ಯದರ್ಶಿ ಗಂಗಮ್ಮ, ಸಿಪಿಐ (ಎಂ) ರಾಜ್ಯಸಮಿತಿ ಸದಸ್ಯ ಗಾಂಧಿನಗರ ನಾರಾಯಣಸ್ವಾಮಿ, ಜೆಎಂಎಸ್‌ನ ವಿ. ಗೀತಾ ಮಾತನಾಡಿದರು.

ಚಿತ್ರಶೀರ್ಷಿಕೆ:

ಕೋಲಾರದಲ್ಲಿ ಹೋಳೂರು ಶಂಕರ್ ಸ್ಮಾರಕ ಸಮಿತಿ ಏರ್ಪಡಿಸಿದ್ದ 'ಕೋಲಾರ ಜಿಲ್ಲೆಯ ಬರಗಾಲ: ಪ್ರಕೃತಿಯ ಮುನಿಸೋ ಮಾನವ ನಿರ್ಮಿತವೋ' ವಿಚಾರ ಸಂಕಿರಣದಲ್ಲಿ ಸಿ. ಯತಿರಾಜು ಮತನಾಡಿದರು. ಜಿ.ಸಿ. ಬಯ್ಯಾರೆಡ್ಡಿ ಮೊದಲಾದವರು ಭಾಗವಹಿಸಿದ್ದರು.

ಯೂರೋ ಬಿಕ್ಕಟ್ಟು

ಪುಟ 2 ರಿಂದ

ಸ್ಲೋವೇಕಿಯಾ, ಲ್ಯಾಟ್ವಿಯಾ, ಹಂಗರಿ ಇತ್ಯಾದಿ ಹಳೆಯ ಸಮಾಜವಾದೀ ಬಣದ ರಾಷ್ಟ್ರಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಯೂರೋಪಿನೆಲ್ಲೆಡೆ ವ್ಯಾಪಿಸುತ್ತಿರುವ ಜನಾಂದೋಲನಗಳು ಈ ಹಳೆಯ ಸಮಾಜವಾದೀ ರಾಷ್ಟ್ರಗಳನ್ನು ಇನ್ನೂ ಹೆಚ್ಚಾಗಿ ಆವರಿಸಿದೆ. ಜನ ಬಹಿರಂಗವಾಗಿಯೇ ಹಿಂದಿನ ವ್ಯವಸ್ಥೆಯಲ್ಲಿ ನಾವು ಇಷ್ಟೊಂದು ಕಷ್ಟಗಳನ್ನು ಅನುಭವಿಸಿರಲಿಲ್ಲ ಎಂದು ಹೇಳತೊಡಗಿದ್ದಾರೆ. ಇತ್ತೀಚೆಗೆ ರೊಮೇನಿಯಾದಲ್ಲಿ ನಡೆದ ಜನಮತ ಸಂಗ್ರಹದಲ್ಲಿ ಶೇ.80 ಕ್ಕೂ ಹೆಚ್ಚು ಜನ ತಾವು ಸಮಾಜವಾದದಡಿಯಲ್ಲಿಯೇ ಸುಖಿಯಾಗಿದ್ದೆವು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ದೇಶಗಳ ಇನ್ನೊಂದು ದುರಂತವೆಂದರೆ ಅಲ್ಲಿನ ರಾಜಕೀಯ ಕುಳಗಳು, ಬಂಡವಾಳಗಾರರು, ಕಾನೂನುಬಾಹಿರ ಅಪರಾಧಗಳಲ್ಲಿ ತೊಡಗಿರುವ ಶಕ್ತಿಗಳು, ದೇಶದ ರಕ್ಷಣೆಯ ಹೊಣೆ ಹೊತ್ತಿರುವ ಭದ್ರತಾದಳ ಮತ್ತು ಕಾನೂನು ಪಾಲಕರು ಒಟ್ಟಾಗಿ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುತ್ತಿರುವುದು. ಜತೆ–ಗೇ ಜನರ ಪ್ರತಿಭಟನೆಯ ಹಕ್ಕುಗಳನ್ನೇ ಮೊಟಕುಗೊಳಿಸುತ್ತಾ ಬಂದಿರುವುದು. ಅಷ್ಟಾಗ್ಯೂ ಎದ್ದುಬರುತ್ತಿರುವ ಜನರ ಪ್ರತಿಭಟನೆಗಳನ್ನು ಬರ್ಬರವಾದ ರೀತಿಯಲ್ಲಿ ಹತ್ತಿಕ್ಕಲು ಪ್ರಯತ್ನಿಸುತ್ತಿರುವುದು. ಒಂದು ರೀತಿಯಲ್ಲಿ ನಾಗರೀಕ ಸರ್ಕಾರಗಳೇ ಇಲ್ಲದಂತಹ, ಭ್ರಷ್ಟ ಲಂಪಟರ ಹಿಂಡು ಹಿಂಡೇ ಮೆರೆಯುತ್ತಿರುವ ವಾತಾವರಣ ವ್ಯಾಪಿಸಿಕೊಂಡಿದೆ. ಇನ್ನುಳಿದಂತೆ ಯೂ–ರೋ ಸಮುದಾಯದ ಇತರ ದೇಶಗಳ ಬಗ್ಗೆ ಹೇಳುವಂತೆಯೇ ಇಲ್ಲ. ಈಗಾಗಲೇ ದಿವಾಳಿಯೆದ್ದಿರುವ ಗ್ರೀಸ್, ಪೋರ್ಚುಗಲ್, ಇಟಲಿ, ಸ್ಪೇನ್, ಸೈಪ್ರಸ್, ಐರ್ಲ್ಯಾಂಡ್‌ಗಳ ಬಗೆ ಸಾಕಷ್ಟು ವರದಿಗಳು ಬಂದಿವೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಈಗ ಅರಣ್ಯಭೂಮಿ ಹಗರಣ: ಇದೂ ಕಾರ್ಪೊರೇಟ್‌ಗಳ ಸೇವೆಯಲ್ಲಿ!

ದೇಶದ ಮಹಾಲೆಕ್ಕ ಪರಿಶೋಧಕರ(ಸಿಎಜಿ) ಇನ್ನೊಂದು ವರದಿ ಮತ್ತೊಂದು ಯುಪಿಎ ಹಗರಣದತ್ತ ಬೊಟ್ಟು ಮಾಡಿದೆ. ಕಳೆದ ವಾರ ಸಂಸತ್ತಿನಲ್ಲಿ ಮಂಡಿಸಿದ ಅದರ ಅರಣ್ಯಭೂಮಿ ಮತ್ತು ಪರ್ಯಾಯ ಅರಣ್ಯೀಕರಣ ಕುರಿತ ವರದಿ ಎಕ್ರೆಗಟ್ಟಲೆ ಅರಣ್ಯಭೂಮಿಗಳನ್ನು ಕಾರ್ಪೊರೇಟ್‌ಗಳಿಗೆ ಕಾನೂನಿನ ವಿಧಿ-ವಿಧಾನಗಳನ್ನು ಪಾಲಿಸದೆ ವರ್ಗಾಯಿಸಿ ದೇಶದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂ.ಗಳ ನಷ್ಟ ಉಂಟು ಮಾಡಿದೆ ಎಂದಿದೆ. ಪರಿಸರ ಮಂತ್ರಾಲಯದ ಅತ್ಯುನ್ನತ ಅಧಿಕಾರಿಗಳು ಮತ್ತು ಕೆಲವು ರಾಜ್ಯಸರಕಾರಗಳು ಇದಕ್ಕೆ ಹೊಣೆ ಎಂದಿದೆ ಈ ವರದಿ.


ಅಭಿವೃದ್ಧಿ ಮತ್ತು ಕೈಗಾರಿಕಾ ಯೋಜನೆಗಳಿಗೆ ಅರಣ್ಯಭೂಮಿಗಳನ್ನು ಕೊಡಬೇಕಾಗಿದ್ದರೆ ಹಾಗೆ ವಹಿಸಿ ಕೊಡುವಾಗ ಅದನ್ನು ಪಡೆದವರು ಪರ್ಯಾಯ ಭೂಮಿಗಳಲ್ಲಿ ಅರಣ್ಯೀಕರಣ ನಡೆಸಬೇಕು ಮತ್ತು ವರ್ಗಾಯಿಸಿದ ಅರಣ್ಯಭೂಮಿಯ 'ನೆಟ್ ಪ್ರೆಸೆಂಟ್ ವ್ಯಾಲ್ಯು'(ನಿವ್ವಳ ಹಾಲೀ ಮೌಲ್ಯ)ವನ್ನು ತೆರಬೇಕು. ಇದಕ್ಕಾಗಿ ಸುಪ್ರಿಂಕೋರ್ಟ್ ಆದೇಶದ ಮೇರೆಗೆ ಸರಕಾರ 'ಪರಿಹಾರಾತ್ಮಕ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ'(ಸಿಎಎಂಪಿಎ) ಎಂಬುದನ್ನೂ ರಚಿಸಿದೆ. ಈ ನಿಧಿಯನ್ನು ದೇಶದ ಇತರೆಡೆಗಳಲ್ಲಿ ಅರಣ್ಯೀಕರಣಕ್ಕೆ ಬಳಸಬೇಕು. ಆದರೆ ಇದರ ನಿರ್ವಹಣೆಯಲ್ಲಿಯೂ, ಬಹುಶಃ ಚಮಚಾ ಬಂಡವಾಳಶಾಹಿಯ 'ಪರಂಪರೆ'ಗೆ ಅನುಗುಣವಾಗಿ, ಒಂದು ದೊಡ್ಡ ಹಗರಣ ಸೃಷ್ಟಿಯಾಗಿದೆ ಎಂಬುದು ಸಿಎಜಿಯ ಲೆಕ್ಕ ಪರಿಶೋಧನೆಯಿಂದ ಬೆಳಕಿಗೆ ಬಂದಿದೆ.

ನಿಯಮಗಳ ಪ್ರಕಾರ 1,03,381.91 ಹೆಕ್ಟೇರ್ ಅರಣ್ಯೇತರ ಭೂಮಿಯನ್ನು ಅರಣ್ಯಭೂಮಿಯಾಗಿ ಪರಿವರ್ತಿಸಬೇಕಾಗಿತ್ತು. ಇದರಲ್ಲಿ ಅರಣ್ಯೀಕರಣಕ್ಕೆ ಪಡೆದದ್ದು ಕೇವಲ 28,086 ಹೆಕ್ಟೇರ್. ಅಂದರೆ ಕೇವಲ 27ಶೇ. ಅದರಲ್ಲೂ ಅರಣ್ಯೀಕರಣ ಆರಂಭವಾಗಿರುವುದು ಕೇವಲ 7280.84 ಹೆಕ್ಟೇರುಗಳಲ್ಲಿ. ಅಂದರೆ 7ಶೇ.ದಲ್ಲಿ ಮಾತ್ರ.

ಸಿಎಜಿ ನಡೆಸಿದ ದಾಖಲೆಗಳ ಪರೀಕ್ಷಾರ್ಥ ತನಿಖೆಗಳಲ್ಲಿ 1,022 ಕೇಸುಗಳಲ್ಲಿ 2.54ಲಕ್ಷ ಹೆಕ್ಟೇರ್ ಭೂಮಿ ಐದು ವರ್ಷಗಳ ನಂತರವೂ ವರ್ಗಾವಣೆಯ ಮುಂಜೂರಾತಿಗೆ ಹಾಕಿದ್ದ ಈ ಶರತ್ತುಗಳನ್ನು ಪಾಲಿಸಿಲ್ಲ. ಆದರೂ ಕಾನೂನಿನ ಪ್ರಕಾರ ಅಂತಹ ಮಂಜೂರಾತಿಗಳನ್ನು ರದ್ದು ಮಾಡುವ ಕ್ರಮಗಳನ್ನು ಕೈಗೊಂಡಿಲ್ಲ, ಸಾವಿರಾರು ಕೋಟಿ ರೂ.ಗಳಷ್ಟು ಅರಣ್ಯೀಕರಣ ನಿಧಿಗಳನ್ನು ಸಂಗ್ರಹಿಸಿಯೇ ಇಲ್ಲ ಎಂದು ಸಿಎಜಿ ಪರಿಶೋಧನೆಯಲ್ಲಿ ಬೆಳಕಿಗೆ ಬಂದಿದೆ.

ಸಿಎಜಿ ನಡೆಸಿದ ಕೆಲವು ಆರಿಸಿದ ಪರೀಕ್ಷಾರ್ಥ ತನಿಖೆಗಳಲ್ಲಿ ಬೆಳಕಿಗೆ ಬಂದಿರುವ ಹೆಸರುಗಳಲ್ಲಿ ಕರ್ನಾಟಕ ಮತ್ತು ಗೋವಾದ ಗಣಿಗಾರರ ಹೆಸರುಗಳಲ್ಲದೆ ಅಂಬಾನಿಯ ರಿಲಯಂಸ್ ಪವರ್ ಮತ್ತು ಟಾಟಾ ಸ್ಟೀಲ್ ಮುಂತಾದ ದೊಡ್ಡ ಹೆಸರುಗಳೂ ಇವೆ ಎಂಬುದು ಗಮನಾರ್ಹ.

ಸಾಸನ್ ಪವರ್ ಲಿಮಿಟೆಡ್ ಎಂಬುದನ್ನು ಬೃಹತ್ ವಿದ್ಯುತ್ ಯೋಜನೆಗೆಂದು 'ವಿದ್ಯುತ್ ಹಣಕಾಸು ನಿಗಮ'(ಪಿಎಫ್‌ಸಿ)ದ ಅಂಗ ಕಂಪನಿಯಾಗಿ ಆರಂಭಿಸಲಾಯಿತು. ಆದರೆ ನವ-ಉದಾರವಾದದ 'ಪರಂಪರೆ'ಯಂತೆ ಅದನ್ನು 2007ರಲ್ಲಿ ಅಂಬಾನಿಗಳ ರಿಲಯಂಸ್ ಪವರ್‌ಗೆ ಹಸ್ತಾಂತರಿಸಲಾಯಿತು. ಈ ಕಂಪನಿ ಅರಣ್ಯ(ಸಂರಕ್ಷಣಾ) ಕಾನೂನು, 1980ರ ಪ್ರಕಾರ 1,384.96 ಹೆಕ್ಟೇರ್ ಅರಣ್ಯೇತರ ಭೂಮಿಯನ್ನು ಅರಣ್ಯೀಕರಣಕ್ಕೆ ಕೊಡಬೇಕಾಗಿತ್ತು. ಮಧ್ಯಪ್ರದೇಶ ಸರಕಾರದ ಮುಖ್ಯ ಕಾರ್ಯದರ್ಶಿಗಳ ಒಂದು ಪ್ರಮಾಣ ಪತ್ರದ ಆಧಾರದಲ್ಲಿ ಈ ಕಂಪನಿಗೆ ಈ ಬಾಧ್ಯತೆಯಿಂದ ವಿನಾಯ್ತಿ ಕೊಡಲಾಗಿದೆ. ಆದರೆ ಇದೊಂದು ಅನರ್ಹ ಪ್ರಮಾಣ ಪತ್ರ ಎಂದು ಸಿಎಜಿ ಹೇಳಿದೆ. ಏಕೆಂದರೆ ಈ ಯೋಜನೆಯಿರುವ ಸಿಧಿ ಜಿಲ್ಲೆಯಲ್ಲಿ ಅರಣ್ಯೇತರ ಭೂಮಿ ಇಲ್ಲ ಎಂದು ಈ ಪ್ರಮಾಣ ಪತ್ರ ಹೇಳಿದೆಯೇ ಹೊರತು, ಇಡೀ ರಾಜ್ಯದಲ್ಲಿ ಇಲ್ಲ ಎಂದೇನೂ ಹೇಳುವುದಿಲ್ಲ. ಆದ್ದರಿಂದ ಇಂತಹ ವಿನಾಯ್ತಿ ಕೊಡುವಂತಿಲ್ಲ. ಯುಪಿಎ ಪರಿಸರ ಮಂತ್ರಾಲಯ ಕೂಡ ಈ ಪ್ರಮಾಣ ಪತ್ರದಲ್ಲಿನ ನ್ಯೂನ್ಯತೆಯನ್ನು



ವೇದರಾಜ ಎನ್.ಕೆ.

ಅದೇಕೋ ಉಪೇಕ್ಷಿಸಿ ವಿನಾಯ್ತಿಯನ್ನು ಕೊಟ್ಟೇ ಬಿಟ್ಟಿದೆ ಎಂದು ಸಿಎಜಿ ವರದಿ ಹೇಳುತ್ತದೆ. ತಮಾಷೆಯೆಂದರೆ, ಅದೇ ರಾಜ್ಯದ ಅದರ ಪಕ್ಕದ ಸ್ಥಳದಲ್ಲೇ, ಅದೇ ಕಂಪನಿಯ ಇನ್ನೊಂದು ಪ್ರಾಜೆಕ್ಟಿಗೆ ಅದೇ ಮಂತ್ರಾಲಯ ಪರ್ಯಾಯ ಅರಣ್ಯೀಕರಣದ ಶರತ್ತು ಪಾಲಿಸಲೇ ಬೇಕು ಎಂದಿದೆ!

ಕಲ್ಲಿದ್ದಲು ಕಡತಗಳ 'ನಾಪತ್ತೆ'ಗೂ ಸಿಬಿಐ ತನಿಖೆ ಬೇಕಾದೀತೇ?

ಕಲ್ಲಿದ್ದಲು ಬ್ಲಾಕುಗಳ ನೀಡಿಕೆಗೆ ಸಂಬಂಧಪಟ್ಟಂತೆ 'ನಾಪತ್ತೆ'! ಕಡತಗಳ ಹುಡುಕಾಟ ಫಲ ನೀಡುವಂತೆ ಕಾಣುತ್ತಿಲ್ಲ ಎಂದು ವರದಿಯಾಗಿದೆ. ಆಗಸ್ಟ್ 30ರಂದು ದೇಶದ ಸರ್ವೋಚ್ಚ ನ್ಯಾಯಾಲಯ ಹೇಗೆ ತಾನೇ ಇಂತಹ ಮಹತ್ವದ ಕಡತಗಳು ಕಳೆದು ಹೋಗಲು ಸಾಧ್ಯ ಎಂದು ಸರಕಾರವನ್ನು ಖಾರವಾಗಿ ಪ್ರಶ್ನಿಸಿತ್ತು. ಹಾಗೆಯೆ ಸಿಬಿಐ, ಎರಡು ವಾರಗಳ ಒಳಗೆ ಈ ಕಡತಗಳು ತನ್ನ ಕೈಸೇರದಿದ್ದರೆ, ಈ ಬಗ್ಗೆಯೇ ತನಿಖೆ ನಡೆಸಬೇಕು ಎಂದು ಆದೇಶಿಸಿತ್ತು. ಇದರ ಪ್ರಕಾರ ಈ ವಾರದ ಅಂತ್ಯದ ಒಳಗೆ ಕಡತಗಳನ್ನು ಒಪ್ಪಿಸಬೇಕಾಗುತ್ತದೆ. ಇಲ್ಲವಾದರೆ ಅದಕ್ಕೂ ಸಿಬಿಐ ತನಿಖೆಯನ್ನು ಎದುರಿಸಬೇಕಾಗುತ್ತದೆ.

"ಕಡತಗಳನ್ನು ಹುಡುಕಲಾಗುತ್ತಿದೆ. ಪತ್ತೆ ಹಚ್ಚಲಾಗಿದೆ ಎಂಬುದು ನಿಮ್ಮ ವಿವರಣೆ. ಇದರಿಂದೇನೂ ಸಹಾಯವಾಗದು. ಎಲ್ಲೆಲ್ಲಾ ಮೇಲ್ನೋಟಕ್ಕೆ ಹಣಕಾಸು ಅಕ್ರಮಗಳಿವೆಯೋ, ಕಡತಗಳು ಕಳೆದು ಹೋಗಿವೆ. ಇವು ಅಧಿಕೃತ ದಸ್ತಾವೇಜುಗಳು. ಅವು ಲಭ್ಯವಿಲ್ಲ ಎಂದು ಹೇಳಲಾಗದು. ಕಡತಗಳು ಕಳೆದಿರುವ ಬಗ್ಗೆ ಎಫ್‌ಐಆರ್ ದಾಖಲಿಸಿದ್ದೀರಾ? ಇದು ದಸ್ತಾವೇಜುಗಳನ್ನು ನಾಶಮಾಡುವ ಪ್ರಯತ್ನವೇ?" ಎಂದು ನೇರವಾಗಿಯೇ ಸುಪ್ರಿಂ ಕೋರ್ಟ್ ಪ್ರಶ್ನಿಸಿದೆ. ಇದೊಂದು ಗಂಭೀರ ಸಂಗತಿ, ಈ ರೀತಿ ಕಾಗದಪತ್ರಗಳ ಮೇಲೆ ಸುಮ್ಮನೆ ಕೂತಿರಲು ಸಾಧ್ಯವಿಲ್ಲ, ಅವೆಲ್ಲ ಸಿಬಿಐ ತನಿಖೆಗೆ ಅಗತ್ಯ, ಅವು ಲಭ್ಯವಾಗದಿದ್ದರೆ ಅವು ಹೇಗೆ ಕಳೆದು ಹೋದವು, ಕದಿಯಲಾಗಿದೆಯೇ ಅಥವ ನಾಶಪಡಿಸಲಾಗಿದೆಯೇ ಎಂದು ತನಿಖೆ ಮಾಡಬೇಕಾಗುತ್ತದೆ ಮತ್ತು ಸೂಕ್ತ ಪ್ರತಿಕೂಲ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ ಎಂದು ಸುಪ್ರಿಂ ಕೋರ್ಟ್ ಎಚ್ಚರಿಸಿತ್ತು.

ಇದರ ನಂತರ ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ಪ್ರತಿಪಕ್ಷಗಳ ಒತ್ತಾಯದಿಂದಾಗಿ ಹೇಳಿಕೆಯನ್ನೇನೋ ಕೊಟ್ಟರು. ಆದರೆ ಅದರಲ್ಲಿ ಯಾವುದಕ್ಕೂ ಸಮಾಧಾನ ಸಿಗಲಿಲ್ಲ. ಸಿಗಲು ಸಾಧ್ಯವೂ ಇರಲಿಲ್ಲ. ಏಕೆಂದರೆ, ಸುಪ್ರಿಂ ಕೋರ್ಟ್ ಹೇಳಿದಂತೆ, ಎಲ್ಲೆಲ್ಲಾ ಮೇಲ್ನೋಟಕ್ಕೆ ಹಣಕಾಸು ಅಕ್ರಮಗಳಿವೆಯೋ, ಕಡತಗಳು ಕಳೆದು ಹೋಗಿವೆಯಾದ್ದರಿಂದ ಇದು ಅವನ್ನೆಲ್ಲ ಮುಚ್ಚಿ ಹಾಕುವ ಪ್ರಯತ್ನ ಎಂಬ ಸಂದೇಹ ಹೆಚ್ಚಿನವರಿಗೆ ಬಂದಿದೆ. ಹೇಳಿಕೆ ಕೊಟ್ಟು ಪ್ರಧಾನ ಮಂತ್ರಿಗಳು ಬಿರುಸಿನಿಂದ ಹೊರಟೇ ಬಿಟ್ಟರಂತೆ, ಈ ಹಿಂದೆ ತಿಳಿಸಿದಂತೆ ಕಲ್ಲಿದ್ದಲು ಮಂತ್ರಿಗಳ ಉತ್ತರವೂ ಇರಲಿಲ್ಲ.

"ಕಡತಗಳು ಏಕೆ ಕಳೆದು ಹೋದವು, ಯಾರು ಅದಕ್ಕೆ ಹೊಣೆ, ಯಾವ ಅವಧಿಯ ಕಡತಗಳವು, ಈ ಬಗ್ಗೆ ಯಾವುದೇ ದೂರು, ಎಫ್‌ಐಆರ್ ಏಕೆ ಸಲ್ಲಿಸಿಲ್ಲ ಈ ಯಾವುದರ ಬಗ್ಗೆಯೂ ಪ್ರಧಾನ ಮಂತ್ರಿಗಳು ವಿವರಣೆ ಎಂಬುದನ್ನೇ ಕೊಟ್ಟಿಲ್ಲ" ಎಂದಿರುವ ರಾಜ್ಯಸಭಾ ಸದಸ್ಯರೂ ಆದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಸೀತಾರಾಂ ಯೆಚೂರಿ, ಇದೊಂದು ಮುಚ್ಚಿ ಹಾಕುವ ಭಂಡ ಪ್ರಯತ್ನ, ಆದರೆ ಅದರಲ್ಲೂ ಕುಶಲತೆಯಿಲ್ಲ, ಸಂದೇಹದ ಮಟ್ಟವನ್ನು ಇದು ಇನ್ನಷ್ಟು ಹೆಚ್ಚಿಸಿದೆ ಎಂದು ಟಿಪ್ಪಣಿ ಮಾಡಿದ್ದಾರೆ.

ಈಗ ನ್ಯಾಯಾಲಯ ಕೊಟ್ಟಿರುವ ಅವಧಿ ಮುಗಿಯುತ್ತಿರುವಂತೆ, ಉಕ್ಕು ಮತ್ತು ವಿದ್ಯುತ್ ಮಂತ್ರಾಲಯಗಳು, ಕೈಗಾರಿಕಾ ಧೋರಣೆ ಮತ್ತು ಉತ್ತೇಜನೆ ಇಲಾಖೆ(ಡಿಐಪಿಪಿ) ಹಾಗೂ ಕೇಂದ್ರೀಯ ಗಣಿ ಯೋಜನೆ ಹಾಗೂ ವಿನ್ಯಾಸ ಸಂಸ್ಥೆ(ಸಿಎಂಪಿಡಿಐ) ಕೂಡ ತಮ್ಮ ಬಳಿಯೂ ಆ ದಸ್ತಾವೇಜುಗಳ ಪ್ರತಿಗಳಿಲ್ಲ ಎಂದು ಕೈಯೆತ್ತಿರುವುದಾಗಿ ವರದಿಯಾಗಿದೆ.

ಸಿಎಜಿ ಬಳಿ 2003 ರ ನಂತರದ ದಾಖಲೆಗಳು ಇವೆ. ಅವುಗಳ ಆಧಾರದಲ್ಲಿಯೇ ಅದು 1.86ಲಕ್ಷ ಕೋಟಿ ರೂ.ಗಳ ನಷ್ಟದ ಲೆಕ್ಕಾಚಾರ ಹಾಕಿತ್ತು. ಆದರೆ ಇದುವರೆಗೆ ಯುಪಿಎ ಸರಕಾರ ಅವರನ್ನು ಈ ದಾಖಲೆಗಳ ಪ್ರತಿಗಳನ್ನು ಕೊಡುವಂತೆ ಕೇಳಿಲ್ಲವಂತೆ. ಈ ಬಗ್ಗೆಯೂ ಪ್ರಧಾನ ಮಂತ್ರಿಗಳ 'ವಿವರಣೆ' ಏಕೋ ಮೌನವಾಗಿತ್ತು. ಅಲ್ಲದೆ 2003ರ ಮೊದಲಿನ ದಾಖಲೆಗಳು ಅಲ್ಲಿಯೂ ಸಿಗುವಂತಿಲ್ಲ, ಏಕೆಂದರೆ ಅವರಿಗೇ ಅದು ಸರಿಯಾಗಿ ಸಿಕ್ಕಿರಲಿಲ್ಲ ಎಂದು ಹೇಳಲಾಗಿದೆ.

ರಾಷ್ಟ್ರಪತಿಗಳ ಈ ಆತಂಕ!

ಆರೋಗ್ಯದ ಮೇಲೆ ಭಾರತ ಸರಕಾರ ಮಾಡುತ್ತಿರುವ ಖರ್ಚು ಜಿಡಿಪಿಯ 2ಶೇ.ದಷ್ಟೂ ಇಲ್ಲ ಎಂದು ಭಾರತದ ರಾಷ್ಟ್ರಪತಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಆರೋಗ್ಯ ಮತ್ತು ಶಿಕ್ಷಣದ ಮೇಲೆ ಮಾಡುವ ಖರ್ಚನ್ನು ಹೆಚ್ಚಿಸಬೇಕು ಎಂಬುದು ಎಡಪಕ್ಷಗಳ ಬಹಳ ದಿನಗಳ ಒತ್ತಾಯ. ವಿಶೇಷವಾಗಿ ಯುಪಿಎ-1 ಸರಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿದ್ದಾಗ ಈ ಬಗ್ಗೆ ಸತತ ಒತ್ತಾಯಗಳನ್ನೂ ಮಾಡಲಾಗಿತ್ತು, ಆರೋಗ್ಯದ ಮೇಲೆ ಜಿಡಿಪಿಯ 3ಶೇ.ದ ವರೆಗೆ, ಶಿಕ್ಷಣದ ಮೇಲೆ 6ಶೇ. ಖರ್ಚು ಮಾಡಬೇಕೆಂದು ಮತ್ತೆ-ಮತ್ತೆ ಆಗ್ರಹಿಸಲಾಗಿತ್ತು. ಅವಕ್ಕೆಲ್ಲ ಕಿವಿಗೊಡದ ಸರಕಾರಗಳಲ್ಲಿ ಹಣಕಾಸು ಮಂತ್ರಿಗಳಾಗಿದ್ದವರಿಂದ ಈಗ ಇಂತಹ ಕಾಳಜಿ ತುಸು ವಿಚಿತ್ರವೆನಿಸಿದರೂ, ಸ್ವಾಗತಾರ್ಹವೇ.

ನಿಜ, ಅವರು ವಿಶ್ವ ಆರೋಗ್ಯ ಸಂಘಟನೆಯ ದಕ್ಷಿಣ-ಪೂರ್ವ ಏಶ್ಯಾ ಪ್ರಾದೇಶಿಕ ಸಮಿತಿಯ ಅಧಿವೇಶನದ ಉದ್ಘಾಟನಾ ಭಾಷಣದಲ್ಲಿ ಆಡಿದ ಮಾತುಗಳಿವು ಎಂದು ಯುಪಿಎ-2 ಸರಕಾರ ಆ ಬಗ್ಗೆ ತಲೆ ಕೆಡಿಸಿಕೊಳ್ಳದು.

ರಾಷ್ಟ್ರಪತಿಗಳು ದಕ್ಷಿಣ ಪೂರ್ವ ಏಶ್ಯಾದಲ್ಲಿ ಆರೋಗ್ಯದ ಮೇಲಿನ ತಲಾ ಖರ್ಚು ಕೇವಲ 3.8ಶೇ., ಇದು ಜಗತ್ತಿನಲ್ಲೇ ಅತಿ ಕಡಿಮೆ ಎಂದೂ ಹೇಳಿದರು. ಭಾರತದಲ್ಲಿಯೂ ಇದು 3.9ಶೇ.ವಿದ್ದರೂ, ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಖಾಸಗೀ ಖರ್ಚು ಎಂಬುದರ ಬಗ್ಗೆಯೂ ಅವರು ಆತಂಕ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಸಾರ್ವತ್ರಿಕ ಆರೋಗ್ಯ ವ್ಯವಸ್ಥೆಯೇ ಏಕಮಾತ್ರ ಪರಿಹಾರವೆಂದೂ ಅವರು ಹೇಳಿದರು.

ಆದರೆ ಖಾಸಗೀಕರಣವೇ ಎಲ್ಲಕ್ಕೂ ದಿವ್ಯೌಷಧ, ಸಾರ್ವತ್ರಿಕ ವ್ಯವಸ್ಥೆಗಳಲ್ಲಿ ಹಣ ಪೋಲಾಗುತ್ತದೆಯಾದ್ದರಿಂದ 'ಟಾರ್ಗೆಟೆಡ್' ವ್ಯವಸ್ಥೆಗಳನ್ನೇ ತರಬೇಕು ಎಂದು ಟೊಂಕ ಕಟ್ಟಿ ನಿಂತಿರುವ, ಆಮೂಲಕ ಜನಸಾಮಾನ್ಯರಿಗಾಗಿ ಇರುವ ಸಬ್ಸಿಡಿಗಳ ಕಡಿತವೇ ಪರಮ ಧ್ಯೇಯವಾಗಿರುವ ಒಂದು ವ್ಯವಸ್ಥೆಯಲ್ಲಿ ಅವರ ಈಗಿನ ಆತಂಕಗಳಿಗೆ ಏನಾದರೂ ಅರ್ಥವಿದೆಯೇ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಜಗದಗಲ

ಶರತ್‌ಚಂದ್ರ


ಸಿರಿಯಾ ಆಕ್ರಮಣಕ್ಕೆ ಸದ್ಯದ ತಡೆ

ಸಿರಿಯಾದ ಮೇಲೆ ಕವಿದಿದ್ದ ಯುದ್ಧದ ಕಾರ್ಮೋಡಗಳು ಸರಿಯಲಾರಂಭಿಸಿವೆ. ಅಮೆರಿಕದ ಒಳಗೆ ಮತ್ತು ಜಗತ್ತಿನಾದ್ಯಂತ ಸಿರಿಯಾ ಅತಿಕ್ರಮಣಕ್ಕೆ ಜನರ ಪ್ರಬಲ ವಿರೋಧ ಮತ್ತು ರಶ್ಯದ ಜಾಣ ರಾಜತಾಂತ್ರಿಕ ನಡೆ ಸದ್ಯಕ್ಕಂತೂ ಯುದ್ಧವನ್ನು ತಪ್ಪಿಸಿದೆ. ಆದರೆ ಇನ್ನೂ ಹಲವು ತೊಡಕುಗಳು ಉಳಿದಿವೆ. ಸಿರಿಯಾದ ಮೇಲೆ ಯುದ್ಧವನ್ನು ಸದ್ಯಕ್ಕಂತೂ ತಪ್ಪಿಸುವುದರಲ್ಲಿ ಯುದ್ಧ ವಿರೋಧಿ ಚಳುವಳಿ ದೊಡ್ಡ ಪಾತ್ರ ವಹಿಸಿದೆ ಎಂಬುದನ್ನು ಮಾಧ್ಯಮಗಳು ಮುಚ್ಚಿಡುತ್ತಿವೆ.

ಬ್ರಿಟಿಷ್ ಪಾರ್ಲಿಮೆಂಟ್ ಸಿರಿಯಾ ಯುದ್ಧದ ಬಗ್ಗೆ ನಿರ್ಣಯ ಪರಿಶೀಲನೆಗೆ ತೆಗೆದುಕೊಂಡ ದಿನ (ಅಗಸ್ಟ್ 27) ಬ್ರಿಟನಿನಾದ್ಯಂತ ಭಾರಿ ಯುದ್ಧ-ವಿರೋಧಿ ಪ್ರದರ್ಶನಗಳು ನಡೆದವು. ಬ್ರಿಟಿಷ್ ಜನತೆಯ ಬಲವಾದ ಯುದ್ಧ-ವಿರೋಧಿ ಭಾವನೆ ಬ್ರಿಟಿಷ್ ಪಾರ್ಲಿಮೆಂಟ್ ನಿರ್ಣಯವನ್ನು ತಿರಸ್ಕರಿಸುವುದರಲ್ಲಿ ದೊಡ್ಡ ಪಾತ್ರ ವಹಿಸಿತು. ಬ್ರಿಟಿಷ್ ಪಾರ್ಲಿಮೆಂಟ್ ಯುದ್ಧ ನಿರ್ಣಯವನ್ನು ತಿರಸ್ಕರಿಸಿದ್ದರಿಂದ, ಅಮೆರಿಕದ ಅಧ್ಯಕ್ಷ ಒಬಾಮ ಸಹ ಅಮೆರಿಕನ್ ಕಾಂಗ್ರೆಸ್ ಅನುಮತಿ ಪಡೆಯುವ ಒತ್ತಡಕ್ಕೊಳಗಾದರು. ಅಗಸ್ಟ್ 31ರಂದು ಅಮೆರಿಕದಾದ್ಯಂತ 'ಸಿರಿಯಾ ಯುದ್ಧ ಬೇಡ' ಎಂಬ ಘೋಷಣೆಯಡಿಯಲ್ಲಿ ಭಾರೀ ಪ್ರದರ್ಶನಗಳು ನಡೆದವು. ಭಾರತ ಸೇರಿದಂತೆ ಜಗತ್ತಿನ ಹಲವು ಕಡೆ ಸಿರಿಯಾ ಯುದ್ಧ-ವಿರೋಧಿ ಪ್ರದರ್ಶನಗಳು ನಡೆದವು.

ಅಮೆರಿಕದಲ್ಲಿ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ಶೇ.60ಕ್ಕೂ ಹೆಚ್ಚು ಜನ ಸಿರಿಯಾದ ಮೇಲೆ ದಾಳಿಯನ್ನು ವಿರೋಧಿಸುತ್ತಿದ್ದಾರೆ. ಅಫ್ಘಾನಿಸ್ತಾನ, ಇರಾಕ್, ಲಿಬ್ಯಾಈ ಪ್ರಬಲ ಯುದ್ಧ-ವಿರೋಧಿ ಭಾವನೆಯಿಂದಾಗಿ ಅಮೆರಿಕನ್ ಕಾಂಗ್ರೆಸ್ ಸಹ ಸಿರಿಯಾ ದಾಳಿ ನಿರ್ಣಯವನ್ನು ತಿರಸ್ಕರಿಸುವುದು ಹೆಚ್ಚು ಕಡಿಮೆ ಖಚಿತವಾಗಿತ್ತು. ಒಬಾಮ ಇಕ್ಕಟ್ಟಿಗೆ ಸಿಲುಕಿದ್ದರು. ಈ ಸನ್ನಿವೇಶದಲ್ಲಿ ಜಾಣ ರಶ್ಯನ್ ರಾಜತಾಂತ್ರಿಕ ನಡೆ ಒಬಾಮರನ್ನು ಈ ಇಕ್ಕಟ್ಟಿನಿಂದ ಬಿಡಿಸಿತು. ಸಿರಿಯಾದ ಮೇಲೆ ದಾಳಿಗೂ ತಡೆ ಹಾಕಿತು. ಸಿರಿಯಾ ರಾಸಾಯನಿಕ ಅಸ್ತ್ರಗಳನ್ನು 'ಅಂತರ್ರಾಷ್ಟ್ರೀಯ ಸಮುದಾಯ'ದ ನಿಯಂತ್ರಣಕ್ಕೆ ಕೊಡಬೇಕು. ಇಲ್ಲದಿದ್ದರೆ ಯುದ್ಧ ಅನಿವಾರ್ಯ ಎಂದ ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಅವರ ಹೇಳಿಕೆಯ ಒಂದು ಎಳೆ ಹಿಡಿದು, ರಶ್ಯನ್ ವಿದೇಶ ಮಂತ್ರಿ ಈ ಪ್ರಸ್ತಾವವನ್ನು ಮುಂದಿಟ್ಟರು.

ಅಮೆರಿಕನ್ ಮಿಲಿಟರಿ ಕಾರ್ಯಾಚರಣೆ ನಿಲ್ಲಿಸುವುದಾದರೆ ಸಿರಿಯಾದ ರಾಸಾಯನಿಕ ಅಸ್ತ್ರಗಳನ್ನು 'ಅಂತರ್ರಾಷ್ಟ್ರೀಯ ಸಮುದಾಯ'ದ ನಿಯಂತ್ರಣಕ್ಕೆ ಕೊಡಬೇಕು. ಎಂಬ ಪ್ರಸ್ತಾವಕ್ಕೆ ಸಿರಿಯಾವನ್ನು ಒಪ್ಪಿಸಲು ತಾನು ಸಿದ್ಧ ಎಂಬುದು ರಶ್ಯನ್ ಪ್ರಸ್ತಾವವಾಗಿತ್ತು.



ಸಿರಿಯಾದ ಅಧ್ಯಕ್ಷ ಈ ಪ್ರಸ್ತಾವಕ್ಕೆ ತನ್ನ ಬೆಂಬಲ ಇದೆ ಎಂದು ಘೋಷಿಸಿದರು. ಇಕ್ಕಟ್ಟಿನಲ್ಲಿದ್ದ ಒಬಾಮಗೆ ಈ ಪ್ರಸ್ತಾವ ಮುಳುಗಿ ಹೋಗುತ್ತಿದ್ದವನಿಗೆ ಒಂದು ಕಡ್ಡಿ ಸಿಕ್ಕಂತಾಯಿತು. ಅಮೆರಿಕನ್ ಕಾಂಗ್ರೆಸಿನ ಮುಂದೆ ಇದ್ದ ಯುದ್ಧ ನಿರ್ಣಯದ ಪರಿಶೀಲನೆ ಮುಂದೆ ಹಾಕಲು ಒಪ್ಪಿಕೊಂಡರು. ಈ ಪ್ರಸ್ತಾವದ ವಿವರಗಳನ್ನು ಮತ್ತು ಸಿರಿಯಾ ಆಂತರಿಕ ಯುದ್ಧ ನಿಲ್ಲಿಸುವ ಪ್ರಯತ್ನದ ಭಾಗವಾಗಿ ಜಿನಿವಾದಲ್ಲಿ ಅಂತರ್ರಾಷ್ಟ್ರೀಯ ಸಭೆಯೊಂದನ್ನು ರಶ್ಯ ಏರ್ಪಡಿಸಿದೆ. ಅದರಲ್ಲಿ ಭಾಗವಹಿಸಲು ಅಮೆರಿಕ ಸೇರಿದಂತೆ ಎರಡೂ ಪಕ್ಷಗಳು ಒಪ್ಪಿಕೊಂಡಿದೆ. ಭಾರತ ಸರ್ಕಾರ ಸೇರಿದಂತೆ ಈ ಪ್ರಸ್ತಾವಕ್ಕೆ ಪ್ರಬಲ ಅಂತರ್ರಾಷ್ಟ್ರೀಯ ಬೆಂಬಲ ವ್ಯಕ್ತವಾಗಿದೆ.

ಈ ಪ್ರಸ್ತಾವದಿಂದ ಸದ್ಯದ ಬಿಕ್ಕಟ್ಟು ಬಗೆಹರಿದಿದ್ದರೂ ಇನ್ನೂ ಹಲವು ತೊಡಕುಗಳಿವೆ. ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸಿನ ಸರ್ಕಾರದ ಒಳಗೆ ಮತ್ತು ಹೊರಗಿರುವ ಯುದ್ಧಕೋರ ಶಕ್ತಿಗಳು (ಮತ್ತು ಇಸ್ರೇಲ್, ಇಸ್ರೇಲ್-ಪರ ಲಾಬಿಗಳು) ಈ ಪ್ರಸ್ತಾವದ ಕಾರ್ಯಸಾಧ್ಯತೆ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಿವೆ. ಯುದ್ಧದ ಬೆದರಿಕೆಯಿಂದಷ್ಟೇ ಸಿರಿಯಾ ಈ ಪ್ರಸ್ತಾವಕ್ಕೆ ಒಪ್ಪಿಕೊಂಡಿದೆ. ಯುದ್ಧದ ಬೆದರಿಕೆ ಹಿಂದೆ ಸರಿದ ಕೂಡಲೇ ಸಿರಿಯಾ ಇದರ ಜಾರಿಯಲ್ಲಿ ತೊಡಕುಗಳನ್ನು ಉಂಟು ಮಾಡಬಹುದು. ಆದ್ದರಿಂದ ಯುದ್ಧದ ಬೆದರಿಕೆ ಮುಂದುವರೆಯಬೇಕು ಎಂದು ಇವು ವಾದಿಸುತ್ತಿವೆ. ನಿಗದಿತ ಅವಧಿಯೊಳಗೆ ಸಿರಿಯಾ ಈ ಪ್ರಸ್ತಾವದ ಜಾರಿ ಮಾಡದಿದ್ದರೆ ವಿಶ್ವಸಂಸ್ಥೆ ಅಧ್ಯಾಯ 6ರಂತೆ ಮಿಲಿಟರಿ ಕಾರ್ಯಾಚರಣೆಗೆ ಅವಕಾಶ ಕೊಡಬೇಕು ಎನ್ನುವ ನಿರ್ಣಯವನ್ನು ಫ್ರಾನ್ಸ್ ಈಗಾಗಲೇ ಮಂಡಿಸಿದೆ. ಇದಕ್ಕೆ ಒಪ್ಪಿಗೆಯನ್ನು ಜಿನಿವಾ ಮಾತುಕತೆಗೆ ಪೂರ್ವಶರತ್ತು ಆಗಿಸಲು ಈ ಶಕ್ತಿಗಳು ಪ್ರಯತ್ನಿಸುತ್ತಿವೆ. ರಶ್ಯ ಮತ್ತು ಚೀ
ಇದಕ್ಕೆ ಒಪ್ಪುತ್ತಿಲ್ಲ.

ಎಲ್ಲವನ್ನೂ ಜಿನಿವಾ ಮಾತುಕತೆಯ
ಬಗೆಹರಿಸಬೇಕು. ಯಾವುದೇ ಸಂದರ್ಭದ
ವಿಶ್ವಸಂಸ್ಥೆ ಅಧ್ಯಾಯ 6ರಂತೆ ಮಿಲಿಟ
ಕಾರ್ಯಾಚರಣೆಗೆ ತಾವು ಬೆಂಬ
ನೀಡುವುದಿಲ್ಲ. ವಿಟೋ ಮಾಡುತ್ತೇ
ಎಂದಿದ್ದಾರೆ. ಎಲ್ಲಾ ರಾಸಾಯನಿ
ಅಸ್ತ್ರಗಳಿರುವ ಜಾಗ ತೋರಿಸಲಾಗಿದೆಯೆ
ಎಲ್ಲಾ ರಾಸಾಯನಿಕ ಅಸ್ತ್ರಗಳ ವಿವ
ಕೊಡಲಾಗಿದೆಯೇ, ಅದರ ನಾಶ ಹೇ
ಎಲ್ಲಿ ಮಾಡುವುದು ಇತ್ಯಾದಿ ಪ್ರಾಯೋಗಿ
ಸಮಸ್ಯೆಗಳಲ್ಲೂ ಎರಡೂ ಪಕ್ಷಗಳ ನಡು
ವಿವಾದ ಹುಟ್ಟುವ ಸಂಭವ ಇದೆ. ಆದ
ಇವೆಲ್ಲ ಪರಿಹರಿಸಬಹುದಾದ ಸಮಸ್ಯೆಗಳ
ಸಿರಿಯಾ ಈ ನಡುವೆ ರಾಸಾಯನಿಕ ಅ
ಬಗೆಗಿನ ಅಂತರ್ರಾಷ್ಟ್ರೀಯ ಒಪ್ಪಂದಕ್ಕೆ ಸ
ಹಾಕಲೂ ಒಪ್ಪಿದೆ. ಸಿರಿಯಾದ ನೆರೆಯ
ಇಸ್ರೇಲ್ ಈ ಒಪ್ಪಂದಕ್ಕೆ ಸಹಿ ಹಾಕಿದೆ. ಆದ
ರೆ ಸಹಿ ಹಾಕಿದ 20 ವರ್ಷಗಳ ನಂತರವ
ಅದರ ಪಾರ್ಲಿಮೆಂಟಿನ ಅಂಗೀಕಾರ ಸಿಕ್ಕಿ
ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು
ಆದರೆ ಅಮೆರಿಕ ಹೇಳುವ 'ಅಂತರ್ರಾಷ್ಟ್ರೀಯ
ಸಮುದಾಯ'ಕ್ಕೆ ಇದರ ಬಗ್ಗೆ ಯಾವುದೆ
ಆತಂಕ ಇಲ್ಲ. ಇಸ್ರೇಲಿನ ರಾಸಾಯನಿ
(ಅಥವಾ ಅಣು) ಅಸ್ತ್ರಗಳು 'ಅಂತರ್ರಾಷ್ಟ್ರೀಯ
ಸಮುದಾಯ'ದ 'ಶಾಂತಿ ಮತ್ತು ಸುವ್ಯವಸ್ಥೆ'ಗೆ
ಅಪಾಯ ಸಹ ಅದಕ್ಕೆ ಕಾಣುತ್ತಿಲ್ಲ.

ಯುದ್ಧ-ವಿರೋಧಿ ಸಾಮ್ರಾಜ್ಯಶಾಹಿ-
ವಿರೋಧಿ ಚಳುವಳಿ ಮತ್ತು ಭಾರತ ಸರ್ಕಾರ
ಜಿನಿವಾ ಮಾತುಕತೆಗಳ ಮೂಲಕವೇ ಸಿರಿಯಾ
ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಎರಡೂ
ಪಕ್ಷಗಳ ಮೇಲೆ ಒತ್ತಡ ಹೇರಬೇಕು. ●

50 ವರ್ಷಗಳಲ್ಲಿ 'ಕಿಂಗ್ ಕನಸು' ನನಸಾಗಿದೆಯೇ ?

ಡಾ. ಮಾರ್ಟಿನ್ ಲೂಥರ್ ಕಿಂಗ್ ಅಮೆರಿಕದಲ್ಲಿ ಕರಿಯರ ಸಮಾನ ನಾಗರಿಕತೆಯ ಹಕ್ಕಿಗೆ ಚಳುವಳಿಯ ನಾಯಕತ್ವ ವಹಿಸಿದವರು. ಅಮೆರಿಕದ ಕ-ರಿಯರ 'ಅಂಬೇಡ್ಕರ್' ಎಂದೂ ಅವರನ್ನು ಕರೆಯಬಹುದು. 1950-60ರ ದಶಕದಲ್ಲಿ ನಡೆದ ಕರಿಯರ ಸಮಾನ ನಾಗರಿಕತೆಯ ಹಕ್ಕಿಗೆ ಚಳುವಳಿಯ ಮೇರುಬಿಂದುವಾಗಿ ವಾಶಿಂಗ್ಟನ್‌ಗೆ ಕರಿಯರ 'ಉದ್ಯೋಗ ಮತ್ತು ಸ್ವಾತಂತ್ರ್ಯಕ್ಕೆ ಜಾಥಾ' ಮತ್ತು ಭಾರೀ ರ್‍ಯಾಲಿ ಸಂಘಟಿಸಲಾಗಿತ್ತು. ವಾಶಿಂಗ್ಟನ್‌ನ ಲಿಂಕನ್ ಸ್ಮಾರಕದೆದುರು 1963 ಅಗಸ್ಟ್ 28ರಂದು ನಡೆದ ಈ ರ್‍ಯಾಲಿಯಲ್ಲಿ ಡಾ. ಕಿಂಗ್ ಮಾಡಿದ 'ನಾನೊಂದ ಕನಸ ಕಂಡೆ' ಪ್ರಸಿದ್ಧವಾಗಿದೆ. ಈ ಜಾಥಾ ಮತ್ತು ರ್‍ಯಾಲಿಯಲ್ಲಿ ಎರಡುವರ ಲಕ್ಷ ಜನ ಭಾಗವಹಿಸಿದ್ದರು. ಆಗ ಅಮೆರಿಕನ ಅತ್ಯಂತ ದೊಡ್ಡ ರ್‍ಯಾಲಿಯಾಗಿತ್ತು. ಸ್ವಲ್ಪ ಸಮಯದಲ್ಲೇ ಡಾ. ಕಿಂಗ್ ಅವರ ಕೊಲೆಯಾಯಿತು. ಇದರ ಫಲವಾಗಿ ಅಮೆರಿಕದಲ್ಲಿ ಕರಿಯರ ಸಮಾನತೆ ಮನ್ನಿಸುವ ಹಲವು ಕಾನೂನುಗಳು ಬಂದವು. ಅದ-ರಿಂದ ಕರಿಯರ ಪರಿಸ್ಥಿತಿ ಉತ್ತಮಗೊಂಡಿತು ಎಂದು ಹೇಳಲಾಗುತ್ತದೆ.

ಈ ಚಾರಿತ್ರಿಕ ರ್‍ಯಾಲಿ ಮತ್ತು ಡಾ.ಕಿಂಗ್



ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಜಸ್ತಾನ-ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘದ ಚುನಾವಣೆ


ಎಸ್‌ಎಫ್‌ಐ ಜಯಭೇರಿ

ಗುಣಮಟ್ಟದ ಶಿಕ್ಷಣ ಹಾಗೂ ಪ್ರಜಾಸತ್ತಾತ್ಮಕ ಾತಾವರಣಕ್ಕೆ ಹಿಮಾಚಲ ಪ್ರದೇಶ ಶ್ವವಿದ್ಯಾಲಯ ಹೆಸರಾಗಿದೆ. 1970ರಲ್ಲಿ ್ರಾರಂಭವಾದಾಗಿನಿಂದ ಇಲ್ಲಿಯವರೆಗು ರ್ಥಿಕವಾಗಿ-ಸಾಮಾಜಿಕವಾಗಿ ಹಿಂದುಳಿದ ದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ್ನತ ಶಿಕ್ಷಣವನ್ನು ನೀಡುತ್ತಾ ಬಂದಿದೆ. ೇಶದಲ್ಲಿಯೇ ಅತ್ಯಂತ ಕಡಿಮೆ ಶುಲ್ಕದಲ್ಲಿ ನ್ನತ ಶಿಕ್ಷಣ ನೀಡುತ್ತಿರುವ ಎರಡನೇ ಶ್ವವಿದ್ಯಾಲಯ ಇದು. ಈ ಕಾರಣ-್ಕಾಗಿಯೇ ಅತ್ಯಂತ ಹೆಚ್ಚು (ಶೇ.70ರಷ್ಟು) ದ್ಯಾರ್ಥಿನಿಯರು ವಿ.ವಿ. ಯಲ್ಲಿ ಶಿಕ್ಷಣ ಪಡೆ-ಯುತ್ತಿದ್ದಾರೆ. ಪ್ರಜಾಸತ್ತಾತ್ಮಕ ವಾತಾವರಣ ಾಗೂ ಕಡಿಮೆ ಶುಲ್ಕ ನೀತಿ ಇವುಗಳು ಾಜ್ಯವನ್ನಾಳಿದ ಸರ್ಕಾರಗಳು ಪ್ರೀತಿಯಿಂದ ೀಡಿದ ಕೊಡುಗೆಗಳೇನಲ್ಲ. ಬದಲಾಗಿ ಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳು ಡೆಸಿದ ಸಮರಶೀಲ ಚಳುವಳಿಯಿಂದಾಗಿ ಡೆದ ಹಕ್ಕುಗಳಾಗಿವೆ. ಕಾಂಗ್ರೆಸ್ ಹಾಗೂ ಜೆಪಿ ಸರ್ಕಾರಗಳು ಜಾರಿಗೆ ತರುತ್ತಿದ್ದ ದ್ಯಾರ್ಥಿ ವಿರೋಧಿ ನೀತಿಗಳನ್ನು ಧಿಸಿ ನಿರಂತರ ಹೋರಾಟ ನಡೆಸಿ ಂತಹ ನೀತಿಗಳನ್ನು ಹಿಮ್ಮೆಟ್ಟಿಸಲಾಗಿದೆ. ೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ರುತ್ತಿರುವ ವಿದ್ಯಾರ್ಥಿ ವಿರೋಧಿ ನೀತಿಗಳು ಾಗೂ ನವ ಉದಾರೀಕರಣ ನೀತಿಗಳನ್ನು ಮಾಚಲ ಪ್ರದೇಶ ವಿ.ವಿ. ವಿದ್ಯಾರ್ಥಿಗಳು ುತ್ತೊಮ್ಮೆ ತಿರಸ್ಕರಿಸಿದ್ದಾರೆ.

ಇತ್ತೀಚೆಗೆ ಶಿಮ್ಲಾದಲ್ಲಿರುವ ಹಿಮಾಚಲ ್ರದೇಶ ವಿಶ್ವವಿದ್ಯಾಲಯದಲ್ಲಿ ನಡೆದ ದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಸ್‌ಎಫ್‌ಐ ಸಂಘಟನೆ 23ನೇ ಬಾರಿ ಯಭೇರಿ ಬಾರಿಸಿದೆ. ಆಡಳಿತ ರೂಢ ಂಗ್ರೇಸ್ ಸರ್ಕಾರದ ಬಾಲಂಗೋಚಿ ಂಘಟನೆ ಎನ್‌ಎಸ್‌ಯುಐ ಹಾಗು ಬಿವಿಪಿ ಸಂಘಟನೆಗಳ ನಿರಂತರ ಾಳಿಗಳನ್ನು ಎದುರಿಸಿ ದೊಡ್ಡ ಸಂಖ್ಯೆಯ ಸ್ಥಾನಗಳನ್ನು ಎಸ್‌ಎಫ್‌ಐ ಜಯಿಸಿದೆ. ವಿಶ್ವವಿದ್ಯಾಲಯದ ನಾಲ್ಕು ಕೇಂದ್ರೀಯ ಸ್ಥಾನಗಳಲ್ಲಿ ಅ ಧ್ಯಕ್ಷರಾಗಿ ರಾಜನ್ ಹರ್ಟಾ, ಉಪಾಧ್ಯಕ್ಷರಾಗಿ ಗೋಪಾಲ್ ಸಿಂಗ್, ಕಾರ್ಯದರ್ಶಿಯಾಗಿ ಪಿಯುಶ್ ಸೇವಾಲ್, ಜಂಟಿ ಕಾರ್ಯದರ್ಶಿಯಾಗಿ ಮೋನಿಕಾ ಧಡ್ಡಾ ಆಯ್ಕೆಯಾಗಿದ್ದಾರೆ. ಈ ನಾಲ್ಕೂ ಸ್ಥಾನಗಳಲ್ಲಿ ನೇರವಾಗಿ ಎಬಿವಿಪಿ ಅಭ್ಯರ್ಥಿಗಳನ್ನು ಸೋಲಿಸಿ ಎಸ್‌ಎಫ್‌ಐ ಸಂಗಾತಿಗಳು ಜಯಿಸಿದ್ದಾರೆ. ಅಲ್ಲದೇ ವಿಶ್ವವಿದ್ಯಾಲಯದ 50 ವಿಭಾಗ(ಡಿಪಾರ್ಟ್‌ಮೆಂಟ್)ಗಳಲ್ಲಿ ವಿಭಾಗವಾರು ಪ್ರತಿನಿಧಿಗಳಿಗೆ ನಡೆದ ಚನಾವಣೆಯಲ್ಲಿ 32 ವಿಭಾಗಗಳಲ್ಲಿ ಎಸ್‌ಎಫ್‌ಐ ಅಭ್ಯರ್ಥಿಗಳು ಗೆಲುವನ್ನು ಸಾಧಿಸಿದ್ದಾರೆ.

ವಿವಿಧ ಕಾಲೇಜುಗಳಲ್ಲಿ 200 ಕೇಂದ್ರೀಯ ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಎಸ್‌ಎಫ್‌ಐ 74 ಸ್ಥಾನಗಳಲ್ಲಿ ಗೆಲುವು ಕಂಡಿದೆ. ಐದು ಕಾಲೇಜುಗಳಲ್ಲಿ ಕೂದಲೆಳೆ ಅಂತರದಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಸೋತಿದ್ದು, ಉಳಿದ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ರಾಜ್ಯದ ಮಾಜಿ ಮುಖ್ಯಮಂತ್ರಿ ಪ್ರೇಂ ಕುಮಾರ್ ಧುಮಾಲ್‌ರವರ ವಿಧಾನಸಭಾ ಕ್ಷೇತ್ರ ಹಾಗೂ ಕಾಂಗ್ರೇಸ್ ಅಧ್ಯಕ್ಷರ ಸ್ವಂತ ಊರಾದ ಹಮೀರ್‌ಪುರದಲ್ಲಿ ಎನ್‌ಎಸ್‌ಯುಐ ಹಾಗೂ ಎಬಿವಿಪಿ ಸಂಘಟನೆಗಳ ಅನೈತಿಕ ಹೊಂದಾಣಿಕೆಯ ಮಧ್ಯೆಯೇ ಎಸ್‌ಎಫ್‌ಐ 15 ಕೇಂದ್ರೀಯ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಗಮನಿಸಬೇಕಾದ ಅಂಶವೆಂದರೆ ಕಳೆದ ಒಂದು ವರ್ಷದ ಹಿಂದೆ ಹಮೀರ್‌ಪುರದಲ್ಲಿ ಎಬಿವಿಪಿ ಮುಖಂಡರು ನಡೆಸುತ್ತಿದ್ದ ರ್ಯಾಗಿಂಗ್ ವಿರೋಧಿಸಿ ಪ್ರತಿಭಟಿಸಿದ್ದ ಎಸ್‌ಎಫ್‌ಐ ಮುಖಂಡ ರೋಹಿತ್‌ನನ್ನು ಎಬಿವಿಪಿ ಮುಖಂಡರು ಕೊಲೆ ಮಾಡಿದ್ದರು. ಇಂತಹ ಧಾಳಿಗಳನ್ನು ಎದುರಿಸಿ ವಿದ್ಯಾರ್ಥಿ ಸಂಘಗಳ ಚುನಾವಣೆಯಲ್ಲಿ ಗೆಲುವು ಸಾಧಿಸಲಾಗಿದೆ.



ಆಡಳಿತಾರೂಢ ಕಾಂಗ್ರೆಸ್ ಮುಖ್ಯಮಂತ್ರಿ ವೀರಭದ್ರಸಿಂಗ್‌ರವರ ಜಿಲ್ಲೆಯಾದ ಮಂಡಿಯಲ್ಲಿಯೂ ಪ್ರಬಲ ಪೈಪೋಟಿ ನೀಡಲಾಗಿದೆ. ರಾಜ್ಯದ ಹಲವೆಡೆ ಚುನಾವಣೆಗೆ ಸ್ಪರ್ಧಿಸಿದ್ದ ಎಸ್‌ಎಫ್‌ಐ ಮುಖಂಡರನ್ನು ಕಾಂಗ್ರೆಸ್ ಹಾಗೂ ಬಿಜೆಪಿ ಗೂಂಡಾಗಳು ಅಪಹರಿಸಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ವಿದ್ಯಾರ್ಥಿ ಸಮುದಾಯ ಎಸ್‌ಎಫ್‌ಐ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಾರೆ.

ಈ ಹಿಂದೆಯೂ ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯದಲ್ಲಿ ಇಂತಹ ಅನೇಕ ಧಾಳಿ ಮತ್ತು ಹಿಂಸಾಚಾರ ನಡೆಸಿದ ಎಬಿವಿಪಿ ಮುಖಂಡರನ್ನು ಬಂಧಿಸುವುದನ್ನು ಬಿಟ್ಟು 26 ಜನ ಎಸ್‌ಎಫ್‌ಐ ರಾಜ್ಯ ಮುಖಂಡರ ಮೇಲೆ ಸುಳ್ಳು ಮೊಕದ್ದಮೆಯನ್ನು ಹಾಕಿ ಜೈಲಿಗೆ ತಳ್ಳಲಾಗಿತ್ತು. ಅಲ್ಲದೇ ಆರ್‌ಎಸ್‌ಎಸ್ ಹಾಗೂ ಬಿಜೆಪಿ ಬೆಂಬಲಿಗನಾಗಿದ್ದ ಅಲ್ಲಿನ ಉಪ ಕುಲಪತಿ ತನ್ನ ಸರ್ವಾಧಿಕಾರಿ ಧೋರಣೆಯನ್ನು ಅನುಸರಿಸಿ ವಿದ್ಯಾರ್ಥಿಗಳಿಂದ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದ ವಿದ್ಯಾರ್ಥಿ ಸಂಘವನ್ನು ವಿಸರ್ಜಿಸಿದ್ದರು. ಪ್ರಸ್ತುತ ಫಲಿತಾಂಶ ಉಪಕುಲಪತಿಗೆ ತೀವ್ರ ಮುಖಭಂಗವನ್ನುಂಟು ಮಾಡಿದೆ.

ಉನ್ನತ ಶಿಕ್ಷಣದ ಗುಣಮಟ್ಟದ ಹೆಸರಿನಲ್ಲಿ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದ ಮೂಲಕ ಶಿಕ್ಷಣದ ವ್ಯಾಪಾರೀಕರಣ ಹಾಗೂ ನವ ಉದಾರೀಕರಣ ನೀತಿಗಳನ್ನು ಜಾರಿಗೊಳಿಸುತ್ತಿರುವ ರಾಜ್ಯ ಕಾಂಗ್ರೇಸ್ ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಈ ಚುನಾವಣೆ ಮೂಲಕ ವಿದ್ಯಾರ್ಥಿ ಸಮುದಾಯ ಸ್ಪಷ್ಟವಾಗಿ ತಿರಸ್ಕರಿಸಿದೆ.

ರಾಜಸ್ಥಾನ ಗೆಲುವು: ರಾಜಸ್ತಾನದಲ್ಲಿ ಚುನಾವಣೆ ನಡೆದ ಸು. 150 ಕಾಲೇಜುಗಳ ಪೈಕಿ ಎಸ್‌ಎಫ್‌ಐ 85 ಕಾಲೇಜುಗಳಲ್ಲಿ ಸ್ಪರ್ಧಿಸಿ 67 ಕಾಲೇಜುಗಳಲ್ಲಿ ಜಯ ಸಾಧಿಸಿದೆ. ಅಲ್ಲದೇ ಜೋದ್‌ಪುರ್ ಮತ್ತು ಬಿಕನೇರ್ ವಿವಿಗಳ ಚುನಾವಣೆಯಲ್ಲಿ ಗೆಲುವು ಸಾಧಿಸಿದೆ.

ವರ ‘ನಾನೊಂದ ಕನಸ ಕಂಡೆ’ ಣದ ಸುವರ್ಣ ಉತ್ಸವವನ್ನು ಕದಲ್ಲಿ ಇತ್ತೀಚೆಗೆ ವ್ಯಾಪಕವಾಗಿ ಚರಿಸಲಾಯಿತು. ಆ ಸಂದರ್ಭದಲ್ಲಿ ಭಾವಿಕವಾಗಿಯೇ ಡಾ.ಕಿಂಗ್ ಅಂ- ಕಂಡ ಕನಸು ನನಸಾಗಿದೆಯೇ ಎಂದು ಶ್ಲೇಷಿಸಲಾಯಿತು. ಅಧ್ಯಕ್ಷ ಒಬಾಮ ಹ ಅದರಲ್ಲಿ ಭಾಗಿಯಾಗಿದ್ದರು. ಹಲವು ಧ್ಯಯನಗಳು ಸಮೀಕ್ಷೆಗಳು ಪ್ರಕಟವಾದವು. ವುಗಳೆಲ್ಲದರ ಸಾರಾಂಶ ಎಂದರೆ ಕೆಲವು ತ್ರಗಳಲ್ಲಿ ಪ್ರಗತಿಯಾಗಿದ್ದರೂ, ಕರಿಯರು ದುರಿಸುತ್ತಿದ್ದ ಅಸಮಾನತೆ ಭೇಧಭಾವ ತ್ಯಾಸಗಳು ಕಡಿಮೆಯಾಗಿಲ್ಲ. ಹೆಚ್ಚು ಕಡಿಮೆ ವರ್ಷಗಳ ಹಿಂದೆ ಇದ್ದಷ್ಟೇ ಇದೆ. ಕೆಲವು ತ್ರಗಳಲ್ಲಿ ಹೆಚ್ಚೂ ಆಗಿದೆ. ಕಳೆದ ದಶಕದಲ್ಲಿ ದರಲ್ಲೂ ಒಬಾಮ ಆಡಳಿತದ ಅವಧಿಯಲ್ಲಿ ದು ಇನ್ನಷ್ಟು ಹೆಚ್ಚಾಗಿದೆ. ಡಾ.ಕಿಂಗ್ ಅವರ ಇನ್ನೂ ನನಸಾಗಿಲ್ಲ.

ಯರ ನಿರುದ್ಯೋಗದ ದರ 1963ರಲ್ಲಿ ದ್ದ ಹಾಗೆ ಇದೆ. ಆಗ ಶೇ.10.6 ಇತ್ತು. ಗ ಅಂದರೆ 2013ರಲ್ಲಿ ಶೇ.12.6 ಇದೆ. ಕರಿಯರ ನಿರುದ್ಯೋಗ ದರ ಬಿಳಿಯರ ನಿರುದ್ಯೋಗದ ದರದ ಇಮ್ಮಡಿ ಇದೆ. 50 ವರ್ಷಗಳಲ್ಲಿ ಕರಿಯರ ಸರಾಸರಿ ವಾರದ (ಹಣದುಬ್ಬರ ಸರಿತೂಗಿಸಿದ) ವೇತನ 313 ಡಾಲರಿನಿಂದ 293 ಡಾಲರಿಗೆ ಇಳಿದಿದೆ. ಬಿಳಿಯರ ಮತ್ತು ಕರಿಯರ ನಡುವೆ ಮನೆ ಒಡೆತನದಲ್ಲಿ ವ್ಯತ್ಯಾಸ 1963 ರಲ್ಲಿ ಶೇ. 26.2 (ಬಿಳಿಯರ ಮನೆ ಒಡೆತನ-64.3%- ಕರಿಯರ ಮನೆ ಒಡೆತನ-38.1%) ಇದ್ದಿದ್ದು, 2012ರಲ್ಲಿ 29.7 % (ಬಿಳಿಯರ ಮನೆ ಒಡೆತನ 73.6%- ಕರಿಯರ ಮನೆ ಒಡೆತನ 43.9%)ಕ್ಕೆ ಹೆಚ್ಚಿದೆ. ಕರಿಯ ಶಿಶು ಮರಣ ದರ ಬಿಳಿಯ ಶಿಶು ಮರಣ ದರದ (ಕ-ರಿಯ ಶಿಶು ಮರಣ ಸಾವಿರಕ್ಕೆ 41.5 ಮತ್ತು ಬಿಳಿಯ ಶಿಶು ಮರಣ 22.2) ಎರಡು ಪಟ್ಟು ಇದ್ದಿದ್ದು ಈಗ 2.2 ಪಟ್ಟು (ಸಾವಿರಕ್ಕೆ 11.4 ಮತ್ತು 5.1) ಆಗಿದೆ.


50 ವರ್ಷಗಳಲ್ಲಿ ಬಿಳಿಯ-ಕರಿಯರ ನಡುವೆ ಕಡಿಮೆಯಾಗಿದ್ದರೂ ಇನ್ನು ಸಾಕಷ್ಟು ವ್ಯತ್ಯಾಸಗಳಿರುವ ಕ್ಷೇತ್ರಗಳೆಂದರೆ - ಸರಾಸರಿ ಮನೆಯ ಆದಾಯ, ಸರಾಸರಿ ಆಯುಷ್ಯ. ಕರಿಯರ ಸರಾಸರಿ ಮನೆಯ ಆದಾಯ ಬಿಳಿಯರ ಆದಾಯದ ಶೇ.57 ಇದ್ದಿದ್ದು, 50 ವರ್ಷಗಳಲ್ಲಿ ಶೇ.67ಕ್ಕೇರಿದೆ. ಕರಿಯ ಮತ್ತು ಬಿಳಿಯ ಗಂಡಸರ ಸರಾಸರಿ ಆಯುಷ್ಯದಲ್ಲಿ ಇದ್ದ ವ್ಯತ್ಯಾಸ 6.4 ವರ್ಷದಿಂದ 4.8 ವರ್ಷಕ್ಕೆ ಇಳಿದಿದೆ. ಕರಿಯ ಮತ್ತು ಬಿಳಿಯ ಹೆಂಗಸರ ಸರಾಸರಿ ಆಯುಷ್ಯದಲ್ಲಿ ಇದ್ದ ವ್ಯತ್ಯಾಸ 7.8 ವರ್ಷದಿಂದ 3.3 ವರ್ಷಕ್ಕೆ ದೊಡ್ಡ ಪ್ರಮಾಣದಲ್ಲಿ ಇಳಿದಿದೆ.

ಇದರರ್ಥ ಕರಿಯರ ಪರಿಸ್ಥಿತಿ ಉತ್ತಮವಾಗಿಲ್ಲ ಎಂದಲ್ಲ. ಹೈಸ್ಕೂಲ್ ಮುಗಿಸಿದವರ ಸಂಖ್ಯೆ 50 ವರ್ಷಗಳಲ್ಲಿ ಶೇ.26ರಿಂದ ಶೇ.85ಕ್ಕೇರಿದೆ. ಕಾಲೇಜು ಪದವಿಧರರ ಸಂಖ್ಯೆ 3.9%ದಿಂದ 21.2ಕ್ಕೇರಿದೆ. ಅಮೆರಿಕದ ಕಾಂಗ್ರೆಸ್ ಸದಸ್ಯರ ಸಂಖ್ಯೆ 1 ರಿಂದ 44ಕ್ಕೇರಿದೆ. ಎಲ್ಲಾ ಹಂತದ ರಾಜಕೀಯ ಸ್ಥಾನಗಳಿಗೆ ಆಯ್ಕೆಯಾದವರ ಸಂಖ್ಯೆ 10ಪಟ್ಟಾಗಿದೆ.

ಆದರೆ ಕಳೆದ ದಶಕದ ಆರ್ಥಿಕ ಬಿಕ್ಕಟ್ಟು ಕರಿಯರನ್ನು ಬಿಳಿಯರಿಗಿಂತ ಹೆಚ್ಚು ಗಾಢವಾಗಿ ತಟ್ಟಿದೆ ಎಂಬುದು ಅಸಮಾನತೆ ಬೇಧಭಾವ ಇನ್ನೂ ಗಟ್ಟಿಯಾಗಿ ಉಳಿದುಕೊಂಡಿದೆ. ಏರಲೂ ಆರಂಭವಾಗಿದೆ ಎಂದು ತೋರಿಸುತ್ತದೆ. ಬಿಕ್ಕಟ್ಟಿನ ನಂತರ ಕರಿಯ-ಬಿಳಿಯ ಸರಾಸರಿ ಆದಾಯದ ವ್ಯತ್ಯಾಸ ಶೇ.50ರಷ್ಟು ಹೆಚ್ಚಿದೆ. ಆಸ್ತಿ ನಡುವೆ ವ್ಯತ್ಯಾಸ ಶೇ.10ರಷ್ಟು ಹೆಚ್ಚಿದೆ.

ಅಮೆರಿಕದ ಕರಿಯರ ಪರಿಸ್ಥಿತಿಯನ್ನು ಅವರೇ ಹೇಗೆ ನೋಡುತ್ತಾರೆ ? ಅವರು ಡಾ.ಕಿಂಗ್ ಕನಸು ನನಸಾಗಿರುವ ಬಗ್ಗೆ ಏನಂತಾರೆ ? ಬಿಳಿಯರು ಇದನ್ನು ಬೇರೆ ರೀತಿಯಲ್ಲಿ ನೋಡುತ್ತಾರೆಯೇ ? ಈ ಬಗ್ಗೆ ‘ಪ್ಯೂ ಸಮೀಕ್ಷೆ’ ಕೆಲವು ಅಂಶಗಳನ್ನು ಹೊರಗೆಡವಿದೆ. ಶೇ.32 ಅಂದರೆ ಮೂವರಲ್ಲಿ ಒಬ್ಬ ಕರಿಯ ಮಾತ್ರ (ಶೇ. 48 ಬಿಳಿಯರು) ಡಾ.ಕಿಂಗ್ ಕನಸು ನನಸಾಗುವತ್ತ ‘ಬಹಳ ಪ್ರಗತಿ’ಯಾಗಿದೆ ಅಂತಾರೆ. ಶೇ.79 ಅಂ-ದರೆ ಐವರಲ್ಲಿ ನಾಲ್ಕು ಕರಿಯರು (ಶೇ. 45 ಬಿಳಿಯರು) ಡಾ.ಕಿಂಗ್ ಕನಸು ನನಸಾಗಿಸಲು ‘ಬಹಳಷ್ಟು ಮಾಡಬೇಕಾಗಿದೆ’ ಅಂತಾರೆ.

JANASHAKTHI KANNADA VARA PATRIKE SEP 22, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every ...
Licensed to Post without prepayment License No. WPP




ಮೆಕ್ಕಾ ದಾರಿ

ಖ್ಯಾತ "ದ ರೋಡ್ ಟೂ ಮೆ
ನಾಟಕವನ್ನು ಕನ್ನಡಕ್ಕೆ ರೂಪಾಂ
ನಿರ್ದೇಶಿಸಿ ರಂಗದ ಮೇಲೆ ತಂದ
ಪ್ರಸಿದ್ಧ ರಂಗಕರ್ಮಿ ಪ್ರಸನ್ನರವರು
ಕುರಿತ ಅವರ ಬರಹ

ಹೆಲೆನ್ ಹಳ್ಳಿಗಾಡಿನ ಒಂಟಿ ಮುದುಕಿ, ವಿಧವೆ ಹಾಗೂ ಕಲಾವಿದೆ. ಇವಳ ಕಲಾಜೀವನವು ತೀರ ತಡವಾಗಿ, ಅಂದರೆ ವಯಸ್ಸು ಕಳೆದ ನಂತರ, ವೈಧವ್ಯ ಬಂದನಂತರ, ಆರಂಭವಾದದ್ದು. ಇತ್ತ ಜರಾಮೃತ್ಯುಗಳನ್ನೆದುರಿಸಲಾರದೆ, ಅತ್ತ ಒಂಟಿತನದ ಬಾಳುವೆಯನ್ನು ಸಹಿಸಲಾರದೆ ಕಲಾಸೃಷ್ಟಿಯಲ್ಲಿ ತನ್ನ ಬಿಡುಗಡೆಯ ಹಾದಿಯನ್ನು ಕಂಡುಕೊಳ್ಳುತ್ತಾರೆ ಹೆಲೆನ್. ಹಳೆಯಕಬ್ಬಿಣ, ಗಾಜಿನಚೂರು, ಒಡೆದ ಪಿಂಗಾಣಿಚೂರು, ಸಿಮೆಂಟು ಮರಳು ಇತ್ಯಾದಿ ಮರುಬಳಕೆ ಸಾಮಗ್ರಿಗಳನ್ನೇ ಬಳಸಿ ಆಕೆ ಅಸಾಧಾರಣವಾದ ಹಾಗೂ ಜಾನಪದ ಮಾದರಿಯ ಶಿಲ್ಪಗಳನ್ನು ತನ್ನ ಸುತ್ತಲೂ ಸೃಷ್ಟಿಸಿಕೊಂಡು ಅವುಗಳ ನಡುವೆ ಬದುಕುತ್ತಿದ್ದಾಳೆ. ಅವಳ ಶಿಲ್ಪಗಳ ವೈಶಿಷ್ಟವೆಂದರೆ, ದೀಪದ ಬೆಳಕು ಬಿದ್ದಾಗ ಅವು ಅಸಾಧಾರಣವಾಗಿ ಹೊಳೆಯುತ್ತವೆ ಹಾಗೂ ಪರಸ್ಪರ ಪ್ರತಿಫಲಿಸುತ್ತ ಅದ್ಭುತ ರಮ್ಯ ಲೋಕವೊಂದನ್ನು ಸೃಷ್ಟಿಸುತ್ತವೆ. ತನ್ನ ಈ ಅದ್ಭುತ ರಮ್ಯ ಲೋಕವನ್ನವಳು ಏಕಾಂಗಿಯಾಗಿ ತನದೇ ಕೈಗಳಿಂದ ಸೃಷ್ಟಿಸಿಕೊಂಡಿದ್ದಾಳೆ.


ಅವಳ ಶಿಲ್ಪಗಳಿಗೊಂದು ಘನವಾದ ಉದ್ದೇಶವಿದೆ. ಅವು ಕತ್ತಲೆಯನ್ನು ಹೊಡೆದುಹಾಕುವ ಪ್ರಯತ್ನ ಮಾಡುತ್ತವೆ ಹಾಗೂ ಬೆಳಕನ್ನು ಹುಡುಕಿಕೊಂಡು ಹೊರಡುತ್ತವೆ. ಅವಳ ಪ್ರಕಾರ ಅವಳ ಪಾತ್ರಗಳು, ಮೆಕ್ಕಾದತ್ತ ಪಯಣ ಬೆಳೆಸುವ ಅರಬರ ಕ್ಯಾರವಾನ್‌ಗಳ ಮಾದರಿಯಲ್ಲಿ




ಪೂರ್ವದ ಬೆಳಕಿನತ್ತ ಹೊರಟಿವೆ. ಅವಳ ಶಿಲ್ಪಸಮೂಹದ ಕ್ಯಾರವಾನಿನಲ್ಲಿ, ಚಿತ್ರವಿಚಿತ್ರ ಮಾನವರಿದ್ದಾರೆ ಹಾಗೂ ಒಂಟೆಗಳು, ಗೂಬೆಗಳು, ನವಿಲುಗಳು ಇತ್ಯಾದಿ ಪ್ರಾಣಿಗಳು ಪುರಾಣಸದೃಶವಾಗಿ ನೆರೆದಿವೆ.

ಈ ನಾಟಕದ ಕತೆ ಒಂದು ನಿಜ ಘಟನೆಯೂ ಹೌದು. ಕತೆ ನಡೆಯುವುದು ದಕ್ಷಿಣ ಆಫ್ರಿಕೆಯಲ್ಲಿ. ದಕ್ಷಿಣ ಆಫ್ರಿಕೆಯ ಉತ್ತರಭಾಗದ ಗ್ರಾಮೀಣ ಪ್ರದೇಶವೊಂದರಲ್ಲಿ ಆಗಿಹೋದ ಒಬ್ಬ ಮಹಾನ್ ಕಲಾವಿದೆ ಇವಳು. ದಕ್ಷಿಣ ಆಫ್ರಿಕೆಯ ನೊಬೆಲ್ ಪ್ರಶಸ್ತಿ ವಿಜೇತ ನಾಟಕಕಾರ ಅತೋಲ್ ಫುಗಾರ್ಡ ಬರೆದ 'ರೋಡ್ ಟು ಮೆಕ್ಕ' ಎಂಬ ನಾಟಕದ ಭಾವಾನುವಾದ 'ಮೆಕ್ಕಾ ದಾರಿ'. ಈಕೆ ಸೃಷ್ಟಿಸಿದ ಶಿಲ್ಪಗಳು, ಈಕೆ ಬದುಕಿದ್ದ ಮನೆ, ಎಲ್ಲವನ್ನೂ ಅಲ್ಲಿನ ಸರ್ಕಾರವು ದಕ್ಷಿಣ ಆಫ್ರಿಕಾದ ಬಹುಮುಖ್ಯ ಕಲಾವಸ್ತು ಸಂಗ್ರಹಾಲಯವನ್ನಾಗಿ ಮಾಡಿ ಕಾಯ್ದು-ಕೊಂಡು ಬಂದಿದೆ.

ಹೆಲೆನ್ನಳ ದುರಂತವೆಂದರೆ, ತನ್ನ ಮರುಬಳಕೆ ಶಿಲ್ಪಗಳಿಂದಾಗಿ, ತನಗೇ ಅರಿವಿಲ್ಲದಂತೆ ಅವಳು ತನ್ನ ಸುತ್ತಲ ಸಮುದಾಯದ ಅನುಮಾನಕ್ಕೆ ಗುರಿಯಾಗಿದ್ದಾಳೆ.



ಅವಳಿದ್ದ ಗ್ರಾಮವು ರೂಢಿಗತ ಕ್ರೈಸ್ತ ಸಮಾಜಕ್ಕೆ ಸೇರಿದ್ದು; ಅಲ್ಲಿ ಬಿಳಿಯ ಆಫ್ರಿಕಾನೇರ್ ರೈತರು ಹಾಗೂ ಕ-ರಿಯ ಕೂಲಿಯಾಳುಗಳು ಬದುಕಿದ್ದಾರೆ. ನಮ್ಮದೇ ಭಾರತೀಯ ಮಾದರಿಯ ಒಂದು ಗ್ರಾಮ ವ್ಯವಸ್ಥೆ ಅದು. ಆ ಊರವರಿಗೆ–ಅವರೆಲ್ಲರೂ ಇವಳ ಬಾಲ್ಯ ಸಂಗಾತಿಗಳೇ ಹೌದು–ಇವಳ 'ಮೆಕ್ಕ', ಗೂಬೆ, ಒಂಟೆ, ಬೆಳಕು, ಇತ್ಯಾದಿಗಳು ಕಲಾಕೃತಿಗಳಾಗಿ ಕಾಣುವ ಬದಲು ಕ್ರೈಸ್ತ ವಿರೋಧಿ ಪಾಖಂಡಿತನದ ಅಭಿವ್ಯಕ್ತಿಯಾಗಿ ಕಾಣಿಸುತ್ತದೆ. ಹೆಲೆನ್ ಒಬ್ಬ ಧರ್ಮಭ್ರಷ್ಟಳಾದ ಹಾಗೂ ಅರೆಹುಚ್ಚಿಯಾದ ಮುದುಕಿಯಂತೆ ಕಾಣತೊಡಗುತ್ತಾಳೆ. ಊರ ಹುಡುಗರು ರಾತ್ರಿ ಹೊತ್ತು ಅವಳ ಮನೆಯ ಮೇಲೆ ಕಲ್ಲು ತೂರತೆ-ೂಡಗುತ್ತಾರೆ. ಹೆಲೆನ್ನಳಿಗೆ ಏಕಾಂಗಿತನ ದುಸ್ಸಹವಾಗುತ್ತದೆ. ಅವಳ ಅಸಾಧಾರಣ ಕಲಾಸೃಷ್ಟಿ ಅವಳಿಗೇ ಮುಳುವಾಗತೊಡಗುತ್ತದೆ. ಇದು ನಾಟಕದ ಹಿನ್ನೆಲೆ.



ಮೆಕ್ಕಾ ದಾರಿ ನಾಟಕದ ಮಹತ್ವವಿರುವುದು ಇದರ ಎರಡು ಸ್ತ್ರೀ ಪಾತ್ರಗಳಲ್ಲಿ, ಸ್ತ್ರೀವಾದಿ ಚಿಂತನೆಯನ್ನು ಹಲವು ಮಜಲುಗಳತ್ತ ಕೊಂಡೊಯ್ಯಬಲ್ಲ ಒಂದು ಅಸಾಧಾರಣ ನಾಟಕವಿದು. ಜೊತೆಗೆ ಶ್ರಮಜೀವನದ ಚಿತ್ರಣವೂ ಹೌದು. ಹೆಲೆನ್ ಯುವತಿಯಲ್ಲ, ಸುಂದರಿಯಲ್ಲ, ಮಾತುಗಾರ್ತಿಯಲ್ಲ, ಬಂಡಾಯಗಾರ್ತಿಯಲ್ಲ, ಪೇಟೆ-ಯ ಹೆಂಗಸಲ್ಲ ಅಥವಾ ಬೌದ್ಧಿಕ ಕಸರತ್ತಿನ ಕಲಾವಿದೆಯೂ ಅಲ್ಲ. ಈ ರೂಢಿಸಿಕೊಂಡಿರುವುದು ಶ್ರಮದ ಕಲೆಯನ್ನು, ಮರುಬಳಕೆ ಶಿಲ್ಪಗಳನ್ನು ಹೆಲೆನ್‌ಳ ಅರೆಸುಟ್ಟ ಜರ್ಝರಿತ ಕೈ ಆಧುನಿಕ ಕಲಾವಂತಿಕೆಯ ಪರಿಕಲ್ಪನೆ ಸವಾಲು ಒಡ್ಡಬಲ್ಲ ಒಂದು ಮಹಾನ ಉಪಮೆಯಾಗಿ ನಮಗೆ ಕಾಣುತ್ತವೆ. ಪ್ರಾಯಶ: ಮ್ಯಾಕ್ಸಿಂಗಾರ್ಕಿಯ ಕಾದಂ 'ತಾಯಿ'ಯ ನಂತರದಲ್ಲಿ ಅಷ್ಟೇ ಸಮರ್ಥವಾಗಿ ಮೂಡಿಬಂದಿರುವ ಮತ್ತೊ ಸ್ತ್ರೀಪಾತ್ರವಿದು ಎಂದರೆ ಅತಿಶಯೋಕ್ತಿಯಾಗಲಾರದ

'ತಾಯಿ' ಕಾದಂಬರಿ ರಚಿತವಾದ ಆ ಯುಗವು ಬಡವರ ಪ್ರತಿಭಟನೆಯ ಯುಗ. ಇದು ಜಾಗತೀಕರ ಹಣದುಬ್ಬರದ ಯುಗ, ಸೊ ಯುಗ! ಜಾಗತೀಕರಣದ ಸೊಕ್ಕು ಅದೆಂತಹದ್ದೆಂದರೆ, ಕಲಾವಂತಿಕೆಯ ಹಿರಿಮೆಯನ್ನೆ ಅದು ಹೊಸಕಿಹಾಕಿದೆ ಎಂಬುದನ್ನು ಮಾರುಕಟ್ಟೆಯ ಯಕಶ್ಚಿ ಸರಕನ್ನಾಗಿಸಿಬಿಟ್ಟಿದೆ. ಇಂದಿನ ಕಲಾಕೃ ಸೋಪಿನ ಡಬ್ಬಿಗಳ ಮೇಲೆ, ನಿರೋಧ ಪೊಟ್ಟಣಗಳ ಮೇಲೆ ಟಿವಿ ಜಾಹೀರಾ ನಡುವೆ, ಮೂಗುತೂರಿಸಲು ಹಪಹಪಿಸುತ್ತಿವೆ.

ಕಲಾವಿದರು ಬರಿದೆ ತಲೆ 'ಹರಟೆ ಮಾಡುವ ಹಾಗೂ ಅನುಭವಹೀನರಾ ಬೌದ್ಧಿಕ ಕ್ರಿಮಿಗಳಾಗತೊಡಗಿ ದಂಡುದಂಡಾಗಿ ಸೇರಿಕೊಳ್ಳತೊಡಗಿ ಕಲಾವಂತಿಕೆಯ ಇಂದಿನ ಒಟ್ಟು ಪರಿಸ್ಥಿತಿಗೇ ಸವಾಲಾಗಿ ನಿಲುತ್ತಾಳೆ ಅವಳು ಹೀಗೆ ನಿಲ್ಲುತ್ತಾಳೆ ಎಂಬುದೇ ಅವಳ ಏಕಾಂಗಿತನವೂ ಹೌದು, ಅ ದುರಂತವೂ ಹೌದು. ಹೆಲೆನಳನ್ನು ಚಿತ್ರಿಸುವ ಮೂಲಕ ನಾವು ನಮ್ಮದೇ ಏಕಾಂಗಿತನಕ್ಕೆ ದನಿಗೂಡ ಹೊರಟಿದ

–

(ಕೃಪೆ : ಗೌ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**